ಡಾ. ಕೆ.ಶಿವರಾಮ ಕಾರಂತರ ಆಯ್ದ ಲೇಖನಗಳ ಅರ್ಥಶಾಸ್ತ್ರೀಯ ಅಧ್ಯಯನ

ಒಂದು ಅಂತರ್‌ಶಿಸ್ತೀಯ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ
ಅಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ
ವಿದ್ಯಾಧರ ಎಂ.ವಿ.

ಮಾರ್ಗದರ್ಶಕರು
ಡಾ. ಜೆ.ಕೆ. ರಮೇಶ್ ಎಂ.ಎ.
ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ
ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
೨೦೦೮

ಡಾ.ಕೆ.ಶಿವರಾಮ ಕಾರಂತರ ಆಯ್ದ ಲೇಖನಗಳ ಅರ್ಥಶಾಸ್ತ್ರೀಯ ಅಧ್ಯಯನ

ಒಂದು ಅಂತರ್‌ಶಿಸ್ತೀಯ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
ಸಂಪ್ರಬಂಧ

ಸಂಶೋಧಕ
ವಿದ್ಯಾಧರ ಎಂ.ವಿ.

ಮಾರ್ಗದರ್ಶಕರು
ಡಾ.ಜೆ.ಕೆ.ರಮೇಶ್ ಎಂ.ಎ.
ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ
ತುಂಗಾ ಮಹಾ ವಿದ್ಯಾಲಯ
ತೀರ್ಥಹಳ್ಳಿ.

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
೨೦೦೮

ದೃಢೀಕರಣ ಪತ್ರ

ವಿದ್ಯಾಧರ ಎಂ.ವಿ ಇವರು ಡಾ.ಕೆ.ಶಿವರಾಮ ಕಾರಂತರ ಆಯ್ದ ಲೇಖನಗಳ ಅರ್ಥಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಜೆ.ಕೆ.ರಮೇಶ್)
ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಕನ್ನಡ ವಿಭಾಗ, ತುಂಗಾ ಮಹಾ ವಿದ್ಯಾಲಯ,
ತೀರ್ಥಹಳ್ಳಿ.

ದಿನಾಂಕ: 15-09-2008

ಪ್ರಮಾಣ ಪತ್ರ

ಡಾ.ಕೆ.ಶಿವರಾಮ ಕಾರಂತರ ಆಯ್ದ ಲೇಖನಗಳ ಅರ್ಥಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಸಲ್ಲಿಸಲು ಡಾ.ಜಿ.ಕೆ.ರಮೇಶ್‌ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: 15-09-2008

Vidya MV

(ವಿದ್ಯಾಧರ ಎಂ.ವಿ)
ಎಂ.ಫಿಲ್. ವಿದ್ಯಾರ್ಥಿ
ವಾರಳ, ತೀರ್ಥಮುತ್ತೂರು ಅಂಚೆ
ತೀರ್ಥಹಳ್ಳಿ - 577 432
ಶಿವಮೊಗ್ಗ ಜಿಲ್ಲೆ

[illegible]

[illegible]

[illegible]

[illegible]

[illegible]

[illegible]

ಪರಿವಿಡಿ

[illegible]

ಅಧ್ಯಾಯ 1

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಖ್ಯೆ

ಸಾಮಾನ್ಯವಾಗಿ ಬರಹಗಾರರಾಗಲಿ, ಕಲಾವಿದರಾಗಲಿ ತಮ್ಮ ಕ್ಷೇತ್ರದಾಚೆ ದೃಷ್ಟಿಯನ್ನು ಹಾಯಿಸುವುದಿಲ್ಲ. ಇದಕ್ಕೆ ಕನ್ನಡದ ಖ್ಯಾತ ಸಾಹಿತಿ ಡಾ.ಕೆ.ಶಿವರಾಮ ಕಾರಂತರು ಒಂದು ಅಪವಾದ. ಅವರ ಆಸಕ್ತಿಯನ್ನು ಕೆರಳಿಸದ ವಿಷಯವೇ ಇಲ್ಲ ಎನ್ನಬಹುದು. ಅವರ ಕಣ್ಣು ಹೂವಿನ ಚೆಲುವನ್ನು ನೋಡುತ್ತಿದ್ದರೆ ಮನಸ್ಸು ಅದಕ್ಕೆ ಸಂಬಂಧಿಸಿದ ಶಾಸ್ತ್ರೀಯ ವಿಷಯವನ್ನು ಚಿಂತಿಸುತ್ತದೆ. ಬುದ್ಧಿ, ಭಾವ, ಕಲ್ಪನೆಗಳೆಲ್ಲವು ಸೇರಿಕೊಂಡ ಒಂದು ಶ್ರೀಮಂತ ಸಂಯೋಗ ಅವರ ಮನಸ್ಸು. ಅಂಥ ಮನಸ್ಸು ಹತ್ತಾರು ಬಗೆಯಲ್ಲಿ ದುಡಿದಿದೆ. ಅನ್ವೇಷಣೆಯನ್ನು ನಡೆಸಿದೆ, ಕಲ್ಪನೆಯನ್ನು ಕಟ್ಟಿದೆ, ಭಾವನಾವಿಲಾಸದಲ್ಲಿ ಮೆರೆದಿದೆ, ಹಲವಾರು ಬಗೆಯ ಸಿದ್ಧಿಯನ್ನು ತನ್ನದಾಗಿಸಿಕೊಂಡಿದೆ.

ಕಾರಂತರ ಆಸಕ್ತಿಗಳಿಗೆ ಮಿತಿ, ಮೇರೆಗಳಿಲ್ಲ. ವಾಸ್ತುಶಿಲ್ಪದಿಂದ ಖಗೋಳಶಾಸ್ತ್ರದವರೆಗೆ, ಹೂಗಳ ರಚನೆಯಿಂದ ಪ್ರಾಣಿಗಳ ಜೀವಶಾಸ್ತ್ರದವರೆಗೆ, ಭಾಷೆಯ ಉಗಮದಿಂದ ಶಬ್ದವಿತರಣ ಯಾಂತ್ರಿಕ ತೊಡಕಿನವರೆಗೆ, ಅರ್ಥಶಾಸ್ತ್ರದಿಂದ ರಾಜ್ಯಾಂಗ ವಿಚಾರಗಳವರೆಗೆ, ಭೂಗರ್ಭರಚನೆಯಿಂದ ದೇಹದಲ್ಲಿನ ರಾಸಾಯನಿಕ ಕಾರ್ಯಗಳವರೆಗೆ ಕಾರಂತರ ಆಸಕ್ತಿ ವಿಸ್ತರಿಸಿದೆ. ಸಾಧ್ಯವಿದ್ದಷ್ಟೆಲ್ಲವನ್ನು ತಿಳಿದುಕೊಳ್ಳಬೇಕು ಎಂಬ ಆಕಾಂಕ್ಷೆ, ಅವರ ಅವಿಶ್ರಾಂತ ಪರಿಶ್ರಮದ ಹಿಂದಿನ ಪ್ರಚೋದನೆ.

ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದ್ದ ಕಾರಂತರು ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದ್ದರು. ಸಾಹಿತ್ಯ, ವಿಜ್ಞಾನ, ಇತಿಹಾಸ, ಶಿಲ್ಪಕಲೆ, ಚಿತ್ರಕಲೆ ಮುಂತಾದ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿದ್ದ ಕಾರಂತರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಲವಾರು ರಾಷ್ಟ್ರಗಳನ್ನು ಸಂದರ್ಶಿಸಿದ್ದರು. ತಾನು ಗ್ರಹಿಸಿದ ವಿಷಯಗಳನ್ನು ವಿಭಿನ್ನ ರೀತಿಯ ಸಾಹಿತ್ಯದ ಪ್ರಕಾರಗಳಲ್ಲಿ ಪ್ರಕಟಿಸಿದ್ದಾರೆ. ಎಲ್ಲಾ ಜ್ಞಾನ ಶಾಖೆಗಳಲ್ಲಿ ಪ್ರೌಢಿಮೆಯನ್ನು ಮೆರೆಯಲು ಕಾರಂತರಿಂದ ಸಾಧ್ಯವಾಗದಿದ್ದರೂ ಅವರು ಒಂದು ವಿಷಯವನ್ನು ಮುಕ್ತ ಮನಸ್ಸಿನಿಂದ ನೋಡುವ, ಪರಿಶೀಲಿಸುವ, ವಿಶ್ಲೇಷಿಸುವ ರೀತಿಯನ್ನು ಒಪ್ಪಿಕೊಳ್ಳಬಹುದಾಗಿದೆ.

ಒಬ್ಬ ಸೃಜನಶೀಲ ಸಾಹಿತಿಯಾದ ಶಿವರಾಮ ಕಾರಂತರು ಹೊಂದಿದ್ದ ಅರ್ಥಶಾಸ್ತ್ರದ ಜ್ಞಾನವನ್ನು ಸಮಾಜದ ಅಭಿವೃದ್ಧಿಗಾಗಿ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲೇಬೇಕೆಂಬ ಅವರ ಕಾಳಜಿಯನ್ನು ತಿಳಿಯಲು ಮತ್ತು ಇಂದಿಗೆ ಅವರ ಆಲೋಚನೆಗಳು ಎಷ್ಟರಮಟ್ಟಿಗೆ ಸಂಗತವಾಗುತ್ತವೆ ಎಂಬುದನ್ನು ವಿವೇಚಿಸುವ ಕುತೂಹಲದಿಂದ ಈ ಅಧ್ಯಯನವನ್ನು ಕೈಗೊಂಡಿದ್ದೇನೆ. ಸಾಧ್ಯವಾದಷ್ಟು ಈ ಅಂಶಗಳನ್ನು ಶೋಧಿಸಲು ಯತ್ನಿಸಿದ್ದೇನೆ.

ಡಾ.ಕೆ. ಶಿವರಾಮ ಕಾರಂತರ ಆಯ್ದ ಲೇಖನಗಳ ಅರ್ಥಶಾಸ್ತ್ರೀಯ ಅಧ್ಯಯನವನ್ನು ಕೈಗೊಂಡ ನಾನು ಅರ್ಥಶಾಸ್ತ್ರದ ವಿದ್ಯಾರ್ಥಿ. ನಾನು ಕೈಗೊಂಡಿರುವುದು ಅಂತರ್‌ಶಿಸ್ತೀಯ ಅಧ್ಯಯನ. ಈ ಅಧ್ಯಯನ ಮಾಡಲು ನಾನು ಪ್ರತಿಯೊಂದು ವಿಷಯವನ್ನು ಅರ್ಥಶಾಸ್ತ್ರದ ಚೌಕಟ್ಟಿನಿಂದ ಪರಿಶೀಲಿಸಿ ನಂತರ ಆ ವಿಷಯಕ್ಕೆ ಸಂಬಂಧಿಸಿದಂತೆ ಕಾರಂತರ ಅಭಿಪ್ರಾಯವನ್ನು ತಿಳಿಸಿ ನಂತರ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಪ್ರಯತ್ನ ಮಾಡಿರುತ್ತೇನೆ.

ಆಡಂಸ್ಮಿತ್ ಎಂಬುವವರು ಅರ್ಥಶಾಸ್ತ್ರವನ್ನು ರಾಜಕೀಯ ವಿಜ್ಞಾನದಿಂದ ಬೇರ್ಪಡಿಸಿ ಇದಕ್ಕೆ ಸ್ವಂತ ಅಸ್ತಿತ್ವವನ್ನು ತಂದುಕೊಟ್ಟರು. ಆದ್ದರಿಂದ ಅವರನ್ನು 'ಅರ್ಥಶಾಸ್ತ್ರದ ಪಿತಾಮಹ' ಎಂದು ಪರಿಗಣಿಸಲಾಗಿದೆ.

ಮಾನವನ ಆರ್ಥಿಕ ಚಟುವಟಿಕೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಒಂದು ಸಾಮಾಜಿಕ ವಿಜ್ಞಾನ ಅರ್ಥಶಾಸ್ತ್ರ. ಇಂದು ಇದು ಸರ್ವವ್ಯಾಪಿಯಾಗಿ ಬೆಳೆದು ನಿಂತಿದೆ. ಶ್ರೀಮತಿ ಬಾರ್ಬರ್ ವುಟನ್ ಅವರು ಹೇಳುವಂತೆ "ಅರ್ಥಶಾಸ್ತ್ರದ ಜ್ಞಾನ ಸ್ವಲ್ಪವೂ ಇಲ್ಲದೇ ಹೋದರೆ ನೀವು ನಿಜವಾದ ನಾಗರಿಕರಾಗಲು ಸಾಧ್ಯವಿಲ್ಲ". ಅಂದರೆ ಅರ್ಥಶಾಸ್ತ್ರದ ಜ್ಞಾನ ಸಾಮಾನ್ಯ ವ್ಯಕ್ತಿಯಿಂದ ಹಿಡಿದು ದೇಶವನ್ನಾಳುವ ವ್ಯಕ್ತಿಗಳವರೆಗೆ ಸಮಾಜದ ಎಲ್ಲರಿಗೂ ಅನಿವಾರ್ಯವಾದ ಒಂದು ಸಾಮಾಜಿಕ ವಿಜ್ಞಾನವಾಗಿದೆ. ಇಷ್ಟು ಪ್ರಾಮುಖ್ಯತೆಯನ್ನು ಪಡೆದ ಇದಕ್ಕೆ 1968ರ ನಂತರದಲ್ಲಿ ಪ್ರತಿವರ್ಷವೂ ಸಹ ನೋಬೆಲ್ ಬಹುಮಾನವನ್ನು ನೀಡಲಾಗುತ್ತಿದೆ. ಈ ಗೌರವವನ್ನು ಸ್ವೀಕರಿಸುತ್ತಿರುವ ಏಕೈಕ ಸಾಮಾಜಿಕ ವಿಜ್ಞಾನವೆಂದರೆ ಅರ್ಥಶಾಸ್ತ್ರ.

ರಾಬರ್ಟ್ ಫ್ರಾಂಕ್ ರವರ ಪ್ರಕಾರ "ಅಂತರ್ ಶಿಸ್ತೀಯ ಅಧ್ಯಯನವು ಒಂದು ಅಧ್ಯಯನದ ವಿಭಾಗವಾಗಿದ್ದು, ಇದರಲ್ಲಿ ವಿಭಿನ್ನ ಜ್ಞಾನ ಶಾಖೆಗಳ ನಡುವಿನ ಸುಮಧುರವಾದ ಸಂಬಂಧವನ್ನು ಏರ್ಪಡಿಸುವ ಮೂಲಕ ಆ ಜ್ಞಾನದ ಆಳ, ಸೂಕ್ಷ್ಮತೆಯನ್ನು ಅರಿಯಲು ಪ್ರಯತ್ನಿಸಲಾಗುವುದು" ಎಂದು ಅಭಿಪ್ರಾಯಪಟ್ಟಿದ್ದಾರೆ. ಯಾವುದೇ ಒಂದು ಜ್ಞಾನ ಶಾಖೆ ಬೆಳೆಯಬೇಕಾದರೆ ಹೊಸಹೊಸ ವಿಚಾರಗಳನ್ನು ಗ್ರಹಿಸಬೇಕಾದರೆ ಇತರೆ ಜ್ಞಾನಶಾಖೆಯನ್ನು ಅಧ್ಯಯನ ಮಾಡುವುದರಿಂದ ಸಾಧ್ಯವಾಗುತ್ತದೆ. ಉದಾಹರಣೆಗೆ ಅರ್ಥಶಾಸ್ತ್ರವನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿ, ತನ್ನ ವಿಷಯಕ್ಕೆ ಸಂಬಂಧಿಸಿದಂತೆ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕಾದರೆ ಇತರೆ ಜ್ಞಾನ ಶಾಖೆಗಳಿಂದ ಜ್ಞಾನವನ್ನು ಗಳಿಸಬೇಕು. ಗಣಿತಶಾಸ್ತ್ರ, ಸಮಾಜಶಾಸ್ತ್ರಗಳನ್ನು ಅಧ್ಯಯನ ಮಾಡಿ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ಈ ನಿಟ್ಟಿನಲ್ಲಿ ಅಂತರಶಿಸ್ತೀಯ ಅಧ್ಯಯನ ಬಹಳ ಪ್ರಮುಖವಾದದ್ದು. ಅಂತರಶಿಸ್ತೀಯ ಅಧ್ಯಯನ ಪ್ರಾರಂಭವಾದದ್ದು ಅರಿಸ್ಟಾಟಲ್ ರವರ ಕಾಲದಲ್ಲಿ. ಆತನ ಕಾಲದಲ್ಲಿ ತತ್ವಶಾಸ್ತ್ರ, ರಾಜಕೀಯಶಾಸ್ತ್ರ, ಗಣಿತ, ಭೌತಶಾಸ್ತ್ರ ಇತ್ಯಾದಿ ವಿಷಯಗಳನ್ನು ಪರಸ್ಪರ ಅಧ್ಯಯನ ಮಾಡಲಾಗುತ್ತಿತ್ತು. ನಂತರ ಮಧ್ಯಯುಗದ ಕಾಲದಲ್ಲಿ ಆಕ್ಸ್‌ಫರ್ಡ್, ಪ್ಯಾರಿಸ್

ವಿಶ್ವವಿದ್ಯಾನಿಲಯಗಳಲ್ಲಿ ಈ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿದವು. 19ನೇ ಶತಮಾನದಲ್ಲಿ ಇದರ ಬಗ್ಗೆ ಪ್ರಯತ್ನಗಳು ನಡೆದುವಾದರೂ 20ನೇ ಶತಮಾನದಿಂದ ಈಚೆಗೆ ಪ್ರಪಂಚದ ಎಲ್ಲಾ ಭಾಗದಲ್ಲಿ ಈ ಬಗ್ಗೆ ವ್ಯಾಪಕವಾಗಿ ಯೋಚಿಸಲಾಗುತ್ತಿದೆ. ಇಂದು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಂತಹ ಸಂಸ್ಥೆಗಳು ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತಿವೆ. ಡಾ॥ ಕೆ. ಶಿವರಾಮ ಕಾರಂತರ ಆಯ್ದ ಲೇಖನಗಳ ಅಂತರ್‌ಶಿಸ್ತೀಯ ಅಧ್ಯಯನವನ್ನು ಕೈಗೊಂಡ ನಾನು ಮಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ, ಶ್ರೀಮತಿ ಮಾಲಿನಿ ಮಲ್ಯಾ ಅವರು ಸಂಪಾದಿಸಿದ ಶಿವರಾಮ ಕಾರಂತರ ಲೇಖನಗಳ 6ನೇ ಸಂಪುಟವನ್ನು ಆಧಾರವಾಗಿಸಿಕೊಂಡಿದ್ದೇನೆ. ಅದರಲ್ಲಿನ ಕೆಳಕಂಡ ಲೇಖನಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

1. ಭದ್ರಾವತಿಯ ಕಬ್ಬಿಣ ಮತ್ತು ಬಟ್ಟೆ ಕಾರ್ಖಾನೆ
2. ನೇಗಿಲ ಯೋಗಿ
3. ದನವೇ ಧನ
4. ಗಿರಾಕಿ ಮಾತ್ರ ಗಿರ್ಕಿ
5. ನಮ್ಮ ಜಿಲ್ಲೆಯ ಸಂಪತ್ತಿನ ಅಭಿವೃದ್ಧಿ-ಸಾಹಸೋದ್ಯಮಗಳ ಅವಶ್ಯಕತೆ.
6. ಬಂಡವಾಳಗಾರಿಕೆಗೂ, ಸಂಪೂರ್ಣ ಸ್ವಾಮ್ಯಕ್ಕೂ ಮಧ್ಯಮ ಮಾರ್ಗ.
7. ಜಪಾನಿನ ಕೈಗಾರಿಕೆಗಳು
8. ರೈತನಿಗಾಗಿ.
9. ಆಗ್ನೇಯ ಏಷ್ಯಾದ ಬಡತನದ ಸಮಸ್ಯೆ.
10. ನಮ್ಮ ಸಂಪತ್ಸಮೃದ್ಧಿ.
11. ದಕ್ಷಿಣ ಕನ್ನಡದ ಸಮಸ್ಯೆಗಳು.
12. ಮಲೆನಾಡಿನ ಸಮಸ್ಯೆಗಳು.
13. ಕಳ್ಳ ಹಣವೋ, ಕಳ್ಳ ಸಂತೆಯ ಹಣವೋ ?
14. ಹಣದ ಬೆಲೆ ತಗ್ಗಿದರೂ.
15. ಸಂಪತ್ತಿನ ಮಡಿಲಲ್ಲಿ.
16. ಉದ್ಯೋಗಾವಕಾಶ ಕಲ್ಪಿಸಲು.
17. ಪಾಶ್ಚಾತ್ಯರ ಸ್ವಸೇವಾ ಉಪಹಾರಗೃಹಗಳು.
18. ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್ ಉದ್ಯಮಕ್ಕೆ ಸಲ್ಲಿಸಿದ ಕಾಣಿಕೆ.
19. ಬಳಕೆದಾರ ತನ್ನ ಹಕ್ಕನ್ನು ತಿಳಿದಿರಬೇಕು.

[illegible]

ನಾನು ನನ್ನ ಅಧ್ಯಯನಕ್ಕೆ ಕೇವಲ ಲೇಖನಗಳನ್ನು ಮಾತ್ರ ಆಯ್ದುಕೊಳ್ಳಲು ಕಾರಣವೇನೆಂದರೆ ಎಂ.ಫಿಲ್. ಅಧ್ಯಯನದ ವ್ಯಾಪ್ತಿಗೆ ಕಾರಂತರ ಕಾದಂಬರಿಗಳು ಮತ್ತು ಇತರ ಸಾಹಿತ್ಯದ ಪ್ರಕಾರಗಳನ್ನು ಒಳಪಡಿಸುವುದು ಹಿರಿದಾಗುತ್ತದೆ. ಹಾಗೂ ಅವುಗಳು ಹೆಚ್ಚು ಸಾಹಿತ್ಯಕವಾಗಿವೆ. ಅಲ್ಲದೇ ಈ ಲೇಖನಗಳಲ್ಲಿ ದಕ್ಷಿಣ ಕನ್ನಡದ ಸಮಸ್ಯೆಗಳನ್ನು ಆಯ್ಕೆ ಮಾಡಿಕೊಂಡು ಇಡೀ ನಮ್ಮ ದೇಶದ ಸಮಸ್ಯೆಯೊಡನೆ ತೂಗಿ ನೋಡುವ ಕೆಲಸವನ್ನು ಕಾರಂತರು ಮಾಡಿದ್ದಾರೆ. ಮೇಲ್ನೋಟಕ್ಕೆ ಈ ಲೇಖನಗಳಲ್ಲಿ ಮಲೆನಾಡಿನ ಮತ್ತು ದಕ್ಷಿಣ ಕನ್ನಡದ ಆರ್ಥಿಕತೆಯ ಬಗ್ಗೆ ಬೆಳಕನ್ನು ಚೆಲ್ಲಿದಂತೆ ಕಂಡುಬಂದರೂ ಭಾರತದ ಆರ್ಥಿಕ ವ್ಯವಸ್ಥೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಆದ್ದರಿಂದ ನನ್ನ ಅಧ್ಯಯನಕ್ಕೆ ವೈಶಾಲ್ಯತೆ ದೊರೆತಂತಾಗುತ್ತದೆ. ಇದರಿಂದ ದೇಶದ ಆರ್ಥಿಕ ಸ್ಥಿತಿಗತಿಗಳನ್ನು ಕುರಿತ ಚಿಂತಕರಿಗೂ ಒಂದಿಷ್ಟು ಸಹಾಯ ದೊರಕಿತೆಂಬುದು ಅಧ್ಯಯನದ ಆಶಯವಾಗಿದೆ.

[illegible]

ಅಧ್ಯಾಯ 2

ಕೃಷಿ ಮತ್ತು ಆರ್ಥಿಕಾಭಿವೃದ್ಧಿ

ಕೃಷಿಯು ಮಾನವನ ಚಟುವಟಿಕೆಗಳಲ್ಲಿ ಬಹುಮುಖ್ಯವಾದ ಮತ್ತು ಅತ್ಯಂತ ಪುರಾತನವಾದ ಕಸುಬಾಗಿದ್ದು ಜಗತ್ತಿನ ಬಹುಜನರ ಜೀವನೋಪಾಯದ ಮಾರ್ಗವಾಗಿದೆ. ಕೃಷಿಯು ಒಂದು ರೀತಿಯಲ್ಲಿ ಮಾನವ ಮತ್ತು ಪ್ರಕೃತಿಯ ನಡುವಿನ ಹೊಂದಾಣಿಕೆಯ ಕಸುಬಾಗಿದೆ. ಭಾರತ ಕೃಷಿ ಪ್ರಧಾನವಾದ ದೇಶವಾಗಿದ್ದು ಶೆ.58 ಕ್ಕಿಂತಲೂ ಹೆಚ್ಚಿನ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಭಾರತದಲ್ಲಿ ಕೃಷಿಯು ಅತ್ಯಂತ ದೊಡ್ಡದಾದ ಮತ್ತು ಬಹಳ ಮುಖ್ಯವಾದ ಕೈಗಾರಿಕೆಯಾಗಿದ್ದು 'ಭಾರತದ ಆರ್ಥಿಕತೆಯ ಬೆನ್ನೆಲುಬು' ಎಂದು ಪರಿಗಣಿಸಲ್ಪಟ್ಟಿದೆ. ತೃತೀಯ ವಲಯದ ಪ್ರಾಬಲ್ಯವಿರುವ ಇಂದಿನ ದಿನಗಳಲ್ಲೂ ರಾಷ್ಟ್ರೀಯ ಆದಾಯಕ್ಕೆ ಶೇ.19 ಕ್ಕಿಂತಲೂ ಹೆಚ್ಚಿನ ಕೊಡುಗೆಯನ್ನು ಸಲ್ಲಿಸುತ್ತಿದ್ದು ದೇಶದ ಅಭಿವೃದ್ಧಿಯು ನೇರವಾಗಿ ಕೃಷಿಯ ಅಭಿವೃದ್ಧಿಯನ್ನು ಅವಲಂಬಿಸಿದೆ.

ಭಾರತದಲ್ಲಿ ಕೃಷಿಯು ಜೀವನಾಧಾರ ಕಸುಬಾಗಿರುವುದರಿಂದ 'ಪ್ರಾಥಮಿಕ ವಲಯ'ವೆಂದು ಪರಿಗಣಿಸಲ್ಪಟ್ಟಿದೆ. ಇದು ಮಾನವನ ಅತ್ಯವಶ್ಯಕತೆಗಳಲ್ಲಿ ಒಂದಾದ, ಆಹಾರವನ್ನು ಒದಗಿಸುವುದಲ್ಲದೆ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿಗಳು ಮತ್ತು ಬಹು ದೊಡ್ಡ ಸಂಖ್ಯೆಯಲ್ಲಿ ಜನರಿಗೆ ಉದ್ಯೋಗವನ್ನು ಒದಗಿಸುತ್ತಿದೆ.

ಭಾರತದಲ್ಲಿ ವಿದೇಶೀ ವ್ಯಾಪಾರವು ಕೃಷಿಯನ್ನೇ ಅವಲಂಬಿಸಿದೆ. ಇಂದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳೆಂದು ಕರೆಸಿಕೊಳ್ಳುತ್ತಿರುವ ಎಲ್ಲಾ ರಾಷ್ಟ್ರಗಳು ಹಿಂದೊಮ್ಮೆ ಕೃಷಿ ಪ್ರಧಾನ ರಾಷ್ಟ್ರಗಳಾಗಿದ್ದವು. ಕೃಷಿಯನ್ನು ನಿರ್ಲಕ್ಷಿಸಿದರೆ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಅಂಶವನ್ನು ಈ ರಾಷ್ಟ್ರಗಳ ಪೂರ್ವ ಇತಿಹಾಸವನ್ನು ಅಧ್ಯಯನ ಮಾಡಿದಾಗ ಮನದಟ್ಟಾಗುತ್ತದೆ.

ಭಾರತದ ಆರ್ಥಿಕವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯು ನಿರ್ವಹಿಸುತ್ತಿರುವ ಪಾತ್ರವನ್ನು ಮತ್ತು ಅದರ ಪ್ರಾಮುಖ್ಯತೆಯನ್ನು ಈ ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

1. ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ :

ಕಳೆದ ಆರು ದಶಕಗಳ ಅವಧಿಯಲ್ಲಿ ದ್ವಿತೀಯ ಮತ್ತು ತೃತೀಯ ವಲಯಗಳ ಅಭಿವೃದ್ಧಿಗೆ ಅಂದರೆ ಕೈಗಾರಿಕೆ, ಸಾರಿಗೆ ಸಂಪರ್ಕ, ವ್ಯಾಪಾರ, ವಾಣಿಜ್ಯಗಳ ಅಭಿವೃದ್ಧಿಗಾಗಿ

ಪಂಚವಾರ್ಷಿಕ ಯೋಜನೆಗಳಲ್ಲಿ ಸರ್ಕಾರವು ಸಾಕಷ್ಟು ಶ್ರಮಿಸಿದ್ದು ಕೃಷಿಗೆ ಹೆಚ್ಚು ಗಮನ ಕೊಡದಿದ್ದರಿಂದ ರಾಷ್ಟ್ರೀಯ ಆದಾಯಕ್ಕೆ ಕೃಷಿಯ ಕೊಡುಗೆಯು ಗಣನೀಯವಾಗಿ ಕಡಿಮೆಯಾಗಿದೆ. 2007ರ ಅಂಕಿ ಸಂಖ್ಯೆಗಳ ಪ್ರಕಾರ ರಾಷ್ಟ್ರೀಯ ಆದಾಯಕ್ಕೆ ಕೃಷಿಯ ಕೊಡುಗೆಯು ಶೇ.19ರಷ್ಟಿದೆ.

2. ಗರಿಷ್ಟ ಉದ್ಯೋಗ : ಭಾರತದಲ್ಲಿ ಕೃಷಿಯು ಇಂದಿಗೂ ಮುಖ್ಯ ಕಸುಬಾಗಿದ್ದು ಶೇ.58 ಕ್ಕಿಂತಲೂ ಹೆಚ್ಚಿನ ಮಂದಿ ಕೃಷಿಯನ್ನೇ ತಮ್ಮ ಕಸುಬಾಗಿಸಿಕೊಂಡಿದ್ದಾರೆ. ಇಂದು ಸುಮಾರು 279 ದಶಲಕ್ಷ ಜನರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉದ್ಯೋಗವನ್ನು ಒದಗಿಸುತ್ತಿದೆ.

3. ಆಹಾರ ಪೂರೈಕೆ :

ಹೆಚ್ಚುತ್ತಿರುವ ಜನಸಂಖ್ಯೆಗೆ ಅಗತ್ಯವಾದ ಆಹಾರವನ್ನು ಒದಗಿಸುವ ಜವಾಬ್ದಾರಿ ನಮ್ಮ ಕೃಷಿ ವಲಯದ ಮೇಲಿದ್ದು 2007ರ ವೇಳೆಗೆ ಸುಮಾರು 209 ಮಿಲಿಯನ್ ಟನ್‌ಗಳಷ್ಟು ಆಹಾರವನ್ನು ಒದಗಿಸುತ್ತಿದೆ.

4. ಕೈಗಾರಿಕಾ ಅಭಿವೃದ್ಧಿ :

ಕೃಷಿ ವಲಯುವು ಕೈಗಾರಿಕೆಯಲ್ಲಿ ಉದ್ಯೋಗ ನಿರತರಾಗಿರುವವರಿಗೆ ಆಹಾರವನ್ನೊದಗಿಸುವುದಲ್ಲದೆ ಕೃಷಿ ಆಧಾರಿತ ಕೈಗಾರಿಕೆಗಳಗೆ ಅಗತ್ಯ ಕಚ್ಚಾ ವಸ್ತುಗಳನ್ನು ಪೂರೈಸುತ್ತಿದೆ.

5. ವಿದೇಶಿ ವ್ಯಾಪಾರಕ್ಕೆ ಕೊಡುಗೆ :

ಭಾರತದ ಒಟ್ಟು ರಫ್ತು ವ್ಯಾಪಾರದಲ್ಲಿ ಶೇ.10.5ಕ್ಕಿಂತಲೂ ಹೆಚ್ಚಿನ ಪಾಲು ಕೃಷಿ ವಲಯದ್ದಾಗಿದೆ. ಕೃಷಿಯು ವಿದೇಶಿ ವಿನಿಮಯ ಸಂಗ್ರಹದ ಮೂಲವಾಗಿದೆ.

6. ಸರ್ಕಾರಕ್ಕೆ ಆದಾಯ :

ಕೃಷಿಯ ಅಭಿವೃದ್ಧಿಯಿಂದ ಕೃಷಿಕರ ಆದಾಯವು ಹೆಚ್ಚುವ ಮೂಲಕ ಸರ್ಕಾರದ ಆದಾಯವು ಸಹ ಹೆಚ್ಚುತ್ತಲಿದೆ.

7. ಆಯ ವ್ಯಯ ಪತ್ರದ ಮೇಲೆ ಪ್ರಭಾವ :

ಕೃಷಿ ವಲಯದ ಮೇಲೆ ಶೇಕಡ 58 ರಷ್ಟು ಜನ ಅವಲಂಬಿತರಾಗಿರುವುದರಿಂದ ಈ ವಲಯವನ್ನು ನಿರ್ಲಕ್ಷಿಸಿ ಮುಂಗಡ ಪತ್ರವನ್ನು ಮಂಡಿಸುವುದು ಅಸಾಧ್ಯವಾಗಿದೆ.

8. ಅನುಭೋಗದಲ್ಲಿ ಕೃಷಿಯ ಮಹತ್ವ :

ತಲಾ ಆದಾಯವು ಅತ್ಯಂತ ಕಡಿಮೆ ಇರುವ ಭಾರತದಂತಹ ರಾಷ್ಟ್ರಗಳಲ್ಲಿ ಶೇ.80 ಕ್ಕಿಂತಲೂ ಹೆಚ್ಚಿನ ಅನುಭೋಗಿ ಸರಕುಗಳು ಕೃಷಿ ಸಾಮಗ್ರಿಗಳಾಗಿವೆ.

9. ಬಂಡವಾಳ ಸಂಚಯನದ ಮೂಲ :

ಕೃಷಿಕರ ಆದಾಯವು ಉಳತಾಯದ ಮೇಲೆ ನೇರವಾದ ಪ್ರಭಾವವನ್ನು ಬೀರುತ್ತದೆ. ಉಳತಾಯ ಮತ್ತು ಬಂಡವಾಳ ಸಂಚಯನದ ನಡುವೆ ನೇರವಾದ ಸಂಬಂಧವಿರುತ್ತದೆ.

10. ಪ್ರಾಣಿಗಳಿಗೆ ಮೇವು :

ಕೃಷಿಗೆ ಪೂರಕವಾಗಿರುವ ಪಶು ಸಂಗೋಪನ ವಲಯಕ್ಕೆ ಅಗತ್ಯವಾದ ಆಹಾರವನ್ನು ಕೃಷಿ ವಲಯವು ಪೂರೈಸುತ್ತಿದೆ.

11. ಬೆಲೆಯ ಸ್ಥಿರತೆ :

ದೇಶದಲ್ಲಿ ಬೆಲೆಯ ಸ್ಥಿರತೆಯು ಅಭಿವೃದ್ಧಿಗೆ ಪೂರಕವಾಗಿದ್ದು, ಇದನ್ನು ಸಾಧಿಸಲು ಕೃಷಿ ವಲಯವು ನೆರವು ನೀಡುತ್ತದೆ. ಕೃಷಿ ಉತ್ಪನ್ನಗಳನ್ನು ನಮ್ಮ ಅಗತ್ಯಕ್ಕೆ ತಕ್ಕಂತೆ ಶೀಘ್ರವಾಗಿ ಉತ್ಪಾದಿಸಲು ಸಾಧ್ಯವಾಗುತ್ತದೆ.

12. ತೃತೀಯ ವಲಯದ ಬೆಳವಣಿಗೆ :

ತೃತೀಯ ವಲಯದ ಚಟುವಟಿಕೆಗಳಾದ ವ್ಯಾಪಾರ, ವಾಣಿಜ್ಯ, ಸಾರಿಗೆ ಸಂಪರ್ಕ, ವಿಮೆ, ಅಂತರ್‌ರಾಷ್ಟ್ರೀಯ ವ್ಯಾಪಾರ ಇತ್ಯಾದಿಗಳ ಅಭಿವೃದ್ಧಿಯಲ್ಲಿ ಕೃಷಿ ವಲಯವು ತನ್ನದೇ ಆದ ಕೊಡುಗೆಯನ್ನು ಸಲ್ಲಿಸುತ್ತಿದೆ.

13. ಕೈಗಾರಿಕೋತ್ಪನ್ನಗಳಿಗೆ ಬೇಡಿಕೆ :

ಕೃಷಿಕರ ಆದಾಯವು ಕೈಗಾರಿಕಾ ಸರಕುಗಳ ಬೇಡಿಕೆಯನ್ನು ಪ್ರಭಾವಿಸುವ ಸಾಮರ್ಥ್ಯವನ್ನು ಪಡೆದಿದೆ.

14. ಉತ್ತಮ ರಾಷ್ಟ್ರರಕ್ಷಣ ಶಕ್ತಿ :

ಕೃಷಿಕರು ಶ್ರಮಜೀವಿಗಳಾಗಿರುವುದರಿಂದ ರಾಷ್ಟ್ರ ರಕ್ಷಣೆಗೆ ಅಗತ್ಯವಾದ ದೃಢಕಾಯರಾದ ಸೈನಿಕರನ್ನು ಪೂರೈಸುವ ಶಕ್ತಿ ಕೃಷಿ ವಲಯಕ್ಕಿದೆ.


15. ರಾಜಕೀಯ ಮತ್ತು ಸಾಮಾಜಿಕ ಪ್ರಾಮುಖ್ಯತೆ :

ನಮ್ಮ ದೇಶದ ಪ್ರಮುಖರಾದ ಬಹುತೇಕ ರಾಜಕಾರಣಿಗಳು ಕೃಷಿ ಹಿನ್ನೆಲೆಯನ್ನು ಹೊಂದಿರುವಂತಹವರು. ಮೂಲತ: ಶಾಂತಿ ಪ್ರಿಯರಾಗಿರುವುದರಿಂದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ನೆರವಾಗುತ್ತಿದ್ದಾರೆ. ಹೀಗೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯು ಅತ್ಯಂತ ಪ್ರಮುಖವಾದ ಸ್ಥಾನವನ್ನು ಪಡೆದಿದೆ.

ಭಾರತದ ಆರ್ಥಿಕತೆಯಲ್ಲಿನ ಕೃಷಿಯ ಮಹತ್ವವನ್ನು ಈ ಪಟ್ಟಿಯ ಸಹಾಯದಿಂದ ತಿಳಿಯಬಹುದು.

ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕೆ ಕೃಷಿ ಕ್ಷೇತ್ರದ ಕೊಡುಗೆ (ಕೋಟಿ ರೂ.ಗಳಲ್ಲಿ)

ವರ್ಷ	ಒಟ್ಟು ರಾಷ್ಟ್ರೀಯ ಉತ್ಪನ್ನ	ಕೃಷಿಯ ಕೊಡುಗೆ	ಶೇಕಡವಾರು
1950–51	1,40,470	83,150	54.4
1970–71	2,96,280	1,42,580	44.5
1990–91	6,92,870	2,42,010	30.9
2003–04	14,30,550	3,43,810	24.1



ಮಾಹಿತಿಯ ಮೂಲ : ಆರ್ಥಿಕ ಸಮೀಕ್ಷೆ 2004–05 ಸ್ತಂಭ

ಈ ಮೇಲಿನ ರೇಖಾ ಚಿತ್ರದ ಸಹಾಯದಿಂದ ಗೋಚರಿಸುವ ಅಂಶವೆಂದರೆ 1950–51ರ ನಂತರದಲ್ಲಿ ಭಾರತದ ರಾಷ್ಟ್ರೀಯ ಆದಾಯಕ್ಕೆ ಕೃಷಿ ವಲಯದ ಕೊಡುಗೆ ನಿರಂತರವಾಗಿ ಕಡಿಮೆಯಾಗುತ್ತಲಿದೆ. ಇತರೆ ವಲಯವು ಭಾರತದಲ್ಲಿ ಅಭಿವೃದ್ಧಿಯಾಗುತ್ತಲಿರುವುದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಕೆಳಗಿನ ಪಟ್ಟಿಯಿಂದ ಕೃಷಿಯು ಒದಗಿಸಿರುವ ಉದ್ಯೋಗದ ಪ್ರಮಾಣವನ್ನು ಅರ್ಥ ಮಾಡಿಕೊಳ್ಳಬಹುದು.

	1951	2001
ಒಟ್ಟು ಜನಸಂಖ್ಯೆ	36.1 ಕೋಟಿ	102.7 ಕೋಟಿ
ಗ್ರಾಮೀಣ ಜನಸಂಖ್ಯೆ	29.9 ಕೋಟಿ (ಶೇ.83)	74.2 ಕೋಟಿ (ಶೇ.72)
ಸಾಗುವಳಿದಾರರ ಸಂಖ್ಯೆ	7 ಕೋಟಿ	12.8 ಕೋಟಿ
ಕೃಷಿ ಕಾರ್ಮಿಕರ ಸಂಖ್ಯೆ	2.7 ಕೋಟಿ	10.7 ಕೋಟಿ
ಇತರೆ ಕಾರ್ಮಿಕರು	4.3 ಕೋಟಿ	16.7 ಕೋಟಿ
ಒಟ್ಟು ಕಾರ್ಯನಿರತ ಜನಸಂಖ್ಯೆ	14.0 ಕೋಟಿ	40.2 ಕೋಟಿ

ಮಾಹಿತಿಯ ಮೂಲ : ಕೃಷಿ ಅಂಕಿ ಅಂಶಗಳ ವಿಶ್ಲೇಷಣೆ (2002)

ಕೃಷಿ ಕ್ಷೇತ್ರದ ಮೇಲೆ ವಿವಿಧ ಕಾಲಾವಧಿಯಲ್ಲಿ ತೊಡಗಿಸಿದ ಬಂಡವಾಳದ ಪ್ರಮಾಣವನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ವರ್ಷ	ಸಾರ್ವಜನಿಕ ವಲಯ	ಖಾಸಗಿ ವಲಯ	ಒಟ್ಟು
1961	590 ಕೋಟಿ	1,080 ಕೋಟಿ	1,670 ಕೋಟಿ
1971	790 ಕೋಟಿ	1,970 ಕೋಟಿ	2,760 ಕೋಟಿ
1981	1,800 ಕೋಟಿ	2,840 ಕೋಟಿ	4,640 ಕೋಟಿ
1991	4,400 ಕೋಟಿ	10,440 ಕೋಟಿ	14,480 ಕೋಟಿ
2001	3,930 ಕೋಟಿ	12,980 ಕೋಟಿ	16,910 ಕೋಟಿ
2004	5,250 ಕೋಟಿ	15,260 ಕೋಟಿ	20,510 ಕೋಟಿ

ಮಾಹಿತಿಯ ಮೂಲ : ಆರ್ಥಿಕ ಸಮೀಕ್ಷೆ (2004-05)

ಈ ಮೇಲಿನ ಪಟ್ಟಿಯಿಂದ ಗೋಚರಿಸುವ ಅಂಶವೆಂದರೆ – ಸ್ವಾತಂತ್ರ್ಯವನ್ನು ಪಡೆದ ನಂತರದಲ್ಲಿ ಕೃಷಿ ಅಭಿವೃದ್ಧಿಗಾಗಿ ಸರ್ಕಾರ ಮಾಡಿದಂತಹ ವೆಚ್ಚ ಬಹಳ ಕಡಿಮೆ ಇದೆ. 1961ರಲ್ಲಿ 590 ಕೋಟಿ ರೂಪಾಯಿಗಳಿದ್ದು ಸರ್ಕಾರದ ಹೂಡಿಕೆಯ ಪ್ರಮಾಣ 5,250 (2004) ಹೆಚ್ಚಳವಾಗಿದೆ. ಆದರೆ ಖಾಸಗಿ ವಲಯದ ಹೂಡಿಕೆಯಲ್ಲಿ ಗಮನಾರ್ಹವಾದ ಹೆಚ್ಚಳವಾಗಿರುವ ಅಂಶ ಅಂದರೆ 1,080 ಕೋಟಿ (1961) 2004ರ ವೇಳೆಗೆ 15,620 ಕೋಟಿಗೆ ಹೆಚ್ಚಳವಗಿದೆ. ಅಂದರೆ ಕೃಷಿ ಎಂಬುದು ಇಂದಿಗೂ ಕೂಡ ಸರ್ಕಾರದಿಂದ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟ ವಲಯವಾಗಿದೆ.

ಡಾ.ಕೆ.ಶಿವರಾಮ ಕಾರಂತರು ಭಾರತದ ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಹೀಗೆ ವಿವರಿಸಿದ್ದಾರೆ.

"ನಮ್ಮ ನಾಡಿನ ದೇಹವೇ ಹಳ್ಳಿಗಳು, ಅದರ ಜೀವಾಳವೇ ರೈತ, ಆದರೆ ಇಂದು ರೈತ ನೇಗಿಲಯೋಗಿ ಆಗುವ ಬದಲು ಜೋಗಿಯಾಗಿದ್ದಾನೆ. ನಮ್ಮ ದೇಶಕ್ಕೆ ಒಳಿತಾಗಬೇಕಾದರೆ ಈ ಜೋಗಿತನದಿಂದ ಮುಕ್ತಿ ದೊರೆಯಲೇ ಬೇಕು" -1

ಕಾರಂತರ ದೃಷ್ಟಿಯಲ್ಲಿ ಕೃಷಿಯು ಒಂದು ಸುಲಭವಾದ ಕೆಲಸವಲ್ಲ. ನಮ್ಮ ದೇಶದ ಕೃಷಿಯ ಚಿತ್ರಣವನ್ನು ಪಾಶ್ಚಿಮಾತ್ಯ ದೇಶಗಳೊಡನೆ ಹೋಲಿಸಿದಾಗ ನಮ್ಮ ನಿಜವಾದ ಸಮಸ್ಯೆಗಳು ಅರಿವಾಗುತ್ತವೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶದ ಸ್ಥಾನಮಾನ ಹೆಚ್ಚಾಗಬೇಕಾದರೆ ಕೈಗಾರಿಕಾ ಕ್ಷೇತ್ರದಲ್ಲಿ ಮಾತ್ರವಲ್ಲದೆ ಕೃಷಿ ಕ್ಷೇತ್ರದಲ್ಲೂ ಸುಧಾರಣೆ ಅಗತ್ಯ ಎಂದು ಹೇಳಿದ್ದಾರೆ.

---

1. ಡಾ.ಕೆ.ಶಿವರಾಮ ಕಾರಂತ – ನೇಗಿಲಯೋಗಿ – ಜೀವನ, ಡಿಸೆಂಬರ್ 1945

ಶಿವರಾಮ ಕಾರಂತರ ಅಭಿಪ್ರಾಯದಲ್ಲಿ ಕೃಷಿಯ ಆಧುನೀಕರಣ ಇಂದಿನ ಅಗತ್ಯತೆಯಾಗಿದೆ. ಕೃಷಿ ಕ್ಷೇತ್ರವು ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಿರುತ್ತಾರೆ.

1. ಭೂ ಹಿಡುವಳಿಯ ಸಮಸ್ಯೆ
2. ಗೇಣಿದಾರ ಪದ್ಧತಿಯ ಅಸ್ತಿತ್ವ
3. ಹಿಡುವಳಿಯ ಛಿದ್ರೀಕರಣದ ಸಮಸ್ಯೆ
4. ಭೂ ಸವಕಳಿಯ ಸಮಸ್ಯೆ

ಈ ಮೇಲಿನ ಸಮಸ್ಯೆಗಳನ್ನು ಈ ಕೆಳಕಂಡಂತೆ ವಿವರಿಸಬಹುದು.

1. ಭೂ ಹಿಡುವಳಿಯ ಸಮಸ್ಯೆ

ಭೂ ಹಿಡುವಳಿ ಎಂದರೆ ಒಬ್ಬ ರೈತನು ಹೊಂದಿರುವ ಕೃಷಿ ಭೂಮಿಯ ಪ್ರಮಾಣವಾಗಿದೆ. ಭಾರತದ ಆರ್ಥಿಕತೆಯಲ್ಲಿನ ಭೂ ಹಿಡುವಳಿ ಸಮಸ್ಯೆಗಳೆಂದರೆ :

1. **ಗೈರು ಹಾಜರಿಯ ಭೂ ಮಾಲೀಕತ್ವ** – ಭೂಮಿಯ ನಿಜವಾದ ಮಾಲೀಕನು ಭೂಮಿಯನ್ನು ಸಾಗುವಳಿ ಮಾಡದೇ ಇತರರಿಂದ ಭೂಮಿಯನ್ನು ಸಾಗುವಳಿ ಮಾಡಿಸಿ ಪ್ರತಿಫಲವನ್ನು ಪಡೆಯುವ ವಿಧಾನವಾಗಿದೆ.

2. **ಒಡೆತನದ ಅಭದ್ರತೆ** – ಭೂ ಮಾಲೀಕರು ಗೇಣಿದಾರರಿಗೆ ತಮ್ಮ ಭೂಮಿಯನ್ನು ನೀಡಿ ಸಾಗುವಳಿ ಮಾಡಿಸಿ ಪ್ರತಿಫಲದಲ್ಲಿ ತಾವು ಪಾಲನ್ನು ಪಡೆಯುವುದಲ್ಲದೆ, ಸಾಗುವಳಿದಾರರಲ್ಲಿ ಅಭದ್ರತೆಯ ವಾತಾವರಣವನ್ನು ಸಹ ಮೂಡಿಸುತ್ತಾರೆ. ಪ್ರತಿ ವರ್ಷ ಅಥವಾ ಎರಡು ವರ್ಷಗಳಿಗೊಮ್ಮೆ ಸಾಗುವಳಿದಾರರನ್ನು ಬದಲಾಯಿಸುವ ಪ್ರವೃತ್ತಿಯನ್ನು ಕಾಣಬಹುದಾಗಿದೆ.

3. **ಅಧಿಕ ಗೇಣಿ ವಸೂಲಿ** – ಭೂ ಮಾಲೀಕರು ಸಾಗುವಳಿದಾರರಿಂದ ಅಧಿಕ ಗೇಣಿಯನ್ನು ವಸೂಲು ಮಾಡುವ ಪ್ರವೃತ್ತಿಯನ್ನು ನಾವು ಭಾರತದಲ್ಲಿ ಕಾಣಬಹುದಾಗಿದೆ.

ಕಾರಂತರ ಪ್ರಕಾರ 'ಚಿಕ್ಕ ಚಿಕ್ಕ ಹಿಡುವಳಿಗಳು ಲಾಭದಾಯಕವಾಗಿಲ್ಲ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಭೂ ಹಿಡುವಳಿಗಳು ರೈತನಿಗೆ ಮತ್ತು ಆತನ ಕುಟುಂಬಕ್ಕೆ ಕನಿಷ್ಠ ಜೀವನವನ್ನು ನಡೆಸುವಷ್ಟು ಆದಾಯವನ್ನು ತರುವಂತಿರಬೇಕು.

2. ಗೇಣಿದಾರ ಪದ್ಧತಿಯ ಅಸ್ತಿತ್ವ

ಗೇಣಿದಾರರೆಂದರೆ ಭೂ ಹಿಡುವಳಿಗಳ ಮೇಲೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದದೇ ಕೇವಲ ಸಾಗುವಳಿ ಮಾಡುವ ಒಂದು ವರ್ಗ. ಈ ವರ್ಗದ ಜನತೆಗೆ ಭೂಮಿಯ ಮಾಲೀಕತ್ವವಾಗಲಿ, ಶಾಶ್ವತವಾದ ಸಾಗುವಳಿಯ ಸೌಕರ್ಯವಾಗಲಿ, ಕನಿಷ್ಠ ಸರ್ಕಾರಕ್ಕೆ ಕಂದಾಯವನ್ನು ಪಾವತಿ ಮಾಡುವ ಹಕ್ಕನ್ನು ಸಹ ಹೊಂದಿರುವುದಿಲ್ಲ.

ಗೇಣಿದಾರ ವರ್ಗ ಬೇರೆಯವರ ಭೂಮಿಯನ್ನು ಸಾಗುವಳಿ ಮಾಡಿ ಬಂದಂತಹ ಉತ್ಪನ್ನದಲ್ಲಿ ಮಾಲಿಕರು ನಿಗದಿಪಡಿಸಿದ ಪಾಲನ್ನು ನೀಡಿ ಉಳಿದ ಭಾಗದಲ್ಲಿ ತಮ್ಮ ಜೀವನವನ್ನು ಸಾಗಿಸುವಂತಹ ವರ್ಗವಾಗಿದೆ.

ಗೇಣಿದಾರ ಪದ್ಧತಿಯು ಭೂಮಿಯ ಉತ್ಪಾದಕತೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಭೂಮಿಯ ಉತ್ಪಾದಕತೆ ಎಂದರೆ ನಿರ್ದಿಷ್ಟ ಪ್ರಮಾಣದಲ್ಲಿ ಭೂಮಿಯಲ್ಲಿ ಬೆಳೆದ ಕೃಷಿ ಉತ್ಪನ್ನಗಳ ಪ್ರಮಾಣವಾಗಿದೆ.

ಗೇಣಿದಾರ ಪದ್ಧತಿಯಿಂದಾಗಿ ಗೇಣಿದಾರರಿಗೆ ಭೂಮಿಯ ಶಾಶ್ವತ ಒಡೆತನವಿಲ್ಲದ ಕಾರಣ ಸುಧಾರಿತ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳುವುದಾಗಲಿ, ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸುವುದಾಗಲಿ ಸಾಧ್ಯವಾಗುವುದಿಲ್ಲ. ಇಂದು ಭಾರತದಲ್ಲಿ ಕೃಷಿ ವಲಯದ ಉತ್ಪಾದಕತೆ ತೀರಾ ಕಡಿಮೆ ಇರಲು ಗೇಣಿದಾರ ಪದ್ಧತಿಯು ಒಂದು ಪ್ರಮುಖ ಕಾರಣವಾಗಿದೆ. ಭಾರತದಲ್ಲಿ ಗೇಣಿದಾರ ಪದ್ಧತಿಯ ನಿರ್ಮೂಲನೆಗಾಗಿ ಸರ್ಕಾರದ ಭೂ ಸುಧಾರಣಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸದೆ ಕೃಷಿ ಕ್ಷೇತ್ರದಲ್ಲಿ ವಿವಿಧ ಸಾಂಸ್ಥಿಕ ಅಂಶಗಳಲ್ಲಿ ಬದಲಾವಣೆ ತರಲು ಸರ್ಕಾರ ಯತ್ನಿಸುವುದನ್ನು ಭೂ ಸುಧಾರಣೆ ಎಂದು ಕರೆಯಲಾಗಿದೆ.

ಭೂ ಸುಧಾರಣೆಯಲ್ಲಿ ಸರ್ಕಾರ ಭೂ ಹಿಡುವಳಿಗಳ ಸ್ವರೂಪ ಮಾರ್ಪಾಡುಮಾಡಿ ಕೃಷಿಯ ಸಮಸ್ಯೆಯನ್ನು ನಿವಾರಿಸಿ ಕೃಷಿಯ ಪ್ರಗತಿಗೆ ಶ್ರಮಿಸುತ್ತಿದೆ. ಭಾರತದಲ್ಲಿ ಭೂ ಸುಧಾರಣೆ ಎಂದರೆ ಸಾಂಸ್ಥಿಕ ಸುಧಾರಣೆಯಾಗಿದೆ. 1951ರಲ್ಲಿ ಭೂ ಸುಧಾರಣೆಯನ್ನು ಒಂದು ಅಧಿಕೃತ ಕಾರ್ಯಕ್ರಮವಾಗಿ ಜಾರಿಗೆ ತರಲಾಯಿತು. ಕರ್ನಾಟಕದಲ್ಲಿ ದಿವಂಗತ ದೇವರಾಜ ಅರಸುರವರು ಈ ಕಾರ್ಯಕ್ರಮವನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರಯತ್ನಿಸಿದರು.

ಭಾರತದಲ್ಲಿ ಜಾರಿಯಾಗಿರುವ ಭೂ ಸುಧಾರಣಾ ಪ್ರಕ್ರಿಯೆಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

(1) ಮಧ್ಯವರ್ತಿಗಳ ನಿರ್ಮೂಲನೆ :

ಭಾರತದಲ್ಲಿ ಭೂ ಮಾಲಿಕ ಮತ್ತು ಗೇಣಿದಾರರ ನಡುವೆ ಮಧ್ಯವರ್ತಿಗಳು ಕೆಲಸ ಮಾಡುತ್ತಿದ್ದು, ಅವರು ಭೂ ಮಾಲಿಕರೂ ಅಲ್ಲ ಅಥವಾ ಗೇಣಿದಾರರೂ ಅಲ್ಲ. ಆದರೆ ಬಂದ ಉತ್ಪನ್ನದಲ್ಲಿ ಒಂದು ಪಾಲನ್ನು ಪಡೆಯುವ ವರ್ಗವಾಗಿತ್ತು. ಭಾರತದ ಬೇರೆ ಬೇರೆ ಭಾಗದಲ್ಲಿ ವಿಭಿನ್ನ ರೀತಿಯ ಮಧ್ಯವರ್ತಿಗಳ ವರ್ಗವಿತ್ತು. ಅವುಗಳೆಂದರೆ :

ಜಮೀನ್ದಾರಿ ಪದ್ಧತಿ : ಈ ಪದ್ಧತಿಯಲ್ಲಿ ಸರ್ಕಾರ ಮತ್ತು ಸಾಗುವಳಿದಾರರ ಮಧ್ಯೆ ಭೂ ಮಾಲೀಕರು ಮಧ್ಯವರ್ತಿಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ಅಂದರೆ ಸರ್ಕಾರದ ಒಡೆತನದಲ್ಲಿದ್ದ ಭೂಮಿಯನ್ನು ಒಬ್ಬ ಅಥವಾ ಕೆಲವು ಮಂದಿ ಸಂಯುಕ್ತ ಭೂ ಮಾಲೀಕರಿಗೆ ಕೊಡಲಾಗುತ್ತಿತ್ತು. ಈ ಭೂಮಿಯನ್ನು ಜಮೀನ್ದಾರರು ಸಾಗುವಳಿದಾರರಿಗೆ ಗೇಣಿಗೆ ಕೊಟ್ಟು ಬೆಳೆದ ಬೆಳೆಯ ಕೆಲಭಾಗವನ್ನು ಗೇಣಿರೂಪದಲ್ಲಿ ಪಡೆಯುತ್ತಿದ್ದರು. ಹೀಗೆ ಗೇಣಿರೂಪದಲ್ಲಿ ಪಡೆದ ಬೆಳೆಯಲ್ಲಿ ಸುಮಾರು ಶೇ.90ರಷ್ಟನ್ನು ಜಮೀನ್ದಾರರು ಸರ್ಕಾರಕ್ಕೆ ಕೊಡಬೇಕಾಗಿತ್ತು. ಈ ಪದ್ಧತಿಯನ್ನು ಲಾರ್ಡ್ ಕರ್ಜನ್ 1793ರಲ್ಲಿ ಬಂಗಾಳದಲ್ಲಿ ಜಾರಿಗೆ ತಂದನು.

ರೈತವಾರಿ ಪದ್ಧತಿ : ಈ ಪದ್ಧತಿಯಲ್ಲಿ ಸಾಗುವಳಿದಾರರು ಸರ್ಕಾರದಿಂದ ನೇರವಾಗಿ ಕೃಷಿಭೂಮಿಯನ್ನು ಗೇಣಿಗೆ ಪಡೆದು ಸರ್ಕಾರಕ್ಕೆ ಅವರೇ ನೇರವಾಗಿ ಭೂ ಕಂದಾಯವನ್ನು ಪಾವತಿ ಮಾಡುತ್ತಿದ್ದ ವ್ಯವಸ್ಥೆಯಾಗಿದ್ದಿತು. ಈ ಪದ್ಧತಿಯನ್ನು 1792ರಲ್ಲಿ ಮದ್ರಾಸಿನಲ್ಲಿ ಜಾರಿಗೆ ತರಲಾಯಿತು.

ಮಹಲ್ವಾರಿ ಪದ್ಧತಿ : ಈ ಪದ್ಧತಿಯಲ್ಲಿ ಕೃಷಿ ಭೂಮಿ ಒಂದು ಹಳ್ಳಿಯ ಜನ ಸಮುದಾಯದ ಒಡೆತನದಲ್ಲಿದ್ದು, ಗ್ರಾಮ ಸಮುದಾಯದ ಸದಸ್ಯರು ವೈಯಕ್ತಿಕವಾಗಿ ಮತ್ತು ಸಂಯುಕ್ತವಾಗಿ ಸರ್ಕಾರಕ್ಕೆ ಭೂ ಕಂದಾಯವನ್ನು ನೀಡುವ ಜವಾಬ್ದಾರಿಯನ್ನು ಹೊಂದಿದ್ದರು.

(2) ಗೇಣಿ ಪದ್ಧತಿಯ ಸುಧಾರಣೆ :

ಗೇಣಿದಾರರಲ್ಲಿ ಶಾಶ್ವತ ಹಕ್ಕಿನ ಗೇಣಿದಾರರು ಮತ್ತು ತಾತ್ಕಾಲಿಕ ಹಕ್ಕಿನ ಗೇಣಿದಾರರು ಎಂಬ ಎರಡು ಪ್ರಕಾರಗಳಿವೆ. ಶಾಶ್ವತ ಹಕ್ಕಿನ ಗೇಣಿದಾರರು ತಾವು ಉಳುವ ಭೂಮಿಯ ಮೇಲೆ ಹಕ್ಕನ್ನು ಪಡೆದಿರುತ್ತಾರೆ. ಹಾಗೂ ಅವರನ್ನು ಭೂ ಮಾಲೀಕರು ಬದಲಿಸಲು ಸಾಧ್ಯವಿಲ್ಲ. ಆದರೆ ತಾತ್ಕಾಲಿಕ ಹಕ್ಕಿನ ಗೇಣಿದಾರರು ತಾವು ಉಳುವ ಭೂಮಿಯ ಮೇಲೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. ಅವರಿಂದ ಭೂ ಮಾಲೀಕರು ಭೂಮಿಯನ್ನು ಕಿತ್ತುಕೊಂಡು ಬೇರೆಯವರಿಗೆ ಕೊಡಬಹುದಿತ್ತು. ಭೂ ಸುಧಾರಣೆಯ ಅಡಿಯಲ್ಲಿ ಈ ಪದ್ಧತಿಯನ್ನು ನಿರ್ಮೂಲನೆ ಮಾಡಲಾಯಿತು.

(3) ಭೂ ಹಿಡುವಳಿಗಳ ಮೇಲೆ ಗರಿಷ್ಠ ಮಿತಿ ಹೇರಿಕೆ :

ಸಾಗುವಳಿದಾರನು ಹೊಂದುವ ಭೂ ಹಿಡುವಳಿಗಳ ಮೇಲೆ ಗರಿಷ್ಟ ಮಿತಿಯನ್ನು ಹೇರಲಾಯಿತು.

ನೀರಾವರಿ ಭೂಮಿಯಾದರೆ : 10 ರಿಂದ 18 ಎಕರೆ

ಅರೆ ನೀರಾವರಿ ಭೂಮಿಯಾದರೆ : 27 ಎಕರೆ

ಒಣ ಭೂಮಿಯಾದರೆ : 54 ಎಕರೆ ಭೂಮಿಯನ್ನು ಹೊಂದಲು ಅವಕಾಶವನ್ನು ಭೂ ಸುಧಾರಣಾ ಕಾಯ್ದೆಯು ಕಲ್ಪಿಸಿತು.

(4) ಹಿಡುವಳಿಗಳ ಘನೀಕರಣ :

ಹಿಡುವಳಿಗಳ ಘನೀಕರಣವೆಂದರೆ ಛಿದ್ರಗೊಂಡ ಕೃಷಿ ಭೂಮಿಯನ್ನು ಒಗ್ಗೂಡಿಸುವುದಾಗಿದೆ.

(5) ಆರ್ಥಿಕ ಹಿಡುವಳಿಗಳ ನಿರ್ಮಾಣ :

ಪ್ರತಿಯೊಬ್ಬ ಕೃಷಿಕ ತನ್ನ ಕುಟುಂಬಕ್ಕೆ ಸಾಕಷ್ಟು ಉನ್ನತಮಟ್ಟದ ಜೀವನವನ್ನು ನಡೆಸಲು ಸಾಕಾಗುವಷ್ಟು ಆದಾಯವನ್ನು ತರುವ ಕನಿಷ್ಟ ಪ್ರಮಾಣದ ಭೂ ಹಿಡುವಳಿಯನ್ನು 'ಆರ್ಥಿಕ ಹಿಡುವಳಿ' ಎಂದು ಕರೆಯುತ್ತಾರೆ.

3. ಭೂ ಹಿಡುವಳಿಗಳ ಛಿದ್ರೀಕರಣದ ಸಮಸ್ಯೆ :

ಭಾರತದ ಅರ್ಥವ್ಯವಸ್ಥೆಯಲ್ಲಿ ಕೃಷಿ ವಲಯವು ಎದುರಿಸುತ್ತಿರುವ ಒಂದು ಪ್ರಮುಖವಾದ ಸಮಸ್ಯೆ ಎಂದರೆ ಹಿಡುವಳಿಗಳ ಛಿದ್ರೀಕರಣದ ಸಮಸ್ಯೆ. ಭೂ ಹಿಡುವಳಿಗಳ ಛಿದ್ರೀಕರಣವೆಂದರೆ ಒಬ್ಬ ರೈತನ ಸಾಗುವಳಿಗೆ ಒಳಪಟ್ಟ ಭೂಮಿ ನಿರ್ಧಿಷ್ಟವಾದ ಒಂದು ಪ್ರದೇಶದಲ್ಲಿರದೇ ಬೇರೆ ಬೇರೆ ಪ್ರದೇಶದಲ್ಲಿ ಹರಡಿರುವುದಾಗಿದೆ.

ಈ ಸಮಸ್ಯೆಯಿಂದಾಗಿ ರೈತರು ತಮ್ಮ ಕೃಷಿ ಭೂಮಿಯಲ್ಲಿ ಯಾವುದೇ ಸುಧಾರಣೆಯನ್ನು ಮಾಡಲು ಸಾಧ್ಯವಾಗುವುದಿಲ್ಲ.

4. ಭೂ ಹಿಡುವಳಿಯ ಸವಕಳಿಯ ಸಮಸ್ಯೆ :

ಭೂ ಸವಕಳಿ ಎಂದರೆ ಭೂಮಿಯ ಮೇಲ್ಪದರದ ಮಣ್ಣು ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ಕಾರಣಗಳಿಂದ ನಾಶ ಹೊಂದುವುದಾಗಿದೆ.

ಕಾರಂತರ ಪ್ರಕಾರ ಭೂ ಸವಕಳಿಗೆ ಕಾರಣಗಳು ಪ್ರಮುಖವಾಗಿ ಮೂರು :-

1. ಗಾಳಿ – ವೇಗವಾಗಿ ಬೀಸುವ ಗಾಳಿ ಫಲವತ್ತಾದ ಮೇಲ್ಪದರವನ್ನು ನಾಶಪಡಿಸುತ್ತದೆ.

2. ಮಳೆ ರಭಸವಾಗಿ ಬೀಳುವ ಮಳೆಯು ಭೂ ಸವಕಳಿಗೆ ಕಾರಣವಾಗುತ್ತದೆ. ಮುಖ್ಯವಾಗಿ ಇಳಿಜಾರು ಪ್ರದೇಶ, ನಮ್ಮ ಮಲೆನಾಡು, ಕರಾವಳಿ ಪ್ರದೇಶದಲ್ಲಿ ಈ ಸಮಸ್ಯೆಯನ್ನು ಕಾಣಬಹುದಾಗಿದೆ.

3. ಬೆಳೆ – ಬೆಳೆಯನ್ನು ಬೆಳೆಯುವ ವಿಧಾನವು ಸಹ ಮಣ್ಣಿನ ಸವಕಳಿಗೆ ಕಾರಣವಾಗಿದೆ. ಆಳವಾದ ಉಳುಮೆ ಪದ್ಧತಿ, ಮುಚ್ಚಿಗೆ ಬೆಳೆಯನ್ನು ಬೆಳೆಯದಿರುವುದು ಇತ್ಯಾದಿ.

4. ಭೂ ಹಿಡುವಳಿ ಮತ್ತು ಛಿದ್ರೀಕರಣ ಸಮಸ್ಯೆಗೆ ಸಹಕಾರಿ ಬೇಸಾಯ ಪದ್ಧತಿಯ ಅಳವಡಿಕೆ ಸೂಕ್ತವಾದ ಪರಿಹಾರವೆಂಬುದು ಕಾರಂತರ ಅಭಿಪ್ರಾಯವಾಗಿದೆ. ಸಹಕಾರಿ ಬೇಸಾಯ ಎಂದರೆ ಸಣ್ಣ ಸಣ್ಣ ಹಿಡುವಳಿಯನ್ನು ಹೊಂದಿರುವ ರೈತರು ತಮ್ಮ ತುಂಡು ಭೂಮಿಯನ್ನು ಒಟ್ಟುಗೂಡಿಸಿ ಸಾಂಘಿಕವಾಗಿ ಬೇಸಾಯ ಮಾಡುವುದಾಗಿದೆ.

ಈ ಪದ್ಧತಿಯನ್ನು ಉತ್ತೇಜಿಸಲು 1904ರಿಂದ ಆರಂಭವಾದ ಸಹಕಾರಿ ಆಂದೋಲನದಲ್ಲಿ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಇದು ನಿರ್ದಿಷ್ಟವಾದ ಭೌಗೋಳಿಕ ಪ್ರದೇಶದ ವ್ಯಾಪ್ತಿಗೆ ಒಳಪಟ್ಟ ರೈತರು ಒಂದು ಸಹಕಾರಿ ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ಕೃಷಿ ಭೂಮಿ, ಕೃಷಿ ಸಲಕರಣೆ ಇತ್ಯಾದಿಗಳನ್ನು ಸಂಘಕ್ಕೆ ನೀಡಿ ಸಮೂಹಿಕವಾಗಿ ಭೂಮಿಯನ್ನು ಸಾಗುವಳಿಗೆ ಒಳಪಡಿಸಿ ಬಂದಂತಹ ಉತ್ಪನ್ನದಲ್ಲಿ ಪಾಲನ್ನು ಪಡೆಯುವ ಪದ್ಧತಿಯಾಗಿದೆ.

ಈ ಸಹಕಾರಿ ಬೇಸಾಯದಿಂದ ಲಭಿಸುವ ಲಾಭಗಳೆಂದರೆ

ಈ ಪದ್ಧತಿಯನ್ನು ಉತ್ತೇಜಿಸಲು 1904ರಿಂದ ಆರಂಭವಾದ ಸಹಕಾರಿ ಆಂದೋಲನದಲ್ಲಿ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಈ ಪದ್ಧತಿಯ ಪ್ರಕಾರ ನಿರ್ದಿಷ್ಟವಾದ ಭೌಗೋಳಿಕ ಪ್ರದೇಶದ ವ್ಯಾಪ್ತಿಗೆ ಒಳಪಟ್ಟ ರೈತರು ಒಂದು ಸಹಕಾರಿ ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ಕೃಷಿ ಭೂಮಿ, ಕೃಷಿ ಸಲಕರಣೆ ಇತ್ಯಾದಿಗಳನ್ನು ಸಂಘಕ್ಕೆ ನೀಡಿ ಸಮೂಹಿಕವಾಗಿ ಭೂಮಿಯನ್ನು ಸಾಗುವಳಿಗೆ ಒಳಪಡಿಸಿ ಬಂದಂತಹ ಉತ್ಪನ್ನದಲ್ಲಿ ಪಾಲನ್ನು ಪಡೆಯುವ ವಿಧಾನವಾಗಿದೆ.

ಸಹಕಾರಿ ಬೇಸಾಯದಿಂದ ಲಭಿಸುವ ಲಾಭಗಳು

1. ಆಧುನಿಕ ಬೇಸಾಯ ಪದ್ಧತಿ ಅಳವಡಿಕೆ ಸಾಧ್ಯವಾಗುತ್ತದೆ. ಚಿಕ್ಕ ಚಿಕ್ಕ ರೈತರು ಪ್ರತ್ಯೇಕವಾಗಿ ಸಾಗುವಳಿ ಮಾಡಿದರೆ ಆರ್ಥಿಕವಾಗಿ ಆಧುನಿಕ ಯಂತ್ರೋಪಕರಣಗಳನ್ನು ಖರೀದಿ ಮಾಡುವುದಾಗಲಿ ಅಥವಾ ಬಳಕೆ ಮಾಡುವುದಾಗಲೀ ಅವರ ಆರ್ಥಿಕ ದುರ್ಬಲತೆಯಿಂದಾಗಿ ಸಾಧ್ಯವಾಗುವುದಿಲ್ಲ. ಆದರೆ ಸಹಕಾರಿ ಬೇಸಾಯದಿಂದ ಇದು ಸಾಧ್ಯವಾಗುತ್ತದೆ.

2. ಮಿತವ್ಯಯ ಕೃಷಿ ಸಲಕರಣೆ ಹಾಗೂ ಇತ್ಯಾದಿ ಕೃಷಿಯ ಮೂಲಭೂತ ಅವಶ್ಯಕತೆಗಳನ್ನು ಕೊಂಡುಕೊಳ್ಳಲು ರೈತರು ಖರ್ಚು ಮಾಡುವ ಹಣದಲ್ಲಿ ಮಿತವ್ಯಯವನ್ನು ಸಾಧಿಸಲು ಸಾಧ್ಯವಾಗುತ್ತದೆ.

---

3. ಡಾ|| ಕೆ. ಶಿವರಾಮ ಕಾರಂತ – ನೇಗಿಲ ಯೋಗಿ ಜೀವನ, ಡಿಸೆಂಬರ್ 1945)

4. ಡಾ|| ಕೆ. ಶಿವರಾಮ ಕಾರಂತ – ನೇಗಿಲ ಯೋಗಿ ಜೀವನ, ಡಿಸೆಂಬರ್ 1945)

೩. ಉತ್ಪಾದಕತೆಯಲ್ಲಿ ಹೆಚ್ಚಳ ಆಧುನಿಕ ರೀತಿಯ ಬೇಸಾಯ ಪದ್ಧತಿಯನ್ನು ಅಳವಡಿಸಿ ಕೊಳ್ಳುವುದರಿಂದ ಉತ್ಪಾದಕತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ನಮ್ಮ ದೇಶದ ಕೃಷಿ ಅಭಿವೃದ್ಧಿ ಸಾಧ್ಯವಾಗುತ್ತದೆ.

4. ಹೆಚ್ಚಿನ ಬಂಡವಾಳ ಲಭ್ಯತೆ – ಸಾಮೂಹಿಕವಾಗಿ ಕೃಷಿ ಭೂಮಿಯನ್ನು ಸಾಗುವಳಿಗೆ ಅಳವಡಿಸುವುದರಿಂಧ ಹಣಕಾಸು ಸಂಸ್ಥೆಗಳಂದ ಸಾಲಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

೫. ಸಹಕಾರಿ ಬೇಸಾಯುವನ್ನು ಅಳವಡಿಸಿಕೊಳ್ಳುವುದರಿಂದ ಕೃಷಿಯನ್ನು ಉದ್ಯಮವೆಂದು ಪರಿಗಣಿಸು ವುದು ಸಾಧ್ಯವಾಗುತ್ತದೆ.

ಆದರೆ ಈ ಪದ್ಧತಿ ಯಶಸ್ವಿಯಾಗಬೇಕಾದರೆ ರೈತರ ಸಂಕುಚಿತ ಭಾವನೆಗಳರಬಾರದು. ಸಹಕಾರಿ ತತ್ವದ ಮೇಲೆ ನಂಬಿಕೆಯನ್ನು ಅವರು ಹೊಂದಿರಬೇಕು, ಜೊತೆಗೆ ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಅಧಿಕವಾಗಿರಬೇಕು.

ಕೃಷಿಯ ಅಭಿವೃದ್ಧಿಗೆ ಅಗತ್ಯ ಪ್ರಮಾಣದಲ್ಲಿ ಗೊಬ್ಬರದ ಪೂರೈಕೆ ಆಗಬೇಕೆಂದು ಒತ್ತಿ ಹೇಳದ್ದಾರೆ. ಭಾರತದಲ್ಲಿ ಯಾವ ಯಾವ ಬೆಳೆಗೆ ಯಾವ ಯಾವ ಪೋಷಕಾಂಶಗಳು ಬೇಕು ಎಂಬ ಜ್ಞಾನದ ಕೊರತೆ ನಮ್ಮ ರೈತರಲ್ಲಿ ಎದ್ದು ಕಾಣುತ್ತದೆ ಎನ್ನುತ್ತಾರೆ. ಈ ಸಮಸ್ಯೆಯ ನಿವಾರಣೆಗಾಗಿ ಮಣ್ಣು ಪರೀಕ್ಷೆಯ ಆಧಾರದಲ್ಲಿ ಅಗತ್ಯ ಪೋಷಕಾಂಶವನ್ನು ಪೂರೈಸಬೇಕು. ಅಗತ್ಯ ಪೋಷಕಾಂಶಗಳನ್ನು ಕೃಷಿಯಲ್ಲಿ ಬಳಸುವುದರಿಂದ ಉತ್ತಮ ಇಳುವರಿಯ ಜೊತೆಗೆ ಉತ್ತಮ ಆರೋಗ್ಯವನ್ನೂ ಪಡೆಯಬಹುದು. ಈ ಅಂಶವನ್ನು ವಿವರಿಸಲು ಕಾರಂತರು ಅಮೇರಿಕಾದಲ್ಲಿ ತಲೆದೋರಿದ ಹಲ್ಲಿನ ಬೇನೆಯ ಸಮಸ್ಯೆಯನ್ನು ಉದಾಹರಣೆಯಾಗಿ ನೀಡುತ್ತಾರೆ. ಮಣ್ಣು ಪರೀಕ್ಷೆಯ ಆಧಾರದಲ್ಲಿ ಸಸ್ಯಗಳಿಗೆ ಅಗತ್ಯ ಪೋಷಕಾಂಶಗಳನ್ನು ಒದಗಿಸಿರುವುದರಿಂದ ಜನರನ್ನು ಕಾಡುತ್ತಿದ್ದ ಹಲ್ಲಿನ ಬೇನೆಯ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಯಿತು ಎಂದಿದ್ದಾರೆ.

2:2 ಕೃಷಿ ಅಭಿವೃದ್ಧಿಯಲ್ಲಿ ಪಶು ಸಂಗೋಪನೆಯ ಪಾತ್ರ :

ಕೃಷಿ ಅವಶ್ಯಕತೆಯಲ್ಲಿ ಒಂದಾದ ಸಾವಯವ ಗೊಬ್ಬರ ಪೂರೈಕೆಯಲ್ಲಿ ಜಾನುವಾರುಗಳ ಪಾತ್ರ ಬಹಳ ಮುಖ್ಯ. "ನಮ್ಮ ದೇಶದಲ್ಲಿ ಜಾನುವಾರುಗಳ ಸಂಖ್ಯೆಗೇನು ಕೊರತೆ ಇಲ್ಲ, ಆದರೆ ಚೆನ್ನಾಗಿ ಹಾಲು ಕೊಡಬಲ್ಲ ಹಾಗೂ ಉಳುಮೆ ಮಾಡಬಲ್ಲ ಜಾನುವಾರುಗಳ ಕೊರತೆ ಕಂಡು ಬರುತ್ತಿದೆ. ನಮ್ಮ ದೇಶದ ಜನಸಂಖ್ಯೆಯೇ ಅಪಾರ, ದನ ಸಂಖ್ಯೆಯೂ ಅಪಾರ. 40 ಕೋಟಿ ಜಾನುವಾರುಗಳವೆ. ಬೇಕಾದುದಕ್ಕಿಂತ ಅಧಿಕ ಪ್ರಮಾಣದಲ್ಲಿ ದನಕರುಗಳವೆಯಾದರೂ, ಚೆನ್ನಾಗಿ ಉಳುಮೆ ಮಾಡಬಲ್ಲ ದೃಢಕಾಯ ಪಶುಗಳ ಸಂಖ್ಯೆ ತೀರಾ ವಿರಳ. ಹಾಲು ಕೊಡುವ ವಿಷಯದಲ್ಲೂ ಅವು ಹಿಂದಿವೆ. ನಮ್ಮ ದೇಶದಲ್ಲಿ ಹಸುಗಳು 1 ಸೇರು ಹಾಲನ್ನೂ ಕೊಡಲಾರವು" ಎಂಬುದು ನಮ್ಮ ದೇಶದ ಜಾನುವಾರುಗಳನ್ನು ಕುರಿತ ಕಾರಂತರ ಅನಿಸಿಕೆಯಾಗಿದೆ – 6

ಪಶು ಸಂಗೋಪನೆಯ ಆಧುನೀಕರಣಕ್ಕೆ ಅವರು ಹೆಚ್ಚಿನ ಒತ್ತನ್ನು ನೀಡುತ್ತಾರೆ. ಹಾಲಿನ ಉತ್ಪಾದನೆಯ ಹೆಚ್ಚಳಕ್ಕೆ ಸಂಕರ ತಳಿಗಳನ್ನು ಅಭಿವೃದ್ಧಿ ಪಡಿಸುವ ಅಗತ್ಯವನ್ನು ಆಗ್ರಹಪೂರ್ವಕವಾಗಿ ಹೇಳುತ್ತಾರೆ. ಸಂಕರ ತಳಿಗಳ ಅಭಿವೃದ್ಧಿಯಿಂದ ಅಧಿಕ ಹಾಲಿನ ಉತ್ಪಾದನೆಯ ಜೊತೆಗೆ ಉತ್ತಮ ಗುಣಮಟ್ಟದ ಗೊಬ್ಬರವನ್ನು ಪಡೆಯಲು ಸಾಧ್ಯ.

2:3 ಕೃಷಿ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ

ಭಾರತದ ಕೃಷಿ ಅಭಿವೃದ್ಧಿಗೆ ಅಗತ್ಯವಾದ ಮತ್ತೊಂದು ಅಂಶವೆಂದರೆ ಕೃಷಿಯ ಆಧುನೀಕರಣ. ಈ ನಿಟ್ಟಿನಲ್ಲಿ ಸಂಶೋಧನೆಗಳು ತೀರಾ ಅಗತ್ಯವೆಂದು ಕಾರಂತರು ಅಭಿಪ್ರಾಯ ಪಟ್ಟಿದ್ದಾರೆ. ಇಂದು ಸಂಶೋಧನೆಯ ಫಲವಾಗಿ ತುಂಬಾ ಚಳಿ ಇರುವ ಹವಾಮಾನದಲ್ಲಿ ಬೆಳೆಯದ ಗೋಧಿಯನ್ನು ಕೂಡಾ ಬೆಳೆಯುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಮ್ಮ ಕಾಡುಗಳಲ್ಲಿ ಕೇಳುವವರಿಲ್ಲದ ಬಿದಿರನ್ನು ಸಂಯುಕ್ತ ಸಂಸ್ಥಾನದಲ್ಲಿ ವ್ಯವಸ್ಥಿತವಾಗಿ ಬೆಳೆದು ಲಾಭವನ್ನು ಪಡೆಯುತ್ತಿದ್ದಾರೆ. ಕ್ಯಾಲಿಫೋರ್ನಿಯಾದ ಹಣ್ಣುಗಳ ತೋಟದಲ್ಲಿ ಹಬ್ಬುವ ಹಿಮದ ಹೊದಿಕೆಯನ್ನು ಚದುರಿಸಲು ಸುಡುಬೆಂಕಿಯನ್ನು ಹಾಕುತ್ತಾರೆ. ಕೃತಕ ಬಿಸಿಲಿನ ನೆರವಿನಿಂದ ಗಾಜಿನ ಮನೆಗಳಲ್ಲಿ ತರಕಾರಿ ಬೆಳೆಸುತ್ತಿದ್ದಾರೆ. ಯಾರಿಗೂ ಬೇಡದ ಗುಹೆ, ಗಣಿಗಳಲ್ಲಿ ಅಟ್ಟಣಿಗೆಗಳ ಮೇಲೆ ಅಣಬೆ ಕೃಷಿಯನ್ನು ಮಾಡುತ್ತಿದ್ದಾರೆ. ಇವೆಲ್ಲ ಬರಿಯ ತಮಾಷೆಗಳಲ್ಲ. ಪ್ರಯೋಗಗಳು ಮಾತ್ರವಲ್ಲ, ಅವರ ಕೃಷಿ ಉತ್ಪನ್ನಗಳು ನಮ್ಮ ದೇಶಗಳ ಬೆಳೆಗಳೊಡನೆ ಪೈಪೋಟಿಗೆ ಬರುತ್ತಿದೆ.

ಕಾರಂತರ ಅಭಿಪ್ರಾಯದಲ್ಲಿ ಭಾರತದ ಕೃಷಿ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕಾದರೆ ಕೃಷಿಯ ಎಲ್ಲಾ ಹಂತಗಳಲ್ಲಿ ಸಂಶೋಧನೆ ಅಗತ್ಯವಾಗಿದೆ. ಇಂದು ನಮ್ಮ ದೇಶದಲ್ಲಿ ಕೃಷಿಯ ಉತ್ಪಾದಕತೆ ಏನಾದರೂ ಹೆಚ್ಚಾಗುತ್ತಿದ್ದರೆ ಅದರಲ್ಲಿ ಬಹುಮುಖ್ಯ ಕೊಡುಗೆ ಸಂಶೋಧನೆಗಳದ್ದು.

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ ಸಹ ಅವು ಕೇವಲ ಉದ್ಯೋಗವನ್ನು ಅರಸುವಂತಹ ವ್ಯಕ್ತಿಗಳಿಗೆ ಮಾತ್ರ ಸಹಾಯ ಮಾಡುತ್ತಿದೆ. ಸ್ವತಃ ಭೂಮಿಯನ್ನು ಹೊಂದಿದ್ದು, ಆ ಭೂಮಿಯಲ್ಲಿ ತಾನು ಕಲಿತ ವಿದ್ಯೆಯನ್ನು ಪ್ರಯೋಗಿಸಿ, ಉತ್ತಮ ಬೆಳೆಯನ್ನು ತೆಗೆಯಬಲ್ಲ ಸ್ವಾವಲಂಬಿ ರೈತರನ್ನು ಸೃಷ್ಟಿ ಮಾಡುವಲ್ಲಿ ವಿಫಲವಾಗುತ್ತಿದೆ.

ಭಾರತದಲ್ಲಿ ಕೃಷಿ ವಲಯದಲ್ಲಿ ಬರುವ ಉತ್ಪನ್ನಗಳನ್ನು ಬಳಸಿಕೊಂಡಿದ್ದೆ ಆದಲ್ಲಿ ರೈತರ ಆದಾಯವು ಹೆಚ್ಚಾಗುವುದರಲ್ಲಿ ಯಾವ ಅನುಮಾನವು ಇಲ್ಲ.

ಕಾರಂತರು ಹೇಳುವಂತೆ ಕೃಷಿ ಶಿಕ್ಷಣದ ಸಲುವಾಗಿ ನೂರಾರು ಪ್ರಾಥಮಿಕ ಶಾಲೆಗಳನ್ನು ತೆರೆಯುವುದು ಅವಶ್ಯಕ. ರೈತರು ತಮ್ಮ ಸಮೀಪದಲ್ಲಿ ನವೀನ ರೀತಿಯ ಕೃಷಿಯನ್ನು

---

6. ನೇಗಿಲಯೋಗಿ – ಜೀವನ – ಡಿಸೆಂಬರ್ – 1945

ಕಲಿಯಲು ಮಾದರಿ ಕೃಷಿ ಕ್ಷೇತ್ರಗಳನ್ನು ನಡೆಸುವುದು ಅವಶ್ಯಕ. ಇವುಗಳ ಜೊತೆಗೆ ಉಚ್ಚ ಶಿಕ್ಷಣಕ್ಕೆ ಸಂಬಂಧಿಸಿದ ಪ್ರೌಢ ಶಿಕ್ಷಣ ಸಂಶೋಧನೆಗಳ ಸಲುವಾಗಿ ಏರ್ಪಾಡು ಮಾಡಬೇಕು. ಈ ಶೋಧನೆಗಳು ಜನತೆಯಲ್ಲಿ ಪ್ರಚಾರವಾಗಲು ಬೇಕಾದ ಪ್ರಯತ್ನ, ಅರ್ಥಿಕ ವ್ಯವಸ್ಥೆ, ಶಾಸನದ ಬಲ ಎಲ್ಲವೂ ಬೇಕು.

2:4 ಕೃಷಿ ಅಭಿವೃದ್ಧಿಯಲ್ಲಿ ಮಾರುಕಟ್ಟೆಯ ಪಾತ್ರ

ಕಾರಂತರ ಪ್ರಕಾರ ಕೃಷಿ ಅಭಿವೃದ್ಧಿಗೆ ಅಗತ್ಯವಾದ ಮತ್ತೊಂದು ಪೂರಕ ಅಂಶವೆಂದರೆ ಮಾರುಕಟ್ಟೆಯ ವ್ಯವಸ್ಥೆ. ರೈತ ತಾನು ಎಷ್ಟೇ ಸಾಹಸದಿಂದ ಬೆಳೆಯನ್ನು ಬೆಳೆದರೂ ಅವನು ಬೆಳೆದ ಉತ್ಪನ್ನಗಳಿಗೆ ಅವನ ಊರಿನಲ್ಲಿ ಗಿರಾಕಿಗಳು ಸಿಗಲಾರರು. ಅದು ಪರದೇಶಗಳಿಗೆ ರಫ್ತಾಗಬೇಕಾಗುತ್ತದೆ. ಆದರೆ ನಮ್ಮ ದೇಶದಲ್ಲಿ ರೈತರಿಗೆ ಮಾರುಕಟ್ಟೆ ಮೇಲೆ ಹತೋಟಿ ಇರುವುದಿಲ್ಲ. ಮಧ್ಯವರ್ತಿಗಳು, ರೈತರು ಮತ್ತು ಗ್ರಾಹಕರ ಮಧ್ಯೆ ಇರುವುದನ್ನು ಕಾಣಬಹುದು.

ಭಾರತದ ಕೃಷಿ ಮಾರುಕಟ್ಟೆಯಲ್ಲಿ ಅನೇಕ ದೋಷಗಳಿವೆ. ಅವುಗಳೆಂದರೆ :-

1. **ಮಧ್ಯಸ್ಥಗಾರರ ಹಾವಳಿ** : ಭಾರತದಲ್ಲಿ ಗ್ರಾಹಕರು ಮತ್ತು ಉತ್ಪಾದಕರ ಮಧ್ಯೆ ಮಧ್ಯವರ್ತಿಗಳ ವರ್ಗವೊಂದು ಸೃಷ್ಟಿಯಾಗಿದ್ದು, ಈ ವರ್ಗ ರೈತರನ್ನು ಹಾಗೂ ಗ್ರಾಹಕರನ್ನು ಶೋಷಣೆ ಮಾಡುತ್ತಲಿದೆ.

2. ಪ್ರಮಾಣೀಕರಣ ಮತ್ತು ವರ್ಗೀಕರಣದ ಅಭಾವ : ಕೃಷಿ ಉತ್ಪನ್ನಗಳನ್ನು ಅವುಗಳ ಗುಣಮಟ್ಟಕ್ಕೆ ಅನುಗುಣವಾಗಿ ವಿಂಗಡಿಸುವ ಮತ್ತು ಗುಣಮಟ್ಟವನ್ನು ಖಾತ್ರಿ ಪಡಿಸುವ ಯಾವುದೇ ವ್ಯವಸ್ಥೆ ನಮ್ಮಲ್ಲಿ ಇರುವುದಿಲ್ಲ.

3. ಸಾರಿಗೆ ಸೌಲಭ್ಯದ ಅಭಾವ : ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಸಾರಿಗೆ ವ್ಯವಸ್ಥೆ ಅಗತ್ಯವಾಗಿದ್ದು ನಮ್ಮಲ್ಲಿ ಎಲ್ಲಾ ಕಾಲದಲ್ಲಿಯೂ ಬಳಸಬಹುದಾದ ಸಾರಿಗೆ ವ್ಯವಸ್ಥೆ ಲಭ್ಯವಿರುವುದಿಲ್ಲ. ಇದರಿಂದ ರೈತರು ತಮ್ಮ ಉತ್ಪನ್ನಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿಯೇ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗುತ್ತದೆ.

4. ಉಗ್ರಾಣಗಳ ಅಭಾವ : ತಾನು ಬೆಳೆದ ಕೃಷಿ ಉತ್ಪನ್ನಗಳನ್ನು ಸುರಕ್ಷಿತವಾಗಿ ಇಡಲು ಉಗ್ರಾಣ ಮಳಿಗೆಗಳ ಅವಶ್ಯಕತೆ ಇದ್ದು ಇದರಿಂದ ಉತ್ತಮ ಬೆಲೆಯಲ್ಲಿ ಸರಕನ್ನು ಮಾರಾಟ ಮಾಡಲು ಸಾಧ್ಯವಾಗುತ್ತದೆ. ಆದರೆ ಭಾರತದಲ್ಲಿ ಇಂತಹಾ ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲ.

5. ಮಾರುಕಟ್ಟೆಯ ಮಾಹಿತಿಯ ಅಭಾವ : ಮಾರುಕಟ್ಟೆಯ ಸ್ಥಿತಿಗತಿಗಳು ಅಂದರೆ ಬೆಲೆ, ದಾಸ್ತಾನಿನ ಪ್ರಮಾಣ, ಬೇಡಿಕೆಯಲ್ಲಿನ ಬದಲಾವಣೆ ಮುಂತಾದ ವಿಷಯಗಳಿಗೆ

ಸಂಬಂಧಿಸಿದಂತೆ ರೈತರಿಗೆ ಮಾಹಿತಿಯನ್ನು ಒದಗಿಸುವ ವ್ಯವಸ್ಥೆ ನಮ್ಮ ದೇಶದಲ್ಲಿ ಸಮರ್ಪಕವಾಗಿರುವುದಿಲ್ಲ.

6. ಸಾಲ ಸೌಲಭ್ಯಗಳ ಕೊರತೆ : ಭಾರತದಲ್ಲಿ ರೈತರು ಹಣಕಸಿನ ತೊಂದರೆಗಳಿಂದಾಗಿ ತಾವು ಬೆಳೆದ ಉತ್ಪನ್ನಗಳನ್ನು ಒತ್ತಾಯ ಪೂರ್ವಕವಾಗಿ ಮಾರಾಟ ಮಾಡುತ್ತಾರೆ. ಇದರಿಂದ ರೈತರು ಸಾಕಷ್ಟು ನಷ್ಟವನ್ನು ಅನುಭವಿಸುತ್ತಾರೆ. ಸರ್ಕಾರದಿಂದ ಸೂಕ್ತ ಸಾಲ, ಸೌಲಭ್ಯವನ್ನು ಒದಗಿಸುವ ವ್ಯವಸ್ಥೆ ಇರುವುದಿಲ್ಲ.

7. ಮೋಸದ ವ್ಯವಹಾರ : ಗ್ರಾಮಾಂತರ ಪ್ರದೇಶಗಳಲ್ಲಿ ತೂಕ, ಅಳತೆ, ಬೆಲೆಗಳಲ್ಲಿ ಮಧ್ಯವರ್ತಿಗಳು ರೈತರನ್ನು ಶೋಷಿಸುತ್ತಿದ್ದಾರೆ.

8. ರೈತರಲ್ಲಿ ಸಂಘಟನೆಯ ಅಭಾವ : ಭಾರತ ದೇಶದಲ್ಲಿ ರೈತಾಪಿ ವರ್ಗದಲ್ಲಿ ತಮ್ಮ ಹಿತವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಸಂಘಟನೆಯ ಕೊರತೆ ಎದ್ದು ಕಾಣುತ್ತಿದೆ.

9. ಅಧಿಕ ಮಾರಾಟ ವೆಚ್ಚ : ಅನಿಯಂತ್ರಿತ ಹಾಗೂ ಕ್ರಮಬದ್ಧವಲ್ಲದ ಮಾರುಕಟ್ಟೆಯಲ್ಲಿ ಅನಾವಶ್ಯಕವಾಗಿ ರೈತರಿಂದ ಅಧಿಕ ಮಾರಾಟ ವೆಚ್ಚವನ್ನು ವಸೂಲಿ ಮಾಡಲಾಗುತ್ತಿದೆ.

10. ಸರ್ಕಾರದ ನಿರ್ಲಕ್ಷ : ಸ್ವಾತಂತ್ರ್ಯಾನಂತರದಲ್ಲಿ ಸರ್ಕಾರ ರೈತರ ವಿಚಾರವಾಗಿ ದಿವ್ಯ ನಿರ್ಲಕ್ಷ್ಯವನ್ನು ತಾಳಿರುತ್ತದೆ.

ಈ ಮೇಲೆ ವಿವರಿಸಿದ ದೋಷಗಳ ನಿವಾರಣೆಗಾಗಿ ಸ್ವಾತಂತ್ರ್ಯಾನಂತರದಲ್ಲಿ ಸರ್ಕಾರ ಸಾಕಷ್ಟು ಪ್ರಯತ್ನಿಸುತ್ತಿದ್ದಾಗ್ಯೂ ನಿರೀಕ್ಷಿತ ಫಲವನ್ನು ಪಡೆಯಲು ಸಾಧ್ಯವಾಗಿಲ್ಲ.

ಕಾರಂತರು ತಿಳಿಸುವಂತೆ ರೈತರು ಮುಖ್ಯವಾಗಿ ಎರಡು ರೀತಿಯ ಬೆಳೆಯ ಪದ್ಧತಿಯನ್ನು ಅನುಸರಿಸಬೇಕು.

1. ಆಹಾರದ ಬೆಳೆಗಳು
2. ವಾಣಿಜ್ಯದ ಬೆಳೆಗಳು

ಆಹಾರದ ಬೆಳೆಯಿಂದ ರೈತರಿಗೆ ಅಗತ್ಯವಾದ ಆಹಾರ ಲಭ್ಯವಾದರೆ ವಾಣಿಜ್ಯ ಬೆಳೆಯಿಂದ ಹಣ ದೊರೆಯುತ್ತದೆ. ರೈತರ ಸ್ಥಿತಿಗತಿಯ ಸುಧಾರಣೆಗೆ, ರೈತರ ಉತ್ಪನ್ನಗಳಿಗೆ ಕನಿಷ್ಟ ಬೆಲೆಯನ್ನು ನಿಗದಿಗೊಳಿಸಬೇಕೆಂದು ಕಾರಂತರು ಒತ್ತಿ ಹೇಳುತ್ತಾರೆ. ಇದರಿಂದ ರೈತರಿಗೂ ಹಾಗೂ ಗ್ರಾಹಕರಿಗೂ ಲಾಭವಾಗುತ್ತದೆ.

ಕೃಷಿ ಅಭಿವೃದ್ಧಿಗಾಗಿ ಸರ್ಕಾರ ಸೂಕ್ತವಾದ ಆಮದು, ರಫ್ತು ನೀತಿಯನ್ನು ಅನುಸರಿಸಬೇಕು. ರೈತರ ಉತ್ಪನ್ನಗಳನ್ನು ಸೂಕ್ತ ಬೆಲೆ ದೊರಕುವವರೆಗೂ ಶೇಖರಿಸಿಡಲು ದಾಸ್ತಾನು ಮಳಿಗೆ, ಶೀತಲ ಗೃಹಗಳು ಬಹಳ ಅಗತ್ಯವಾಗಿವೆ.

ರೈತರ ಅಭಿವೃದ್ಧಿಗಾಗಿ ಕೃಷಿ ಚಟುವಟಿಕೆಯ ಜೊತೆಗೆ ಬಿಡುವಿನ ವೇಳೆಯ ಸಮರ್ಪಕ ಬಳಕೆಗಾಗಿ ಗೃಹ ಕೈಗಾರಿಕೆಗಳ ಅಭಿವೃದ್ಧಿ ಬಹಳ ಮುಖ್ಯ. ಇದರಿಂದ ರೈತರಿಗೆ ಹೆಚ್ಚುವರಿ ಉದ್ಯೋಗಾವಕಾಶ ಹಾಗೂ ವರಮಾನ ಲಭ್ಯವಾಗುತ್ತದೆ.

2:5 ಕೃಷಿ ಅಭಿವೃದ್ಧಿಯಲ್ಲಿ ಬಂಜರು ಭೂಮಿ ಸಾಗುವಳಿಯ ಪಾತ್ರ

ಡಾ॥ ಕೆ. ಶಿವರಾಮ ಕಾರಂತರು ಭಾರತದ ಕೃಷಿ ಅಭಿವೃದ್ಧಿಗೆ ಅದರಲ್ಲೂ ಮುಖ್ಯವಾಗಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಬಂಜರು ಭೂಮಿ ಸಾಗುವಳಿಗೆ ಪ್ರಾಮುಖ್ಯತೆ ನೀಡಿರುತ್ತಾರೆ. ಈ ಬಂಜರು ಭೂಮಿಯ ಸಾಗುವಳಿಗೆ ನೀರಾವರಿ ಬಹಳ ಮುಖ್ಯ. ನೀರಿನ ಬಳಕೆಗಾಗಿ ನದಿಯ ನೀರನ್ನು ಆಶ್ರಯಿಸಿರಬೇಕು. ಅದಕ್ಕಾಗಿ ಕೃತಕ ವಿಧಾನಗಳಾದ ಪಂಪ್ ಸೆಟ್, ಏತ ನೀರಾವರಿ ಇತ್ಯಾದಿಗಳನ್ನು ಅಳವಡಿಸಿಕೊಳ್ಳಲು ಸರ್ಕಾರ ಸೂಕ್ತ ವ್ಯವಸ್ಥೆಗಳನ್ನು ಪ್ರೋತ್ಸಾಹಿಸುವ ಮೂಲಕ ಬಂಜರು ಭೂಮಿಯನ್ನು ಸಾಗುವಳಿ ಮಾಡಬೇಕಾಗುತ್ತದೆ.

ಮಲೆನಾಡಿನಲ್ಲಿ ಸಾಮಾನ್ಯವಾಗಿರುವ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಸಿಡುಬು ಇತ್ಯಾದಿಗಳನ್ನು ತಡೆಗಟ್ಟಿದಾಗ ಮಾತ್ರ ಕಾರ್ಮಿಕರನ್ನು ಕೃಷಿ ಕ್ಷೇತ್ರದ ಕಡೆಗೆ ಆಕರ್ಷಿಸಲು ಸಾಧ್ಯ.

ಮಲೆನಾಡಿನ ಪ್ರದೇಶಗಳಲ್ಲಿನ ಕೃಷಿಯ ಮತ್ತೊಂದು ಸಮಸ್ಯೆಯೆಂದರೆ ಕಾಡುಪ್ರಾಣಿಗಳ ಹಾವಳಿ, ರೈತರು ಚಿಕ್ಕ ಚಿಕ್ಕ ಹಿಡುವಳಿಗಳನ್ನು ಹೊಂದಿರುವುದರಿಂದ ಹಾನಿಯ ಪ್ರಮಾಣ ಅಧಿಕವಾಗಿದೆ. ಅರಣ್ಯ ಇಲಾಖೆ ಈ ನಿಟ್ಟಿನಲ್ಲಿ ಸೂಕ್ತ ಕ್ರಮವನ್ನು ಕೈಗೊಂಡಾಗ ಮಾತ್ರ ಬಂಜರು ಭೂಮಿ ಅಥವಾ ಪಾಳು ಭೂಮಿಯ ಬೇಸಾಯ ಸಾಧ್ಯವಾಗುತ್ತದೆ.

ಕಾರಂತರು ರೈತರ ಆದಾಯವನ್ನು ಹೆಚ್ಚಿಸಲು ಹಾಗೂ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಲು ಜೇನು ಸಾಕಣೆಗೆ ಪ್ರೋತ್ಸಾಹ ನೀಡಬೇಕೆಂದಿದ್ದಾರೆ. ಇದರಿಂದ ಜೇನುತುಪ್ಪದ ಸಂಗ್ರಹಣೆಯಿಂದ ರೈತರ ಆದಾಯ ಹೆಚ್ಚುತ್ತದೆ. ಉತ್ತಮ ಪರಾಗ ಸ್ಪರ್ಶ ಕ್ರಿಯೆಯಿಂದ ಬೆಳೆಯ ಪ್ರಮಾಣ ಅಧಿಕವಾಗುತ್ತದೆ.

ರೈತರು ತಮ್ಮ ಮುಖ್ಯ ಬೆಳೆಯ ಜೊತೆಗೆ ಉಪ ಬೆಳೆಗಳಾದ ಅನಾನಾಸು ಕೃಷಿಯನ್ನು ಕೈಗೊಳ್ಳಬೇಕೆಂದು ಕಾರಂತರು ಸಲಹೆ ನೀಡುತ್ತಾರೆ. ಹಣ್ಣಿನ ರಸವನ್ನು ಸಂಸ್ಕರಿಸಿ ಮಾರಾಟ ಮಾಡುವುದರಿಂದ ರೈತರು ಹೆಚ್ಚಿನ ಲಾಭವನ್ನು ಪಡೆಯಬಹುದಾಗಿದೆ.

ರೈತರು ಕೃಷಿಯಲ್ಲಿ ಉತ್ಪಾದನಾ ವೆಚ್ಚವನ್ನು ತಗ್ಗಿಸಲು ಹಾಗೂ ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳಲು ಹಸಿರೆಲೆ ಗೊಬ್ಬರ, ಪರ್ಯಾಯ ಬೆಳೆ ಪದ್ಧತಿಯನ್ನು ಅನುಸರಿಸುವುದು ಸೂಕ್ತ.

ಜೊತೆಗೆ ಎರೆಹುಳು ಗೊಬ್ಬರವನ್ನು ತಾವೇ ತಯಾರಿಸಿ ಕೊಳ್ಳುವುದರಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಉತ್ಪನ್ನವನ್ನು ಪಡೆಯಬಹುದಾಗಿದೆ.

ಕಾರಂತರು ತಮ್ಮ ಲೇಖನವಾದ 'ಕೋಟಿಗಟ್ಟಲೆ ಜನಕ್ಕೆ ಅನ್ನ ದೊರಕೀತೆ' – ವಿಚಾರವಾಣಿ, 31–5–1951 ಎಂಬುದರಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಎರಡು ರೀತಿಯ ಮಾರ್ಗೋಪಾಯಗಳನ್ನು ಸೂಚಿಸಿದ್ದಾರೆ. ಅವುಗಳೆಂದರೆ :– 1. ಕೃಷಿ ಭೂಮಿಯ ವಿಸ್ತರಣೆ ಅಂದರೆ ವ್ಯವಸಾಯ ಯೋಗ್ಯ ಪಾಳು ಭೂಮಿಯನ್ನು ಸಾಗುವಳಿಗೆ ಒಳಪಡಿಸುವುದು.

3. ಕೃಷಿ ಉತ್ಪನ್ನಗಳ ಹೆಚ್ಚಳ ಆಧುನಿಕ ಕೃಷಿ ವಿಧಾನಗಳನ್ನು ಅಳವಡಿಸುವ ಮೂಲಕ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ತಿಳಿಸುತ್ತಾರೆ.

ಕೃಷಿಯ ಅಭಿವೃದ್ಧಿಗೆ ಅಡೆತಡೆಯಾಗಿರುವ ಬಂಡವಾಳದ ಕೊರತೆಯನ್ನು ನಿವಾರಿಸಬೇಕೆಂದು ಇದರಿಂದ ಮಾತ್ರ ಕೃಷಿಯ ಆಧುನೀಕರಣ ಸಾಧ್ಯವೆಂಬುದು ಕಾರಂತರ ಅಚಲವಾದ ನಂಬಿಕೆಯಾಗಿದೆ.

ಕಾರಂತರು ಕೃಷಿಯ ಅಭಿವೃದ್ಧಿಗಾಗಿ ಸೂಚಿಸಿರುವ ಹಲವಾರು ಕ್ರಮಗಳು ಸೂಕ್ತವಾಗಿದೆ. ಕೃಷಿ ಸಂಶೋಧನೆಗಾಗಿ ಒತ್ತನ್ನು ನೀಡುವುದು, ಕೃಷಿ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗುವಂತೆ ಮಾಡುವುದು, ಕೃಷಿ ಭೂಮಿಯಲ್ಲಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವ ಮೂಲಕ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸುವುದು. ಇವುಗಳ ಜೊತೆಗೆ ರೈತರ ಅವಶ್ಯಕತೆಗಳಾದ ಶೀತಲ ಗೃಹಗಳ ಸ್ಥಾಪನೆ, ದಾಸ್ತಾನು ಮಳಿಗೆಗಳ ಸುಧಾರಣೆ ಇತ್ಯಾದಿಗಳು.

ಗೃಹ ಕೈಗಾರಿಕೆಗಳನ್ನು, ಗುಡಿ ಕೈಗಾರಿಕೆಗಳನ್ನು, ಪಶು ಸಂಗೋಪನೆಯನ್ನು ಅಭಿವೃದ್ಧಿಪಡಿಸುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಕಾರಂತರ ಅಭಿಪ್ರಾಯ ಸಮಂಜಸವಾಗಿದೆ. ಆದರೆ ಈ ಲೇಖನಗಳನ್ನು ಬರೆಯುವ ಸಮಯದಲ್ಲಿ ನಮ್ಮ ದೇಶದ ಕೃಷಿ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳೇ ಬೇರೆ, ಈಗ ಜಾಗತೀಕರಣದಿಂದ ನಮ್ಮ ಕೃಷಿ ವ್ಯವಸ್ಥೆ ಎದುರಿಸುತ್ತಿರುವ ಸಮಸ್ಯೆಗಳೇ ಬೇರೆಯಾಗಿದೆ. ಅಂದರೆ ದೇಶದ ಬೇರೆ ಬೇರೆ ಭಾಗದಲ್ಲಿ ಸಂಭವಿಸುತ್ತಿರುವ ರೈತರ ಆತ್ಮಹತ್ಯೆ, ಬೆಲೆ ಕುಸಿತ, ವಿದೇಶೀ ಪೈಪೋಟಿ

---

7. ಡಾ॥ ಕೆ. ಶಿವರಾಮ ಕಾರಂತ – ಮಲೆನಾಡಿನಲ್ಲಿ ಆಹಾರದ ಬೆಳವಣಿಗೆ, ನವಭಾರತ, 15.8.1949

ಮುಂತಾದವುಗಳಿಂದ ನಮ್ಮ ರೈತರು ಸೊರಗಿ ಹೋಗಿದ್ದಾರೆ. ಆದ್ದರಿಂದ ಬದಲಾದ ಸನ್ನಿವೇಶದಲ್ಲಿ ಕಾರಂತರ ಎಲ್ಲಾ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅವರು ಸೂಚಿಸುವ ಹಲವಾರು ಪ್ರಗತಿ ಮಾರ್ಗಗಳು ಇಂದಿಗೆ ಹೊಂದುವುದಿಲ್ಲ. ಉದಾಹರಣೆಗೆ ರಸಗೊಬ್ಬರಗಳ ಬಳಕೆ, ದೇಶದ ಕೃಷಿ ಕ್ರಾಂತಿಗೆ ಮೊದಲು ಅದರ ಅಗತ್ಯವಿದ್ದದ್ದು ನಿಜ. ಇಂದು ರೈತನಿಗೆ ರಸಗೊಬ್ಬರ ಶತ್ರುವೆಂದು ಬಣ್ಣಿಸಲಾಗುತ್ತಿದೆ. ಸಾವಯವ ಗೊಬ್ಬರದ ಶ್ರೇಷ್ಠತೆಯ ಪ್ರಚಾರ ನಡೆದಿದೆ. ಆದ್ದರಿಂದ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಕಾರಂತರ ಅಭಿಪ್ರಾಯಗಳನ್ನು ಇಂದು ವಿವೇಚನಗೆ ಒಳಪಡಿಸಬೇಕಾಗಿದೆ.

(ಡಾ|| ಕೆ. ಶಿವರಾಮ ಕಾರಂತ – ರೈತನಿಗಾಗಿ – ವಿಚಾರವಾಣಿ, ಜನವರಿ, ಜೂನ್ 1951)

ಅಧ್ಯಾಯ 3

ಕೈಗಾರಿಕೆ ಮತ್ತು ಆರ್ಥಿಕ ಅಭಿವೃದ್ಧಿ

ಮಾನವನ ಚಟುವಟಿಕೆಗಳಲ್ಲಿ ಪ್ರಮುಖವಾದದ್ದು ಎಂದರೆ ಕೈಗಾರಿಕಾ ಚಟುವಟಿಕೆ, ಇಂಗ್ಲೆಂಡ್ ನಲ್ಲಿ 1760 ರಿಂದ 1830 ರ ಅವಧಿಯಲ್ಲಿ ಕೈಗಾರಿಕಾ ಕ್ರಾಂತಿ ಸಂಭವಿಸಿತು. ಕೈಗಾರಿಕಾ ಕ್ರಾಂತಿಯೆಂದರೆ ಕೈಗಾರಿಕಾ ಕ್ಷೇತ್ರದಲ್ಲಿ ನಿರ್ಧಿಷ್ಟವಾದ ಕಾಲದಲ್ಲಿ ಸಂಭವಿಸಿದ ಮೂಲಭೂತವಾದ ಕ್ಷಿಪ್ರ ಬದಲಾವಣೆಗಳಾಗಿವೆ.

ಇಂಗ್ಲೆಂಡಿನಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಯು ಆ ದೇಶದ ಜನಜೀವನದ ಮೇಲೆ ಮಾತ್ರ ಪರಿಣಾಮವನ್ನು ಬೀರದೆ ಇತರ ದೇಶಗಳ ಮೇಲೂ ಪರಿಣಾಮವನ್ನು ಬೀರಿದೆ.

ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ಕೈಗಾರಿಕಾ ಚಟುವಟಿಕೆ ಒಂದು ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ರೂಪುಗೊಂಡಿತು. ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪರಿಣಾಮಗಳನ್ನು ಉಂಟುಮಾಡಬಲ್ಲ ಶಕ್ತಿಯನ್ನು ಪಡೆದ ಕೈಗಾರಿಕಾ ವಲಯ ಅಭಿವೃದ್ಧಿಯ ಕಡೆಗೆ ಇಂದು ಪ್ರಪಂಚದ ಪ್ರತಿಯೊಂದು ರಾಷ್ಟ್ರವೂ ಸಹ ತನ್ನ ಗಮನವನ್ನು ಕೇಂದ್ರೀಕರಿಸಿದೆ.

ಭಾರತಕ್ಕೆ ಕೈಗಾರಿಕಾ ಚಟುವಟಿಕೆಗಳೇನೂ ಹೊಸದಲ್ಲ. ಬ್ರಿಟೀಷರು ಭಾರತವನ್ನು ಅತಿಕ್ರಮಿಸುವ ಪೂರ್ವದಲ್ಲಿ ನಮ್ಮ ಗುಡಿ ಕೈಗಾರಿಕೆ ಹಾಗೂ ಗೃಹ ಕೈಗಾರಿಕಾ ಉತ್ಪನ್ನಗಳು ವಿದೇಶದಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದವು. ಆದರೆ ಬ್ರಿಟೀಷರು ಅನುಸರಿಸಿದ ಆರ್ಥಿಕ ನೀತಿಯ ಫಲವಾಗಿ ನಮ್ಮ ಕೈಗಾರಿಕಾ ವ್ಯವಸ್ಥೆ ಅವನತಿಯ ಹಾದಿಯನ್ನು ಹಿಡಿಯಿತು.

ಸ್ವಾತಂತ್ರ್ಯನಂತರದ ಅವಧಿಯಲ್ಲಿ ನಾವು ಕೈಗಾರಿಕೆಗಳ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನವನ್ನು ಯೋಜನೆಗಳ ಅವಧಿಯಲ್ಲಿ ಮಾಡಿರುತ್ತೇವೆ. ಅದರ ಫಲವಾಗಿ ಇಂದು ಪ್ರಪಂಚದ ಪ್ರಮುಖ ಕೈಗಾರೀಕೃತ ರಾಷ್ಟ್ರಗಳ ಪಟ್ಟಿಯಲ್ಲಿ ನಮ್ಮ ರಾಷ್ಟ್ರವೂ ಸಹ ಸೇರ್ಪಡೆಗೊಂಡಿದೆ.

3.1 ಭಾರತದ ಆರ್ಥಿಕತೆಯಲ್ಲಿ ಕೈಗಾರಿಕೆಗಳ ಮಹತ್ವ

ಈ ಸಂದರ್ಭದಲ್ಲಿ ಸರ್.ಎಂ. ವಿಶ್ವೇಶ್ವರಯ್ಯರವರ ಹೇಳಿಕೆಯು ಉಲ್ಲೇಖ ಸಮರ್ಥನೀಯ ವೆನಿಸುತ್ತದೆ. "ಕೈಗಾರೀಕರಣ ಇಲ್ಲವೇ ವಿನಾಶ". ಭಾರತದ ಆರ್ಥಿಕಾಭಿವೃದ್ಧಿ ಯಾಗಬೇಕಾದರೆ ಕೈಗಾರಿಕಾ ವಲಯದ ಅಭಿವೃದ್ಧಿಯಾಗಬೇಕು ಎಂಬ ಅಂಶವನ್ನು ಈ ಘೋಷಣೆ ಮನದಟ್ಟು ಮಾಡುತ್ತದೆ.

ಭಾರತದಲ್ಲಿ ಕೈಗಾರಿಕಾ ವಲಯದ ಮಹತ್ವವನ್ನು ಈ ಕೆಳಕಂಡಂತೆ ವಿವರಿಸಬಹುದಾಗಿದೆ.

1. ಉದ್ಯೋಗ ಸೃಷ್ಟಿ :- ಆಧುನಿಕ ಯುಗವನ್ನು ಕೈಗಾರಿಕಾ ಯುಗವೆನ್ನಲಾಗುತ್ತದೆ. ಕೈಗಾರಿಕೆಗಳು ಆರ್ಥಿಕಾಭಿವೃದ್ಧಿಯ ಜೀವಾಳವಿದ್ದಂತೆ. ನಿರುದ್ಯೋಗದ ಸಮಸ್ಯೆಯಿಂದ ಬಳಲುತ್ತಿರುವ ಭಾರತ- ದಂತಹ ರಾಷ್ಟ್ರದಲ್ಲಿ ಜನರಿಗೆ ಉದ್ಯೋಗವನ್ನು ಸೃಷ್ಟಿಸಲು ಈ ಕೈಗಾರಿಕೆಗಳು ಸಹಾಯ ಮಾಡುತ್ತವೆ.

2. ಅಧಿಕ ಉತ್ಪಾದನೆ :- ಕೈಗಾರಿಕಾ ವಲಯದಲ್ಲಿ ಯಂತ್ರೋಪಕರಣಗಳಲ್ಲಿ ದೊಡ್ಡ ಪ್ರಮಾಣದ ಬಂಡವಾಳವನ್ನು ತೊಡಗಿಸುವುದರಿಂದ ದೊಡ್ಡ ಪ್ರಮಾಣದ ಉತ್ಪಾದನೆಯನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

3. ರಾಷ್ಟ್ರೀಯ ಆದಾಯ ಹಾಗೂ ತಲಾ ಆದಾಯದ ಹೆಚ್ಚಳ :- ನಮ್ಮ ದೇಶದಲ್ಲಿ ಕೈಗಾರಿಕಾ ವಲಯಕ್ಕೆ ಸರ್ಕಾರ ಆದ್ಯತೆಯನ್ನು ನೀಡಿದ ಕಾರಣದಿಂದಾಗಿ ನಮ್ಮ ತಲಾ ಆದಾಯ ಹಾಗೂ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳವಾಗಲು ಕಾರಣವಾಗಿದೆ.

4. ಕೃಷಿ ಅಭಿವೃದ್ಧಿ :- ಕೈಗಾರಿಕೆ ಮತ್ತು ಕೃಷಿ ಚಟುವಟಿಕೆಗಳು ಒಂದಕ್ಕೊಂದು ಪೂರಕವಾಗಿದ್ದು, ಕೈಗಾರಿಕಾ ವಲಯಕ್ಕೆ ಬೇಕಾದ ಕಚ್ಚಾ ವಸ್ತುವನ್ನು ಕೃಷಿ ವಲಯವೂ ಅದರಂತೆ ಕೃಷಿ ವಲಯಕ್ಕೆ ಬೇಕಾದ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕೀಟನಾಶಕ ಹಾಗೂ ಯಂತ್ರೋಪಕರಣಗಳನ್ನು ಕೈಗಾರಿಕಾ ವಲಯವು ಪೂರೈಸುತ್ತಿದೆ. ಇದರಿಂದ ಕೃಷಿ ವಲಯದ ಅಭಿವೃದ್ಧಿ ಸಾಧ್ಯವಾಗಿದೆ.

5. ಸಾರಿಗೆ ಸಂಪರ್ಕ ಅಭಿವೃದ್ಧಿ :- ಕೈಗಾರಿಕಾ ವಲಯದ ಅಭಿವೃದ್ಧಿಯಿಂದಾಗಿ ಸಾರಿಗೆ ಸಂಪರ್ಕದ ಅಭಿವೃದ್ಧಿ ಸಾಧ್ಯ. ಕೈಗಾರಿಕಾ ಉತ್ಪನ್ನಗಳನ್ನು ಹಾಗೂ ಜನರನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಸಾರಿಗೆ ತೀರಾ ಅಗತ್ಯವಾಗಿದೆ.

6. ಸಂಪನ್ಮೂಲಗಳ ಸದ್ಬಳಕೆ :- "ಭಾರತವು ಶ್ರೀಮಂತ ರಾಷ್ಟ್ರ. ಆದರೆ ಭಾರತೀಯರು ಬಡವರು" ಎಂಬ ನಾಣ್ಣುಡಿಯಂತೆ ಭಾರತದಲ್ಲಿ ಪ್ರಾಕೃತಿಕ ಸಂಪನ್ಮೂಲಗಳು ಹೇರಳವಾಗಿ ಲಭ್ಯವಾಗಿದ್ದು, ಅವುಗಳ ಸಮರ್ಪಕ ಬಳಕೆಯಾಗದೇ ಭಾರತೀಯರು ಬಡವರಾಗಿಯೇ ಉಳಿದಿದ್ದಾರೆ. ಆದ್ದರಿಂದ ಸಂಪನ್ಮೂಲಗಳನ್ನು ಕೈಗಾರಿಕಾ ಅಭಿವೃದ್ಧಿಯ ಮೂಲಕ ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

7. ವಿದೇಶಿ ವಿನಿಮಯ ಗಳಿಕೆ :- ದೇಶದ ಅಭಿವೃದ್ಧಿಗೆ ಅಗತ್ಯವಾಗಿ ಬೇಕಾದ ವಿದೇಶೀ ವಿನಿಮಯವನ್ನು ಗಳಿಸಿಕೊಳ್ಳಲು ಕೈಗಾರಿಕಾ ವಲಯ ಸಹಾಯ ಮಾಡುತ್ತದೆ.

8. ರಾಷ್ಟ್ರ ರಕ್ಷಣೆ :- ರಾಷ್ಟ್ರ ರಕ್ಷಣೆಗೆ ಅಗತ್ಯವಾಗಿ ಬೇಕಾದ ಯುದ್ಧೋಪಕರಣಗಳನ್ನು ತಯಾರಿಸಲು ಕೈಗಾರಿಕಾ ವಲಯ ಸಹಾಯ ಮಾಡುತ್ತದೆ.

9. ಸರ್ಕಾರಕ್ಕೆ ವರಮಾನ :- ಸಾರ್ವಜನಿಕ ಉದ್ದೇಶಗಳಿಗೆ ಹಣವನ್ನು ವೆಚ್ಚ ಮಾಡಲು ಸರ್ಕಾರಕ್ಕೆ ವರಮಾನ ತೀರಾ ಅಗತ್ಯ. ಕೈಗಾರಿಕಾ ವಲಯದ ಅಭಿವೃದ್ಧಿಯಿಂದ, ಕೈಗಾರಿಕಾ ಸರಕುಗಳ ಮೇಲೆ ವಿಭಿನ್ನ ರೀತಿಯ ತೆರಿಗೆಯನ್ನು ವಿಧಿಸುವ ಮೂಲಕ ಹೆಚ್ಚಿನ ಆದಾಯವನ್ನು ಪಡೆದುಕೊಳ್ಳಲು ಸಹಾಯವಾಗುತ್ತದೆ.

10. ಮನೋಭಾವನೆಯಲ್ಲಿ ಬದಲಾವಣೆ :- ಕೈಗಾರಿಕೆಯ ಅಭಿವೃದ್ಧಿಯು ನಗರಗಳ ಬೆಳವಣಿಗೆಗೆ ಸಹಾಯ ಮಾಡುತ್ತದೆ. ನಗರಗಳಲ್ಲಿ ವಾಸಿಸುವುದರಿಂದ ಜನರ ಮೌಢ್ಯತೆ, ಕಂದಾಚಾರಗಳು ಕಡಿಮೆಯಾಗಿವೆ.

11. ಸ್ಥಿರತೆ ಮತ್ತು ಸ್ವಾವಲಂಬನೆ :- ದೇಶದಲ್ಲಿ ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಮತ್ತು ರಾಷ್ಟ್ರವನ್ನು ಸ್ವಾವಲಂಬನೆಯ ಹಾದಿ ಹಿಡಿಯುವಂತೆ ಮಾಡುವಲ್ಲಿ ಕೈಗಾರಿಕಾ ವಲಯ ಸಹಾಯವನ್ನು ಮಾಡುತ್ತದೆ.

ಹೀಗೆ ಕೈಗಾರೀಕರಣವು ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ಅತ್ಯಾವಶ್ಯಕವಾಗಿದೆ.

ಕೈಗಾರಿಕೆಗಳ ವಿಂಗಡನೆ :-

ಸಾಮಾನ್ಯವಾಗಿ ಕೈಗಾರಿಕೆಗಳನ್ನು ಅವುಗಳ ಗಾತ್ರ, ತೊಡಗಿಸಿದ ಬಂಡವಾಳ ಮತ್ತು ನೇಮಿಸಿಕೊಂಡ ಕಾರ್ಮಿಕರ ಸಂಖ್ಯೆಗಳ ಆಧಾರದಲ್ಲಿ ಸಣ್ಣ, ದೊಡ್ಡ ಮತ್ತು ಬೃಹತ್ ಕೈಗಾರಿಕೆಗಳೆಂದು ವರ್ಗೀಕರಿಸಲಾಗುವುದು.

1. ಸಣ್ಣ ಕೈಗಾರಿಕೆ ಮತ್ತು ಗೃಹ ಕೈಗಾರಿಕೆಗಳು

1950ರ ರಾಜ್ಯಾದಾಯ ಆಯೋಗದ ಪ್ರಕಾರ ಕುಟುಂಬದ ಸದಸ್ಯರ ಸಹಾಯದಿಂದ ಪೂರ್ಣ ಅಥವಾ ಅರೆಕಾಲಿಕ ಉದ್ಯೋಗವನ್ನಾಗಿ ನಡೆಸಲ್ಪಡುವ ಕೈಗಾರಿಕೆಯೇ ಸಣ್ಣ ಕೈಗಾರಿಕೆಯಾಗಿದೆ.

ವೇತನದ ಆಧಾರದಲ್ಲಿ ನೇಮಿಸಿಕೊಂಡ 10 ರಿಂದ 50 ಸಂಖ್ಯೆಯ ಕಾರ್ಮಿಕರ ಸಹಾಯದಿಂದ ನಡೆಸಲ್ಪಡುವ ಕೈಗಾರಿಕೆಯೇ ಸಣ್ಣ ಕೈಗಾರಿಕೆ. ಬಂಡವಾಳ ಹೂಡಿಕೆ ದೃಷ್ಟಿಯಿಂದ ಪ್ರಸ್ತುತ ಒಂದು ಕೋಟಿ ರೂಪಾಯಿಗಿಂತಲೂ ಕಡಿಮೆ ಬಂಡವಾಳವನ್ನು ತೊಡಗಿಸುವ ಕೈಗಾರಿಕೆಯನ್ನು ಸಣ್ಣ ಕೈಗಾರಿಕೆ ಎನ್ನಲಾಗುವುದು.

2. ಮಧ್ಯಮ ಪ್ರಮಾಣದ ಕೈಗಾರಿಕೆ

ಯಂತ್ರಗಳು, ಗುತ್ತಿಗೆ ಪಡೆದ ಶ್ರಮ ಮತ್ತು ವಿದ್ಯುಚ್ಛಕ್ತಿಯನ್ನು ಬಳಸಿಕೊಂಡು ಮಧ್ಯಮ ಪ್ರಮಾಣದಲ್ಲಿ ಉತ್ಪಾದಿಸುತ್ತಿರುವ ಮತ್ತು ಮಧ್ಯಮ ಪ್ರಮಾಣದಲ್ಲಿ ಸಂಘಟಿಸುತ್ತಿರುವ ಕೈಗಾರಿಕೆಯೇ ಮಧ್ಯಮ ಪ್ರಮಾಣದ ಕೈಗಾರಿಕೆಯಾಗಿದೆ.

3. ಬೃಹತ್ ಪ್ರಮಾಣದ ಕೈಗಾರಿಕೆಗಳು

ಅಧಿಕ ಪ್ರಮಾಣದ ಬಂಡವಾಳವನ್ನು ಹೂಡಿ ಶ್ರಮ ವಿಭಜನೆಯ ಲಾಭ ಪಡೆಯುತ್ತಿರುವ ಮತ್ತು ಸರಕುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತಿರುವ ಕೈಗಾರಿಕೆಗಳೇ ಬೃಹತ್ ಕೈಗಾರಿಕೆಗಳು.

10 ಕೋಟಿ ರೂಪಾಯಿಗಳಗಿಂತಲೂ ಅಧಿಕ ಬಂಡವಾಳವನ್ನು ಹೂಡುವ, ಹೆಚ್ಚಿನ ಜನರಿಗೆ ಉದ್ಯೋಗವನ್ನು ನೀಡುವ ಕೈಗಾರಿಕೆಗಳೇ ಬೃಹತ್ ಕೈಗಾರಿಕೆಗಳಾಗಿವೆ. ಕಾರಂತರು ತಮ್ಮ ಬೇರೆ ಬೇರೆ ಲೇಖನಗಳಲ್ಲಿ ಕೈಗಾರಿಕಾ ವಲಯದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಹೀಗಿವೆ.

ಯಾವುದೇ ಒಂದು ದೇಶದಲ್ಲಿ ಕೈಗಾರಿಕಾ ವಲಯದ ಅಭಿವೃದ್ಧಿಗೆ ಸಾಹಸೀ ಉದ್ಯಮಶೀಲರು ತೀರಾ ಅವಶ್ಯಕ. "ನಮ್ಮ ಜಿಲ್ಲೆಯ ಸಂಪತ್ತಿನ ಅಭಿವೃದ್ಧಿ" ಎಂಬ ಲೇಖನದಲ್ಲಿ ಈ ವಿಷಯವನ್ನು ಈ ಕೆಳಕಂಡಂತೆ ವಿವರಿಸಿದ್ದಾರೆ. "ದಕ್ಷಿಣ ಕನ್ನಡದಲ್ಲಿ ಹುಟ್ಟಿ ಬೆಳೆದವರಿಗೆ ಇದೊಂದು ಹೆಮ್ಮೆಯ ಊರು ಎನಿಸುವುದು ಸ್ವಾಭಾವಿಕ. ನಾಡು ಅಷ್ಟೊಂದು ಸುಂದರವಾದದ್ದು. ಜನರಿಂದ ತುಂಬಿ ತುಳುಕಾಡುವುದು. ಆ ಜನರಾದರೋ ಸಾಕಷ್ಟು ಮೇಧಾವಿಗಳೂ, ವಿದ್ಯಾವಂತರೂ ಅಹುದು, ಅದರೆ ನಮ್ಮ ಪಾಲಿನ ಹೆಮ್ಮೆ ಮಾತ್ರ ಒಣ ಹೆಮ್ಮೆಯೇ ಆಗಿ ಉಳಿದಿದೆ. ನಮ್ಮ ನಾಡಿಗಾಗಿ ನಾವೇನು ಮಾಡಿದ್ದೇವೆ ? ನಮ್ಮ ಸಾಹಸಗಳು ಎಂದರೆ ಮಾತ್ರ ಉತ್ತರ ಬರುವುದು; ನಮ್ಮ ಹೆಮ್ಮೆಗೆ ತಳವಿಲ್ಲವಾಗುತ್ತದೆ. ಅದು 'ಬಂಡವಾಳವಿಲ್ಲದ ಬಡಾಯಿ' ಯಾಗುತ್ತದೆ.

ಸಾಹಸವು ಮಾತಿನಿಂದ ಕಾರ್ಯಕ್ಕಿಳಿಯಬೇಕಾಗುತ್ತದೆ. ನಮ್ಮವರ ಬುದ್ಧಿ, ಶ್ರಮಗಳೆಲ್ಲ ಹೊರಗಣ ಪ್ರಾಂತ್ಯಕ್ಕಾಗಿ ವ್ಯಯವಾಗುತ್ತಿದೆ. ವಾಣಿಜ್ಯದಲ್ಲಿ ನಮ್ಮ ಜನರು ಸಾಹಸಿಗಳಾಗಿಯೇ ಇದ್ದಾರೆ. ಆದರೆ ಸಿಂಧಿ, ಗುಜರಾತಿ, ಮಾರವಾಡಿಗಳಂತೆ ಬೇರೆ ಊರಲ್ಲಿ ಆ ವ್ಯಾಪಾರದ ಬೆಳವಣಿಗೆಯಿಲ್ಲ. ವಿಮೆ, ಬ್ಯಾಂಕಿಂಗ್‌ಗಳಲ್ಲಿಯೂ ನಮ್ಮವರು ಮುಂದಿದ್ದಾರೆ. ದಕ್ಷಿಣ ಭಾರತದ ಹಲವು ಕಡೆ ಇವುಗಳ ಶಾಖೆಗಳಿರುವುವು. ಇದು ಹೆಮ್ಮೆಯ ವಿಷಯವಾದರೂ ವಿಮೆ, ಬ್ಯಾಂಕಿಂಗ್ ಸಂಸ್ಥೆಗಳು ಮತ್ತಷ್ಟು ಸಂಪತ್ತನ್ನು ಉತ್ಪನ್ನ ಮಾಡುವ ಸಂಸ್ಥೆಗಳಲ್ಲ. ಅವು ಹಣ ವ್ಯವಹಾರದ ಮಧ್ಯವರ್ತಿ ಸಂಸ್ಥೆಗಳಾಗಿವೆ. ನಮಗೆ ಎಲ್ಲಕ್ಕೂ ಮೊದಲು ಬೇಕಾದದ್ದು ಸಂಪತ್ತನ್ನು ಹೆಚ್ಚಿಸುವ ಏರ್ಪಾಡುಗಳು.

ಕಾರಂತರ ಅಭಿಪ್ರಾಯದಲ್ಲಿ ಕೈಗಾರಿಕಾ ಕ್ಷೇತ್ರವು ಅಭಿವೃದ್ಧಿಯಾಗಬೇಕಾದರೆ ಅಗತ್ಯವಾದ ಕಚ್ಚಾ ಮಾಲು ಹೇರಳವಾಗಿ ಸಿಗುವಂತಿರಬೇಕು. ಜೊತೆಯಲ್ಲಿ ವಿದ್ಯುಚ್ಛಕ್ತಿ ಸಮರ್ಥವಾಗಿ ಪೂರೈಕೆ ಯಾಗುತ್ತಿರಬೇಕು. ಹಾಗೂ ದಕ್ಷ ಕಾರ್ಮಿಕ ವರ್ಗವು ಸಹ ಅತಿ ಮುಖ್ಯವಾಗಿದೆ.

ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳ ಅಭಿವೃದ್ಧಿಗೆ ವಿಫುಲವಾದ ಅವಕಾಶಗಳವೆ. ಕೃಷಿ ಆಧಾರಿತ ಕೈಗಾರಿಕೆಗಳೆಂದರೆ ಕೃಷಿ ಉತ್ಪನ್ನವನ್ನು ಬಳಸಿಕೊಂಡು ನಡೆಯುತ್ತಿರುವ ಕೈಗಾರಿಕೆ, ಉದಾಹರಣೆಗೆ ಕಬ್ಬು, ಸೆಣಬಿನ ಕೈಗಾರಿಕೆಗಳು. ಇದಲ್ಲದೆ ನಮ್ಮ ದೇಶದಲ್ಲಿ ಲಭ್ಯವಿರುವ ವಿವಿಧ ರೀತಿಯ ಅರಣ್ಯ ಉತ್ಪನ್ನಗಳನ್ನು ಬಳಸಿಕೊಂಡು ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಬಹುದಾಗಿದೆ. ಎಂದು ಕಾರಂತರು ಅಭಿಪ್ರಾಯ ಪಟ್ಟಿದ್ದಾರೆ. "ನಮ್ಮ ಅರಣ್ಯ ಸಂಪತ್ತು ಧಾರಾಳವಾಗಿದೆ. ಯುದ್ಧ ಕಾಲದಲ್ಲಿ ಬೆಂಕಿಪೆಟ್ಟಿಗೆಗಾಗಿ ನಮ್ಮಲ್ಲಿ ಅನೇಕ ಕಾಡು ಹಕ್ಕಲುಗಳನ್ನು ಸವರಿಸಲಾಯಿತು. ಇನ್ನು ದೊಡ್ಡ ದೊಡ್ಡ ಬೆಟ್ಟ, ಕಾಡುಗಳು ಅಲ್ಲೇ ಇವೆ. ಪ್ಲೈವುಡ್ ತಯಾರಿಕೆಗೆ ಅಗತ್ಯವಾದ ಹುಲ್ಲು ಇಂದು ನಾಶವಾಗುತ್ತಿದೆ. ಬಿದಿರು, ಹುಲ್ಲು, ಮುಳ್ಳು ಇವುಗಳು ಕಾಗದದ ಕಾರ್ಖಾನೆಗಳಿಗೆ ಅಗತ್ಯವಾದ ಕಚ್ಚಾವಸ್ತುವನ್ನು ಪೂರೈಕೆ ಮಾಡುತ್ತದೆ. ಸಿಮೆಂಟ್ ಉದ್ಯಮಕ್ಕೆ ಬೇಕಾದ ಆವೆ ಮಣ್ಣು ಇತ್ಯಾದಿ ಅಗತ್ಯ ಸಾಮಗ್ರಿಗಳು ಯಥೇಚ್ಛವಾಗಿದ್ದರೂ ಸಹ ಸಿಮೆಂಟ್ ಉದ್ಯಮ ನಿರೀಕ್ಷಿತ ಪ್ರಮಾಣದಲ್ಲಿ ಬೆಳೆದಿಲ್ಲ. ಮರಳು ಧಾರಾಳವಿದೆಯಾದರೂ ಗಾಜಿನ ಉತ್ಪಾದನೆಗೆ ನಾವು ಗಮನ ನೀಡಿಲ್ಲ. ಜೇಡಿ ಮಣ್ಣು ಧಾರಾಳವಾಗಿ ದೊರಕುತ್ತಿದ್ದರೂ ಪಿಂಗಾಣಿ ಉದ್ಯಮ ಅಭಿವೃದ್ಧಿಯಾಗಿಲ್ಲ. ಬಳಪದಕಲ್ಲು ಧಾರಾಳವಾಗಿ ಸಿಗಬಲ್ಲುದಾದರೂ ಅದರ ಪ್ರಯೋಜನ ಪಡೆಯುತ್ತಿಲ್ಲ.

ನಮ್ಮ ಸಾಹಸಿಗಳು, ಧನಿಕರ ಸಂಪತ್ತಿನ ಉತ್ಪನ್ನದ ಕಡೆಗೆ ಗಮನವನ್ನು ಕೊಟ್ಟಿಲ್ಲ. ಅವರ ಕಣ್ಣು, ಬುದ್ಧಿಗಳು ಕೇವಲ ಮಧ್ಯವರ್ತಿ ಉದ್ಯೋಗಗಳನ್ನೇ ಹಿಂಬಾಲಿಸುತ್ತಿವೆ. ಗಳಿಸಿದ ಲಾಭ, ಸಟ್ಟಾ ವ್ಯಾಪಾರದ ಕಡೆಗೇ ಅವರ ಗಮನ ಕೇಂದ್ರೀಕರಿಸಿದೆ. ಬುದ್ಧಿಯನ್ನು ಶ್ರಮದೊಡನೆ ಜೊತೆಗೊಳಿಸಲು ನಾವು ಸಿದ್ಧರಾಗಿಲ್ಲ. ಶ್ರಮ ಪಡದ ಸಂಪಾದನೆ ನಮಗೆ ಬೇಕು, ದುಡ್ಡಿದ್ದವರು ಹೀಗಾದರೆ ದುಡ್ಡಿಲ್ಲದವರು ಅದರ ಎರಡನೆಯ ಹಂತದ ಬರಿಯ ಗುಮಾಸ್ತಿಕೆಯ ಮೋಹದಿಂದ ತೃಪ್ತರಾಗಿದ್ದಾರೆ. ಭಾರತದಂತಹ ಕೃಷಿ ಪ್ರಧಾನ ರಾಷ್ಟ್ರದಲ್ಲಿ ದೇಶದ ಅಭಿವೃದ್ಧಿಗಾಗಿ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆಯ ಬಗ್ಗೆ ಕಾರಂತರು ವಿಶೇಷವಾಗಿ ಹೇಳಿದ್ದಾರೆ. ನಮ್ಮದು ಕೃಷಿ ಪ್ರಧಾನವಾದ ವಿಶಾಲ ದೇಶ. ಶೇ.೮೫ ರಷ್ಟು ಮಂದಿಯಾದರೂ ತಮ್ಮ ಹೊಲ ಮನೆಗಳಿಗೆ ಅಂಟಿಕೊಂಡಿದ್ದಾರೆ. ಅವರನ್ನು ಅಲ್ಲಿಂದ ಸಂಪೂರ್ಣವಾಗಿ ಕಿತ್ತು, ಔದ್ಯೋಗಿಕ ನಗರಗಳ ಹೊಲಸು ಮನೆ, ಬೀದಿಗಳಲ್ಲಿ ಸ್ಥಾಪಿಸುವ ಧೋರಣೆಯನ್ನು ಸರ್ಕಾರ ತಾಳಬಾರದು. ಕೆಲವೊಂದು ಉದ್ಯೋಗಗಳು ಹಾಗೆಯೇ ಇರಬೇಕಾದ ಪ್ರಮೇಯವಿದ್ದರೂ, ಬಹುಮಟ್ಟಿಗೆ ಉದ್ಯೋಗಗಳನ್ನು ನಿಷ್ಕೇಂದ್ರೀಕರಿಸಲು ಬರುತ್ತದೆ. ಜನ ವಾಸಿಸುತ್ತಿರುವ ಸಾವಿರಾರು ಹಳ್ಳಿಗಳಲ್ಲಿ ಉದ್ಯೋಗಗಳು ಹಂಚಿ ಹೋಗಬೇಕು. ಕೃಷಿಕರಾದವರಿಗೆ ವರ್ಷದ ಎಂಟು ತಿಂಗಳುಗಳಲ್ಲಿ ಬೇರೆ ವೃತ್ತಿ ಇರುವುದಿಲ್ಲ. ಅಂದರೆ ಆಗ ಸಂಪಾದನೆಯೂ ಇಲ್ಲ :

ಉತ್ಪಾದನೆಯೂ ಇಲ್ಲ. ಇಂತಹ ವೇಳೆಯಲ್ಲಿ ಕಡಿಮೆ ವೇತನದಿಂದಲೂ ಅವರು ತೃಪ್ತಿ ಪಡೆದು ದುಡಿಯಬಹುದು. ಗಿರಣಿಯ ಶ್ರಮವನ್ನು, ಬೇಸರವನ್ನು ಸಂಸಾರದೊಡನೆ ಬೆರೆತು ಮರೆಯಬಹುದು. ಹಿತ್ತಲಿನಲ್ಲಿ ಬೆಳೆದು ಮರೆಯಬಹುದು. ಆಪತ್ತು ಬಂದಾಗ ತಮ್ಮ ನೆಲದಿಂದ ತಮ್ಮ ಅನ್ನವನ್ನು ಗಳಸಬಹುದು. ಯಾವೆಲ್ಲ ಉದ್ಯೋಗಗಳು ಈ ಬಗೆಯಲ್ಲಿ ಹಂಚಿ ಹಾಕಲು ಬರುತ್ತವೆ ಎಂಬ ಸಂಶೋಧನೆಯನ್ನು ಸರಕಾರ ಮಾಡಬೇಕಾಗಿದೆ.

ಡಾ॥ ಕೆ. ಶಿವರಾಮ ಕಾರಂತರು ಗೃಹ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಆಧುನೀಕರಣ ತೀರಾ ಅವಶ್ಯಕ ಎಂಬ ಅಂಶವನ್ನು ವಿವರಿಸಿದ್ದಾರೆ. ಅಂತರರಾಷ್ಟ್ರೀಯ ಸ್ಪರ್ಧೆಯನ್ನು ಎದುರಿಸುವ ಶಕ್ತಿಯನ್ನು ನಮ್ಮ ಉದ್ಯಮ ರಂಗವು ಪಡೆದುಕೊಳ್ಳಬೇಕಾದರೆ, ಗುಡಿ ಕೈಗಾರಿಕೆಗಳನ್ನು ಕೇವಲ ಕಸುಬಾಗಿ ಉಳಿಸಿಕೊಳ್ಳದೇ, ಅವುಗಳ ಯಾಂತ್ರೀಕರಣಕ್ಕೆ ಆದ್ಯತೆ ನೀಡಬೇಕು. ಉದ್ಯಮದ ಯಾಂತ್ರೀಕರಣಕ್ಕೆ ಅಗ್ಗವಾದ ಶಕ್ತಿಯ ಪೂರೈಕೆಯಾಗಬೇಕು. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೀಘ್ರವಾಗಿ ಕಾರ್ಯ ಪ್ರವೃತ್ತರಾಗಬೇಕು. ಕೃಷಿ ಮತ್ತು ಗುಡಿ ಕೈಗಾರಿಕೆಗಳ ಮಧ್ಯೆ ಸೌಹಾರ್ದ ವಾತಾವರಣ ಸೃಷ್ಟಿಸಬೇಕು ಎಂದಿದ್ದಾರೆ.

ಗೃಹ ಕೈಗಾರಿಕೆಗಳ ಅಭಿವೃದ್ಧಿಗಾಗಿ ಅಗತ್ಯವಾದ ಬಂಡವಾಳವನ್ನು ಖಾಸಗಿ ವಲಯದಿಂದ ಪಡೆಯಬೇಕು. ಖಾಸಗಿ ವ್ಯಕ್ತಿಗಳು ಬಂಡವಾಳ ತೊಡಗಿಸಲು ಮುಂದೆ ಬಾರದ ಪಕ್ಷದಲ್ಲಿ ಸರ್ಕಾರವೇ ಬಂಡವಾಳವನ್ನು ತೊಡಗಿಸಬೇಕೆಂದು ಕಾರಂತರು ಅಭಿಪ್ರಾಯ ಪಟ್ಟಿದ್ದಾರೆ. ಭಾರತದ ಕೈಗಾರಿಕಾ ವಲಯದ ಅಭಿವೃದ್ಧಿಗಾಗಿ ಜಪಾನ್ ದೇಶದ ಮಾದರಿಯನ್ನು ಅನುಸರಿಸುವಂತೆ ಕರೆ ನೀಡಿದ್ದಾರೆ. ಜಪಾನ್ ದೇಶವು ಒಂದು ಕಾಲದಲ್ಲಿ ಚೀನಾ, ಇಂಡಿಯಾದಂತೆ ಉದ್ಯೋಗ, ಉದ್ಯಮದಲ್ಲಿ ತುಂಬಾ ಹಿಂದುಳಿದ ರಾಷ್ಟ್ರವಾಗಿತ್ತು. ಆದರೆ ಅದು ಪಾಶ್ಚಿಮಾತ್ಯರ ಪ್ರಭಾವದಿಂದ ತನ್ನ ಜೀವನ ಮಾರ್ಗದಲ್ಲಿ ಸಂಪೂರ್ಣ ಕ್ರಾಂತಿಯನ್ನು ಮಾಡಿತು. ಹಿಂದೂಸ್ಥಾನ ಅದರಿಂದ ಕಲಿಯುವುದು ಬಹಳ ಇದೆ. ಪಾಶ್ಚಾತ್ಯರ ಔದ್ಯೋಗೀಕರಣದ ಮಾರ್ಗದಿಂದ ಹಳ್ಳಿಯ ಜನರು ನಗರಗಳಲ್ಲಿ ನೆಲೆಸಿ, ಗ್ರಾಮಗಳು ಬರಿದಾಗುವುದನ್ನು ಕಾಣುತ್ತೇವೆ. ಅದಕ್ಕೆ ಬೇಕಾಗುವಷ್ಟು ಬಂಡವಾಳ ನಮಗಿಲ್ಲ. ಅಲ್ಲದೇ ಕೃಷಿಕರನ್ನು ತಳ ಕೀಳಿಸಿ ಸೇವೆಗೆ ಸಾಗಿಸುವುದು ದೇಶದ ನಾಳಿನ ಹಿತಕ್ಕೆ ಒಳಿತಲ್ಲ. ನೂರಾರು ಕೈಗಾರಿಕೆಗಳು ಕೆಲವೇ ಜನಗಳಿಂದ ಹಳ್ಳಿ, ಹಳ್ಳಿಯಲ್ಲಿಯೂ ಬೆಳೆಯಲು ಸಾಧ್ಯವಿದೆ. ಕಡಿಮೆ ಬಂಡವಾಳದಿಂದಲೂ ಅವುಗಳನ್ನು ನಡೆಸುವುದು ಶಕ್ಯ. ವ್ಯಾಪಾರದ ಸ್ಪರ್ಧೆಯನ್ನು ಎದುರಿಸಿ ನಿಲ್ಲಿಸುವುದು ಶಕ್ಯ ಎಂದು ಜಪಾನೀಯರು ನಮಗೆ ತೋರಿಸಿಕೊಟ್ಟಿದ್ದಾರೆ.

---

1. ಡಾ॥ ಕೆ. ಶಿವರಾಮ ಕಾರಂತ – ನಮ್ಮ ಜಿಲ್ಲೆಯ ಸಂಪತ್ತಿನ ಅಭಿವೃದ್ಧಿ – ಸ್ವದೇಶಾಭಿಮಾನಿ – ದಿನಾಂಕ 18.06.1948

ಜಪಾನಿನ ಔದ್ಯೋಗಿಕ ಸಾಮ್ರಾಜ್ಯ ತನ್ನ ಶಕ್ತಿಯನ್ನು ಗಳಿಸಿಕೊಂಡದ್ದು ವಿಶೇಷ ಬಂಡವಾಳ ತೊಡಗಿಸಿದ ದೊಡ್ಡ ಉದ್ಯಮಗಳಿಂದಲ್ಲ, ಚಿಕ್ಕ ಪುಟ್ಟ ಉದ್ಯಮಗಳಿಂದ ! ಅಲ್ಲಿ ದೊಡ್ಡ ಉದ್ಯೋಗಗಳು ನಡೆಯುತ್ತಿಲ್ಲವೆಂದಲ್ಲ, ಆದರೆ ಬಹು ಜನರ ಜೀವನ ಸಾಗುತ್ತಿರುವುದು ಸಣ್ಣ ಕೈಗಾರಿಕೆಗಳಿಂದಾಗಿ.

ಕಾರಂತರ ಪರಿಶೀಲಿಸಿರುವಂತೆ ಭಾರತದಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಉತ್ತಮ ಅವಕಾಶಗಳಿವೆ. ಜಪಾನಿನ ಒಂದು ಉದಾಹರಣೆಯನ್ನು ಪರಿಶೀಲಿಸುವುದಾದರೆ, ಒಬ್ಬೊಬ್ಬನೇ ನಡೆಸುವ ಕೆಲಸದ ಮನೆಗಳು ಶೇಕಡ 54 ರಷ್ಟಿದೆ. ಐದು ಮಂದಿ ಕೆಲಸಗಾರರಿಗಿಂತ ಕಡಿಮೆಯಿರುವ ಕರ್ಮ ಶಾಲೆಗಳು ಶೇ. 40 ರಷ್ಟು. ಅದರಿಂದ ಅಲ್ಲಿಯ ದೊಡ್ಡ ಉದ್ಯಮಗಳ ಪಾತ್ರ ಎಷ್ಟು ಕಡಿಮೆಯೆಂದು ಊಹಿಸಬಹುದು.

1909ರಲ್ಲಿ ಜಪಾನಿನ ಉದ್ಯೋಗ ಪ್ರಯತ್ನವು ಪರಮಾವಧಿಯನ್ನು ಮುಟ್ಟಿತ್ತು. ಆಗ ಅವರಲ್ಲಿ 25 ರಿಂದ 100ರ ಒಳಗೆ ಕೆಲಸಗಾರರಿರುವ ಉದ್ಯೋಗ ಶಾಲೆಗಳ ಸಂಖ್ಯೆ ಶೇ.96.5 ರಷ್ಟಿತ್ತು. 1938ರ ಸುಮಾರಿಗೆ, ಅಂದರೆ ಕಳೆದ ಯುದ್ಧಾರಂಭದಲ್ಲಿ ಜಪಾನ್ ಸಣ್ಣ ಕೈಗಾರಿಕೆಗಳಿಂದ ದೊಡ್ಡ ಉದ್ಯಮದ ಕಡೆ ಗಮನವನ್ನು ಕೇಂದ್ರೀಕರಿಸಿತು. ಆಗಲೇ ಸಣ್ಣ ಕೈಗಾರಿಕೆಗಳಲ್ಲಿ ನಿರತರಾದ ಜನಗಳ ಸಂಖ್ಯೆ ಶೇ.96.2ರಷ್ಟಿತ್ತು.

ಭಾರತದ ಉದ್ಯಮ ಕ್ಷೇತ್ರವು ದೀರ್ಘಾವಧಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಅಗತ್ಯವಾಗಿರುವ ಅಂಶಗಳನ್ನು ಕಾರಂತರು ಹೀಗೆ ವಿವರಿಸಿದ್ದಾರೆ.

> "ನಿತ್ಯ ಜೀವನದಲ್ಲಿ ಯಾವುದೇ ಒಂದು ಉದ್ಯೋಗವು, ತನ್ನ ಕಾಲಿನ ಮೇಲೆ ನಿಲ್ಲಬೇಕಾದರೆ, ಅದಕ್ಕೆ ವ್ಯಾಪಾರಿ ಸ್ಪರ್ಧೆಯಲ್ಲಿ ನಿಲ್ಲುವ ಶಕ್ತಿ ಬರಬೇಕು. ಜಪಾನಿನ ಕೈಗಾರಿಕೆಗಳಲ್ಲಿ ಆ ಶಕ್ತಿ ಇದೆ, ಜಾಣ್ಮೆ ಇದೆ, ಅವರು ಹೆಚ್ಚು ಉತ್ಪನ್ನ ತಯಾರಿಸಬಲ್ಲರು, ಕಡಿಮೆ ಬೆಲೆಗೆ ಮಾರಬಲ್ಲರು. ಮಾರಿಯೂ ಬದುಕಬಲ್ಲರು ; ಸ್ಪರ್ಧಿಸಬಲ್ಲರು. ನಮ್ಮ ದೇಶದ ಸಣ್ಣ ಹಾಗೂ ದೊಡ್ಡ ಕೈಗಾರಿಕೆಗಳಲ್ಲಿ ಕಾಣದಂತಹ ಲಕ್ಷಣ ಇದು. ಲಾಭಕ್ಕೂ, ಹೆಚ್ಚಿನ ವೇತನಕ್ಕೂ ಕೂಗುವ ನಮ್ಮ ಗಂಟಲುಗಳು ಹೆಚ್ಚಿನ ಉತ್ಪನ್ನಗಳ ಕಡೆಗೆ ಗಮನವನ್ನು ನೀಡುತ್ತಿಲ್ಲ. ನಮ್ಮ ಸರ್ಕಾರದ ಅನೇಕ ಔದ್ಯೋಗಿಕ ಪಂಚಾಯಿತಿಗಳು ಒಂದಲ್ಲಾ ಒಂದು ಪಕ್ಷದ ಕುರುಡು ತೀರ್ಮಾನಗಳಾಗಿವೆ. ಈ ತೀರ್ಮಾನಗಳಲ್ಲಿ ಸಾಮಾನ್ಯ ಪ್ರಜೆಯ ಅಂದರೆ ಗಿರಾಕಿಯ ಕೊಳ್ಳುವ ಶಕ್ತಿಯನ್ನು ಅವರು ಪರಿಗಣಿಸಿಯೇ ಇಲ್ಲ. ಪ್ರಾಪಂಚಿಕ ಸ್ಪರ್ಧೆಗೆ ನಮ್ಮ ಉದ್ಯೋಗಗಳು, ಕೈಗಾರಿಕೆಗಳು ನಿಲ್ಲುವ ಯೋಗ್ಯತೆಯನ್ನು ಗಳಿಸದೇ ಹೋದರೆ, ನಮ್ಮ ಉದ್ಯೋಗದ ವಿಸ್ತರಣದ ಕನಸು

---

2. ಡಾ॥ ಕೆ. ಶಿವರಾಮ ಕಾರಂತ – ಬಂಡವಾಳಗಾರರಿಗೂ ಸಂಪೂರ್ಣ ಸ್ವಾಮ್ಯಕ್ಕೂ ಮಧ್ಯಮ ಮಾರ್ಗ – ಪ್ರಜಾಮತ, ದೀಪಾವಳಿ ಸಂಚಿಕೆ 1950)
3. ಡಾ॥ಕೆ. ಶಿವರಾಮ ಕಾರಂತ – ಜಪಾನಿನ ಕೈಗಾರಿಕೆಗಳು – ವಿಚಾರವಾಣಿ– 3–1–1951 ರಿಂದ 21–3–1951

ಒಂದಲ್ಲಾ ಒಂದು ದಿನ ಮುರಿದು ಬೀಳಬಹುದು ಎಂಬ ಜ್ಞಾನ ನಮಗೆ ಉಂಟಾಗಿಲ್ಲ. ಹಕ್ಕುಗಳ ಎದುರಿಗೆ ನಿಲ್ಲಬೇಕಾದ ಪ್ರಶ್ನೆಯು ಸಂಪತ್ತಿನ ಉತ್ಪನ್ನ, ಬೆಳವಣಿಗೆ ಮತ್ತು ಅದು ಪಡೆಯಬೇಕಾದ ಶಕ್ತಿ, ಸಹಜ ವ್ಯಾಪಾರಿ ಸ್ಪರ್ಧೆಗಳು. ಆ ಸ್ಪರ್ಧೆಯಲ್ಲಿ ಅನ್ಯದೇಶಗಳ ಶಕ್ತಿ ಎಷ್ಟಿದೆ ಎಂಬುದನ್ನು ನಾವು ಕಾಣಲೇ ಬೇಕು. ಕಾಣದೇ ಹೋದಲ್ಲಿ ನಮ್ಮ ಉದ್ಯಮಗಳು ಬದುಕಲಾರವು".

ಕಾರಂತರು ಭಾರತದಲ್ಲಿ ಉದ್ಯಮ ಕ್ಷೇತ್ರವು ಅಭಿವೃದ್ಧಿಯಾಗಬೇಕಾದರೆ ಏನೆಲ್ಲಾ ಅನುಕೂಲತೆಗಳು ಅವಶ್ಯವಾಗಿವೆ ಎಂಬ ಅಂಶವನ್ನು ಜಪಾನಿನ ನಿದರ್ಶನಗಳನ್ನು ನೀಡಿದ್ದಾರೆ.

1. ಜಪಾನಿನಲ್ಲಿ ಅತಿ ಕಡಿಮೆ ದರದಲ್ಲಿ ಹಳ್ಳಿಗಳಲ್ಲೂ ವಿದ್ಯುತ್ ದೊರೆತು ಯಂತ್ರಗಳ ಮೂಲಕ ಕೆಲಸ ಮಾಡುವುದು ಸಾಧ್ಯವಾಗಿದೆ.

2. ದೇಶದ ಒಳಗೆ ವ್ಯಾಪಾರದಲ್ಲಿ ಗಿರಾಕಿಗಳ ಅಭಿರುಚಿಗೆ ತಕ್ಕಂತೆ ವಸ್ತು, ಒಡವೆಗಳ ತಯಾರಿಯನ್ನು ಈ ಸಣ್ಣ ಸಣ್ಣ ಉದ್ಯಮಗಳು ಮಾಡಲು ಶಕ್ಯವಾಗಿದೆ.

3. ಕಡಿಮೆ ಸಂಬಳದಲ್ಲಿ ಕೆಲಸ ಮಾಡುವ ಕಾರ್ಮಿಕರು ದೊರೆಯುತ್ತಾರೆ.

4. ವಂಶಪಾರಂಪರ್ಯವಾಗಿ ಒಂದೊಂದು ಕಸುಬು ನಡೆಸಿಕೊಂಡು ಬಂದ ಕುಟುಂಬಗಳಲ್ಲಿ ಇರತಕ್ಕ ನಿಕಟ ಸ್ನೇಹ.

5. ಸಣ್ಣ ಪುಟ್ಟ ಕೈಗಾರಿಕೆಗಳಗೂ, ಅದೇ ವಸ್ತುಗಳನ್ನು ನಿರ್ಮಿಸುವ ದೊಡ್ಡ ಉದ್ಯಮಗಳಗೂ ಇರತಕ್ಕ ಹೆಚ್ಚಿನ ಸಹಕಾರ.

ಈ ವಿಚಾರಗಳನ್ನೆಲ್ಲಾ ಗಮನಿಸಿದರೆ ನಮ್ಮ ದೇಶದ ಉದ್ಯಮಗಳಲ್ಲಿ ಕಾಣುತ್ತಿರುವ ಕೊರತೆ ಸ್ಪಷ್ಟವಾಗುತ್ತದೆ. ಜನರ ಅಭಿರುಚಿಗಳಗೆ ತಕ್ಕಂತೆ ವಸ್ತುಗಳನ್ನು ಉತ್ಪಾದನೆ ಮಾಡುವ ಕಲೆಯನ್ನು ನಾವು ಕರಗತ ಮಾಡಿಕೊಳ್ಳಬೇಕು. ವಸ್ತುಗಳ ಆಕಾರ, ರೂಪಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಿರಬೇಕು. ಆತ ಹೊಸ ಮಾದರಿ, ಬೆಡಗು ತೋರಿಸಬಲ್ಲ ನಿರ್ಮಾಪಕನಾಗಬೇಕು. ಇಲ್ಲವಾದರೆ ಗಿರಾಕಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ನಮ್ಮೂರಿನ ಆಟದ ಗೊಂಬೆಗಳು, ಚೆನ್ನಪಟ್ಟಣದ ಆಟದ ಗೊಂಬೆಗಳು ಎಷ್ಟು ವರ್ಷದಿಂದ ಒಂದೇ ತೆರನಾಗಿದೆಯಲ್ಲ ಎಂದು ಕಾರಂತರು ಪ್ರಶ್ನಿಸುತ್ತಾರೆ.

ಭಾರತದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಅಗತ್ಯದ ಶ್ರಮ ಅಗ್ಗವಾಗಿ ದೊರೆತರೂ ಸಹ ಶ್ರಮದ ದಕ್ಷತೆ ಕಡಿಮೆ ಇದೆ ಎಂಬುದು ಕಾರಂತರ ಅನಿಸಿಕೆಯಾಗಿದೆ. ಹೆಚ್ಚಿನ ಪ್ರತಿಫಲವನ್ನು ಬಯಸುವ ಶ್ರಮಿಕರು ತಮ್ಮ ದಕ್ಷತೆಯನ್ನು ಹೆಚ್ಚಿಸುವಂತಹ ಯಾವ ಕ್ರಮವನ್ನೂ ಸಹ ಕೈಗೊಂಡಿಲ್ಲ.

[illegible]

ನಮ್ಮ ದೇಶದ ವಿಭಿನ್ನ ಹಳ್ಳಿಗಳಲ್ಲಿ ವಿಭಿನ್ನ ರೀತಿಯ ಗುಡಿ ಕೈಗಾರಿಕೆಗಳಿವೆ. ಆದರೆ ಅವುಗಳ ಮಧ್ಯೆ ಸಹಕಾರದ ಮನೋಭಾವ ಇಲ್ಲ. ಉದ್ಯಮದ ಹಿತವನ್ನು ಕಾಪಾಡುವಲ್ಲಿ ಸಾಂಘಿಕ ಪ್ರಯತ್ನವನ್ನು ನಮ್ಮ ಕೈಗಾರಿಕೆಗಳು ಮಾಡುತ್ತಿಲ್ಲ. ನಮ್ಮ ದೇಶದಲ್ಲಿ ದೊಡ್ಡ ಮತ್ತು ಸಣ್ಣ ಉದ್ಯಮಗಳ ನಡುವೆ ಸಾಮರಸ್ಯದ ಕೊರತೆಯಿಂದ ಅವುಗಳ ಮಧ್ಯೆ ಅನಾರೋಗ್ಯಕರ ಪೈಪೋಟಿ ಏರ್ಪಟ್ಟಿದೆ. ಈ ಪೈಪೋಟಿಯಲ್ಲಿ ಸಣ್ಣ ಉದ್ಯಮಗಳು ನಶಿಸಿಹೋಗುತ್ತಿರುವುದನ್ನು ನಾವು ಕಾಣಬಹುದು.

ನಮ್ಮ ದೇಶದಲ್ಲಿ ಕಚ್ಚಾ ವಸ್ತುಗಳು ಯಥೇಚ್ಚವಾಗಿ ಲಭಿಸುತ್ತಿದ್ದು ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಲ್ಲಿ ನಮ್ಮ ಕೈಗಾರಿಕಾ ವಲಯವನ್ನು ಅಭಿವೃದ್ಧಿ ಪಡಿಸಬಹುದು. ಜಪಾನ್ ದೇಶ ಅನುಸರಿಸಿದಂತೆ ದೇಶದೊಳಗೆ ದೊರೆಯುವ ಪ್ರತಿಯೊಂದು ಕಚ್ಚಾ ಮಾಲುಗಳಿಂದಲೂ ಒಂದೊಂದು ಬಗೆಯ ಉಪಯೋಗವನ್ನು ಕಂಡುಹಿಡಿದಿವೆ.

ಅಲ್ಲಿಯಂತೆ ನಮ್ಮಲ್ಲಿಯೂ ಬಿದಿರು ಯಥೇಚ್ಚವಾಗಿ ಲಭ್ಯವಿದೆ. ಆದರೆ ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿಲ್ಲ. ಕರ್ನಾಟಕ, ಬಂಗಾಳ ರಾಜ್ಯಗಳಲ್ಲಿ ಅದರ ಸ್ವಲ್ಪ ಅಂಶ ಕಾಗದ ಕೈಗಾರಿಕೆಗೆ ಹೋಗುತ್ತಿದೆ. ಬಿದಿರನ್ನು ವ್ಯವಸ್ಥಿತವಾಗಿ ಕಡಿಯುವ ಬಗ್ಗೆ ತಿಳಿದರೆ ಅದರ ಬೆಳೆ ನಿರಂತರವಾಗಿ ಲಭಿಸುತ್ತದೆ.

ಜಪಾನ್ ದೇಶದಲ್ಲಿ ಬಿದಿರಿನಿಂದ ಏನೆಲ್ಲಾ ಉತ್ಪನ್ನಗಳನ್ನು ಮಾಡುತ್ತಾರೆ ಎಂಬ ಅಂಶವನ್ನು ಕಾರಂತರು ವಿವರಿಸಿದ್ದಾರೆ. ಬಿದಿರಿನಿಂದ ಅಂಗಿ ಗುಂಡಿಗಳು, ಹಿಡಿಕೆಗಳು, ಬಿದಿರಿನ ಹೊದಿಕೆ, ಪ್ಲೈವುಡ್ ಮಣಿಗಳು, ಗಾಳದ ಕೋಲು, ದಂಡ, ಪೊರಕೆ ಇತ್ಯಾದಿ ಉತ್ಪನ್ನಗಳನ್ನು ತಯಾರಿಸುತಾರೆ. ಭಾರತದಲ್ಲಿಯೂ ಸಹ ಸ್ಥಳೀಯವಾಗಿ ಲಭ್ಯವಾಗುವ ಇಂತಹ ಅನೇಕ ಕಚ್ಚಾವಸ್ತುವನ್ನು ಬಳಸಿ ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬಹುದಾಗಿದೆ.

ಸಂಪನ್ಮೂಲಗಳ ಸದ್ಬಳಕೆಯಿಂದ ಅದರಲ್ಲೂ ನಿರುಪಯುಕ್ತ ವಸ್ತುಗಳಿಂದ 'ಕಸದಿಂದ ರಸವನ್ನು' ಹೇಗೆ ತಯಾರಿಸಬೇಕೆಂದು ನಾವು ಜಪಾನ್ ದೇಶದಿಂದ ಕಲಿಯಬೇಕಾಗುತ್ತದೆ.

"ಜಪಾನೀಯರು ಯಾವುದನ್ನೂ ಹಾಳು ಮಾಡುವುದಿಲ್ಲ. ಹರುಕು ಚಿಂದಿಗಳಿದ್ದರೆ ಅವನ್ನು ಹೊಸದಾಗಿ ಏನಾದರೂ ಮಾಡಲು ಪ್ರಯತ್ನಿಸುತ್ತಾರೆ. ಕಳೆದ ಯುದ್ಧದ ಸಮಯದಲ್ಲಿ ಜಪಾನಿಗೆ ಬಟ್ಟೆಯ ಕೊರತೆ ಉಂಟಾದಾಗ, ಈ ಕೈಗಾರಿಕೆ ಮುಂದೆ ಬಂದಿತು. ಶಾಲೆಯ ಮಕ್ಕಳಿಂದ ಹಿಡಿದು ಪ್ರತಿಯೊಬ್ಬರೂ ಊರಲ್ಲಿ ಜನರು ಎಸೆದ ಹರುಕು ಚಿಂದಿ ಚೂರುಗಳನ್ನು ಒಟ್ಟು ಮಾಡಿ ಒಂದು ಕೇಂದ್ರ ಸ್ಥಳಕ್ಕೆ ಕಳುಹಿಸುವ ದೊಡ್ಡ ಏರ್ಪಾಡು ಅಲ್ಲಿದೆ. ನಾಗೋಯಾ ಮತ್ತು ಓಕಾಯಿಕಿ ಎಂಬ ಎರಡು ಪಟ್ಟಣಗಳು ಈ ಉದ್ಯಮವನ್ನು ಬೆಳೆಸಿವೆ. ಈ ಪ್ರಾಂತ್ಯ ಗುಡ್ಡಗಾಡಿನದ್ದು. ಬೇಸಾಯಕ್ಕೆ ಅನುಕೂಲವಲ್ಲದ್ದು, ಆದುದರಿಂದಲೇ ಅಲ್ಲಿನ ಜನಕ್ಕೆ ಒಂದು ಉದ್ಯಮವಾಗಲೆಂದು ಅಲ್ಲಿಗೆ ಬೇಕಾದ ಕಾರ್ಖಾನೆಗಳನ್ನು ತೆರೆದಿದ್ದಾರೆ. ಊರಿನ ಮಧ್ಯದಲ್ಲಿ ವೇಗವಾಗಿ ಹರಿಯುವ ನದಿ ಇದೆ. ಅದನ್ನು ಕಾರ್ಖಾನೆಯವರು ಬಳಸುತ್ತಾರೆ. ಹರಕು

ಬಟ್ಟೆಗಳನ್ನು ಯಂತ್ರಕ್ಕೆ ಕೊಟ್ಟು, ಹರಿದು ಚೂರು ಮಾಡಿ ಹತ್ತಿಯಂತೆ ಪರಿವರ್ತಿಸುತ್ತಾರೆ. ಅದನ್ನು ಹಿಂಜಿ ಸುರುಳಿಯಂತೆ ಮಾಡುತ್ತಾರೆ. ಈ ಸುರುಳಿಗಳನ್ನು ಗಿರಣಿಯ ಕದಿರುಗಳಂತೆ ತಿರುಗುವ ನಳಿಕೆಯಲ್ಲಿ ಇರಿಸುತ್ತಾರೆ. ಒಬ್ಬ ಹುಡುಗಿ ಇಂತಹ ಐದುನೂರು ಕದಿರುಗಳಿರುವ ಯಂತ್ರ ನೋಡಿಕೊಳ್ಳಬಲ್ಲಳು. ಇಲ್ಲಿಂದ ಹೊರಡುವ ನೂಲನ್ನು ಹೊಸೆದು, ಹತ್ತು, ಹನ್ನೆರಡು ನಂಬರಿನ ನೂಲಾಗಿ ಮಾಡುತ್ತಾರೆ. ಇಂತಹ ನೂಲಿನಿಂದ ಅನೇಕ ಬಣ್ಣ ಬಣ್ಣದ ಬಟ್ಟೆಗಳನ್ನು, ಹೆಣೆದ ಬಟ್ಟೆಗಳನ್ನು ಮಾಡುತ್ತಾರೆ. ಇವು ಚಿಂದಿಗಳಿಂದ ಮಾಡಿದವು ಎಂಬುದನ್ನು ನಂಬುವುದೇ ಕಷ್ಟ" – 4.

ಭಾರತದಲ್ಲಿಯೂ ಸಹ ಇಂತಹ ನಿರುಪಯುಕ್ತ ವಸ್ತುಗಳನ್ನು ಬಳಸಿ ಸಿದ್ಧ ಉಡುಪುಗಳನ್ನು ತಯಾರಿಸಲು ವಿಫುಲವಾದ ಅವಕಾಶಗಳಿವೆ. ಇವುಗಳಿಗೆ ತಗುಲುವ ವೆಚ್ಚವು ಸಹ ಕಡಿಮೆ.

ಯಾವುದೇ ಒಂದು ದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕಾದರೆ ಸಂಶೋಧನೆಗಳಿಗೆ ಅಗತ್ಯ ಗಮನವನ್ನು ನೀಡಬೇಕು. ಸಂಶೋದನೆಯ ಮುಖ್ಯ ಉದ್ದೇಶ ಬೆಲೆಯನ್ನು ತಗ್ಗಿಸಿ, ಗುಣಮಟ್ಟದ ಸರಕುಗಳನ್ನು ಉತ್ಪಾದಿಸುವ ಜೊತೆಗೆ ಸಂಪನ್ಮೂಲಗಳ ಸದ್ಬಳಕೆಯನ್ನು ಮಾಡುವುದಾಗಿರಬೇಕು.

ಜಪಾನೀಯರು ಸಂಶೋಧನೆಗಳಿಗೆ ನೀಡುವ ಪ್ರಾಮುಖ್ಯತೆಯನ್ನು ನಾವೂ ಸಹ ನೀಡಬೇಕು. ಆಪಾನಿನಲ್ಲಿ ಸಾವಿರಾರು ಸಂಶೋಧನಾ ಕೇಂದ್ರಗಳಿವೆ. ಅವುಗಳನ್ನು ಅಲ್ಲಿನ ಸ್ಥಳೀಯ ಸರ್ಕಾರಗಳು ನಿರ್ವಹಿಸುತ್ತಲಿವೆ. ಸಂಶೋಧನೆಯನ್ನು ನಡೆಸಿ ತಾವು ಕಂಡುಕೊಂಡ ಅಂಶಗಳನ್ನು ಹಂಚಿಕೊಳ್ಳುವ ಪ್ರವೃತ್ತಿ ಜಪಾನೀಯರದು. ಘಂಗಳಿಗೊಮ್ಮೆ ಇಂತಹಾ ಸಂಶೋಧನಾ ಕೇಂದ್ರಗಳು ಸ್ಥಳೀಯರಿಗಾಗಿ ಒಂದೊಂದು ಸಭೆ ನಡೆಸಿ, ತಮ್ಮ ಊರಿನ ಕೈಗಾರಿಕೆಗಳಿಗೆ ಸಂಬಂಧ ಪಟ್ಟ ಸಮಸ್ಯೆಯನ್ನು ಚರ್ಚಿಸುತ್ತಾರಲ್ಲದೆ, ಹೊಸ ಸಂಶೋಧನೆ, ನಿರ್ಮಾಣದ ರೀತಿಗಳನ್ನು ಕುರಿತು ಜನರೊಂದಿಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ.

ಭಾರತವು ಇಂದು ಜಾಗತೀಕರಣಕ್ಕೆ ತನ್ನ ಬಾಗಿಲುಗಳನ್ನು ತೆರೆದು ಕೊಂಡಿರುವುದರಿಂದ ನಮ್ಮ ಕೈಗಾರಿಕಾ ಕ್ಷೇತ್ರ ಹೊಸ ಹೊಸ ಸವಾಲುಗಳನ್ನು ಎದುರಿಸುತ್ತಲಿದೆ. ಇಂತಹ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಾದರೆ ಕಾರಂತರು ತಮ್ಮ ಲೇಖನಗಳಲ್ಲಿ ಪ್ರಾಸ್ತಾಪಿಸಿದ ಅನೇಕ ಅಭಿಪ್ರಾಯಗಳು ಸಹಕಾರಿಯಾಗಲಿವೆ. ನಮ್ಮಲ್ಲಿ ವಿಫುಲವಾಗಿ ಪ್ರಾಕೃತಿಕ ಸಂಪತ್ತು ಹಾಗೂ ಮಾನವ ಸಂಪತ್ತು ಲಭ್ಯವಿದ್ದು ಅವುಗಳ ಪರಿಣಾಮಕಾರಿಯಾದ ಬಳಕೆಯಿಂದ ನಮ್ಮ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ ಸಾಧ್ಯ.

---

4. ಜಪಾನಿನ ಕೈಗಾರಿಕೆಗಳು–ವಿಚಾರವಾಣಿ–3.1.1951 ರಿಂದ 21.3.1951

ಅಧ್ಯಾಯ 4

ಕಾರ್ಮಿಕ ವರ್ಗ ಅಥವಾ ಶ್ರಮಿಕ ವರ್ಗ

ಹಣದ ಪ್ರತಿಫಲಕ್ಕಾಗಿ ದೈಹಿಕವಾಗಿ ಅಥವಾ ಮಾನಸಿಕವಾಗಿ ಒಬ್ಬ ವ್ಯಕ್ತಿ ಯಾವುದೇ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದನ್ನು ಶ್ರಮ ಎನ್ನಲಾಗುವುದು.

ಆಲ್‌ಫ್ರೆಡ್ ಮಾರ್ಷಲ್ ಅವರ ಪ್ರಕಾರ "ಒಂದು ಕಾರ್ಯದಿಂದ ನೇರವಾಗಿ ಪಡೆಯಲಾಗುವ ಸಂತೋಷವೂ ಅಲ್ಲದೆ ಕೆಲವು ವಸ್ತುಗಳನ್ನು ಗಳಿಸುವ ದೃಷ್ಟಿಯಿಂದ ವಿನಿಯೋಗಿಸುವ ಪೂರ್ಣ ಅಥವಾ ಅಪೂರ್ಣವಾದ ಮಾನಸಿಕ ಅಥವಾ ದೈಹಿಕ ಯಂತ್ರವು ಶ್ರಮವಾಗಿದೆ".

ಪ್ರೊ.ಥಾಮಸ್ ರವರ ಪ್ರಕಾರ "ಪ್ರತಿಫಲದ ನಿರೀಕ್ಷೆಯಿಂದ ಮಾಡಲಾಗುವ ಎಲ್ಲಾ ದೈಹಿಕ ಅಥವಾ ಮಾನಸಿಕವಾದ ಮಾನವ ಪ್ರಯತ್ನವನ್ನು ಶ್ರಮವು ಒಳಗೊಂಡಿರುತ್ತದೆ". ಒಟ್ಟಾರೆಯಾಗಿ ಕೇವಲ ದೈಹಿಕ ಶ್ರಮವನ್ನು ವ್ಯಯಿಸುವವರನ್ನು ಮಾತ್ರ ಕಾರ್ಮಿಕರೆನ್ನದೆ ಮಾನಸಿಕವಾದ ಶ್ರಮವನ್ನು ವಿಭಿನ್ನ ರೀತಿಯ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವವರನ್ನು ಕಾರ್ಮಿಕರೆನ್ನಲಾಗುತ್ತದೆ.

ಒಂದು ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕ ವರ್ಗದ ಪಾತ್ರ ಬಹಳ ಪ್ರಮುಖವಾದದ್ದು. ದಕ್ಷ ಕಾರ್ಮಿಕ ವರ್ಗ ಒಂದು ದೇಶದ ನಿಜವಾದ ಆಸ್ತಿ ಇದ್ದಂತೆ. ಪ್ರಪಂಚದಲ್ಲಿ ಈಗಾಗಲೇ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿರುವ ರಾಷ್ಟ್ರಗಳಲ್ಲಿ ಶ್ರಮದ ದಕ್ಷತೆ ಹೆಚ್ಚಾಗಿರುವ ಅಂಶ ಗಮನಕ್ಕೆ ಬರುತ್ತದೆ. ಉದಾಹರಣೆಗೆ ಜಪಾನ್ ಮತ್ತು ಜರ್ಮನಿಯಲ್ಲಿ ಕಾರ್ಮಿಕ ದಕ್ಷತೆಯು ಅಧಿಕವಾಗಿರುವುದರಿಂದಲೇ ಲಭ್ಯವಿರುವ ಅಲ್ಪ ಸ್ವಲ್ಪ ಸಂಪನ್ಮೂಲಗಳನ್ನು ಬಳಸಿಕೊಂಡು ಈ ರಾಷ್ಟ್ರಗಳು ಆರ್ಥಿಕಾಭಿವೃದ್ಧಿಯನ್ನು ಸಾಧಿಸಿವೆ.

ಆದರೆ ಭಾರತದಂತಹ ಅನಭಿವೃದ್ಧ ರಾಷ್ಟ್ರಗಳಲ್ಲಿ ಶ್ರಮದ ದಕ್ಷತೆಯು ಕಡಿಮೆ ಇರುವ ಕಾರಣದಿಂದ ಸಂಪನ್ಮೂಲಗಳು ಹೇರಳವಾಗಿದ್ದರೂ ಸಹ ಅವುಗಳನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಲಾಗದೇ ನಾವು ಆರ್ಥಿಕವಾಗಿ ಹಿಂದುಳಿದಿದ್ದೇವೆ. ಕಾರ್ಮಿಕರ ದಕ್ಷತೆಯು ಆರ್ಥಿಕಾಭಿವೃದ್ಧಿ ನಿರ್ಧಾರಗಳಲ್ಲಿ ಪ್ರಮುಖವಾಗಿದೆ.

ಕಾರ್ಮಿಕರ ವಿಧಗಳು :

ಯಾವುದೇ ಒಂದು ರಾಷ್ಟ್ರದಲ್ಲಿ ಲಭ್ಯವಿರುವ ಕಾರ್ಮಿಕ ವರ್ಗವನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

1. ಕೃಷಿ ಕಾರ್ಮಿಕರು ಕೃಷಿಯಲ್ಲಿ ಮುಖ್ಯವಾಗಿ ಬೇರೆಯವರ ಒಡೆತನದಲ್ಲಿ ಕಾರ್ಯ ನಿರ್ವಹಿಸುವ ಶ್ರಮಿಕ ವರ್ಗವಾಗಿದೆ.

1950 ರಿಂದ 51ರ ಪ್ರಥಮ ಕೃಷಿ ಕಾರ್ಮಿಕರ ತನಿಖಾ ಸಮಿತಿಯ ವೇತನ ಪಾವತಿಯ ಕಾರಣಕ್ಕಾಗಿ ಬೆಳೆಯನ್ನು ಬೆಳೆಯುವುದರಲ್ಲಿ ತೊಡಗಿರುವ ಜನರನ್ನು ಕೃಷಿ ಕಾರ್ಮಿಕರು ಎಂದು ಪರಿಗಣಿಸಿದೆ. ಈ ಸಮಿತಿಯು ಶೇ.50 ಅಥವಾ ಅದಕ್ಕಿಂತ ಹೆಚ್ಚಿನ ದಿನಗಳ ವೇತನ ಪಾವತಿಗಾಗಿ ದುಡಿದ ಕಾರ್ಮಿಕರನ್ನು ಮಾತ್ರ ಕೃಷಿ ಕಾರ್ಮಿಕರು ಎಂದು ಪರಿಗಣಿಸಬೇಕೆಂದು ಅಭಿಪ್ರಾಯ ಪಟ್ಟಿದೆ.

1956-57ರ ದ್ವಿತೀಯ ಕೃಷಿ ಕಾರ್ಮಿಕರ ತನಿಖಾ ಸಮಿತಿಯು ಒಂದು ವಿಸ್ತಾರವಾದ ದೃಷ್ಟಿಕೋನವನ್ನು ಒಪ್ಪಿಕೊಂಡು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಾದ ಪಶು ಸಂಗೋಪನೆ, ಹೈನುಗಾರಿಕೆ, ಹಂದಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿದ ಎಲ್ಲಾ ಕಾರ್ಮಿಕರನ್ನು ಕೃಷಿ ಕಾರ್ಮಿಕರು ಎಂದು ಪರಿಗಣಿಸಿದೆ. ರಾಷ್ಟ್ರೀಯ ಕಾರ್ಮಿಕ ಆಯೋಗದ ಪ್ರಕಾರ "ಮೂಲಭೂತವಾಗಿ ನಿಪುಣರಲ್ಲದ ಮತ್ತು ಅಸಂಘಟಿತರಾದ ಹಾಗೂ ಜೀವನೋಪಾಯಕ್ಕಾಗಿ ಶ್ರಮವನ್ನು ಹೊರತುಪಡಿಸಿ ಬೇರೇನೂ ಇಲ್ಲದ ವ್ಯಕ್ತಿಯು ಕೃಷಿ ಕಾರ್ಮಿಕ" ಎಂಬ ಅಭಿಪ್ರಾಯವನ್ನು ತಾಳಿರುತ್ತದೆ. ಆದ್ದರಿಂದ ಕೃಷಿ ಕಾರ್ಮಿಕರೆಂದರೆ ಬೇರೆಯವರ ಭೂಮಿಯಲ್ಲಿ ದುಡಿಯುವ ಕಾರ್ಮಿಕರಾಗಿದ್ದಾರೆ. ಅವರು ತಮ್ಮ ಕೂಲಿಯನ್ನು ನಗದು ಅಥವಾ ಸರಕುಗಳ ರೂಪದಲ್ಲಿ ಪಡೆಯುತ್ತಾರೆ.

2. ಕೈಗಾರಿಕಾ ಕಾರ್ಮಿಕರು

ವಿವಿಧ ಬಗೆಯ ಕೈಗಾರಿಕೆಗಳಲ್ಲಿ ಉದ್ಯೋಗ ನಿರತರಾಗಿರುವ ಶ್ರಮಿಕರನ್ನು ಕೈಗಾರಿಕಾ ಕಾರ್ಮಿಕರು ಎನ್ನಲಾಗುತ್ತದೆ. ಅಂದರೆ ದೊಡ್ಡ, ಮಧ್ಯಮ ಹಾಗೂ ಗೃಹ ಕೈಗಾರಿಕೆಗಳಲ್ಲಿ ವೇತನಕ್ಕಾಗಿ ದುಡಿಯುವ ಎಲ್ಲಾ ಕೆಲಸಗಾರರನ್ನು ಕೈಗಾರಿಕಾ ಕಾರ್ಮಿಕರು ಎನ್ನಲಾಗುತ್ತದೆ. ಆದರೆ ಭಾರತದಲ್ಲಿ ಕೈಗಾರಿಕಾ ಕಾರ್ಮಿಕರು ಎಂಬ ಪದವನ್ನು ಸಂಕುಚಿತ ಅರ್ಥದಲ್ಲಿ ಬಳಸಲಾಗುತ್ತದೆ. ಕಾರ್ಖಾನೆಗಳ ಕಾಯಿದೆಯು ಅನ್ವಯವಾಗುವ ಕೈಗಾರಿಕೆಯಲ್ಲಿ ನಿರತರಾಗಿರುವ ಕಾರ್ಮಿಕರನ್ನು ಮಾತ್ರ ಕೈಗಾರಿಕಾ ಕಾರ್ಮಿಕರು ಎನ್ನಲಾಗುತ್ತಿದೆ. ಇವರನ್ನು ಸಂಘಟಿತ ಕಾರ್ಮಿಕರು ಎಂದು ಪರಿಗಣಿಸಲಾಗುತ್ತದೆ. ಇವರನ್ನು ಕೈಗಾರಿಕಾ ಕಾರ್ಮಿಕರ ಪಟ್ಟಿಯಲ್ಲಿ ಸೇರಿಸಿಲ್ಲ.

[illegible]

[illegible]

[illegible]

[illegible]

[illegible]

[illegible]

ಕೈಗಾರಿಕಾ ಉತ್ಪನ್ನಗಳ ಮೇಲೆ ನೇರವಾದ ಪರಿಣಾಮ ಬೀರುವ ಕೈಗಾರಿಕಾ ಕಾರ್ಮಿಕರ ದಕ್ಷತೆಯು ಭಾರತದಲ್ಲಿ ತೀರಾ ಕಡಿಮೆ ಇದೆ.

ಕಾರಂತರ ಅನಿಸಿಕೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ವಿಭಜನೆಯ ಪೂರ್ವದಲ್ಲಿ) ಸಂಪತ್ತು ಸಾಧನಗಳಿಗೆ ಹೋಲಿಸಿದರೆ ಜನಸಂಖ್ಯೆ ಹೆಚ್ಚಾಗಿದೆ. ಹೆಚ್ಚುವರಿ ಜನರಿಗೆ ಉದ್ಯೋಗವನ್ನು ಕಲ್ಪಿಸಲು ಸಾಧ್ಯವಾಗದೇ ಕಾರ್ಮಿಕ ವರ್ಗ ವಲಸೆ ಹೋಗುವುದನ್ನು ನಾವು ಕಾಣುತ್ತೇವೆ. ಈ ಜಿಲ್ಲೆಯಲ್ಲಿ ಕೃಷಿ ಮತ್ತು ಮೀನುಕಾರಿಕೆಯನ್ನು ಬಿಟ್ಟರೆ ಬೇರೆ ಯಾವ ಬೃಹತ್ ಉದ್ಯಮಗಳು ಸ್ಥಾಪನೆಯಾಗಿರಲಿಲ್ಲ. ಗೇರು ಬೀಜ ಕಾರ್ಖಾನೆಗಳಂತಹ ಸಣ್ಣ ಸಣ್ಣ ಉದ್ಯಮಗಳು ವರ್ಷದಲ್ಲಿ ಕೆಲವೇ ಕೆಲವು ತಿಂಗಳು ಕೆಲಸವನ್ನು ಕಾರ್ಮಿಕ ವರ್ಗಕ್ಕೆ ಒದಗಿಸುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉದ್ಯೋಗದ ಕೊರತೆಯುಂಟಾದಾಗ ಘಟ್ಟದ ಮೇಲ್ಭಾಗದ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಾಗಿ ವಲಸೆಹೋದ ಉದಾಹರಣೆಯಿದೆ. ಈ ಕಾರ್ಮಿಕ ವರ್ಗ ಚಿಕ್ಕಮಗಳೂರಿನ ಕಾಫಿ ತೋಟಗಳಲ್ಲಿ ಹಾಗೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಉದ್ಯೋಗವನ್ನು ಗಳಿಸಿಕೊಳ್ಳುವುದರ ಜೊತೆಗೆ ಈ ಜಿಲ್ಲೆಗಳ ಶ್ರಮದ ಕೊರತೆಯನ್ನು ನೀಗಿಸಲು ಸಹಾಯ ಮಾಡಿರುತ್ತಾರೆ.

ಕಾರಂತರ ಪ್ರಕಾರ ಘಟ್ಟ ಪ್ರದೇಶಗಳಲ್ಲಿಭೂಮಿಗೆ ಯಾವುದೇ ಕೊರತೆ ಇಲ್ಲ. ಇಲ್ಲಿನ ಕೃಷಿಗೆ ತೊಂದರೆ ಎಂದರೆ ಕಾರ್ಮಿಕರ ಅಭಾವ, ಇಲ್ಲಿ ಕೆಲಸಕ್ಕೆ ಆಳುಗಳು ಸಿಗುವುದಿಲ್ಲ. ಕರಾವಳಿಯ ಜನರು ಅಲ್ಲಿ ಕೆಲಸಕ್ಕೆ ಹೋಗಬೇಕು, ಹಾಗೆ ಹೋಗುವವರೆಲ್ಲಾ ಕೈತುಂಬಾ ಹಣ ಸಿಗುವ ಕಾಫಿ, ಏಲಕ್ಕಿ, ಅಡಿಕೆ ತೋಟಗಳಿಗೆ ಹೋಗುತ್ತಾರೆ. ಭತ್ತದ ಬೇಸಾಯಕ್ಕೆ ಕಾರ್ಮಿಕರ ಕೊರತೆ ಉಂಟಾಗುತ್ತಲಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕರು ಮಲೆನಾಡಿನ ಪ್ರಾಂತ್ಯಗಳಿಗೆ ವಲಸೆ ಹೋಗಲು ಹಿಂಜರಿಯುವ ಪ್ರಮುಖವಾದ ಕಾರಣವೇನೆಂದರೆ ಅಲ್ಲಿರುವ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಸಿಡುಬು ಇತ್ಯಾದಿ. ಇವುಗಳ ನಿವಾರಣೆಗಾಗಿ ಸೂಕ್ತವಾದ ಚಿಕಿತ್ಸಾ ವ್ಯವಸ್ಥೆಗಳು ಇಲ್ಲದೇ ಇರುವುದು –1.

ಕರಾವಳಿ ಪ್ರದೇಶದಿಂದ ವಲಸೆ ಹೋದ ಕಾರ್ಮಿಕ ವರ್ಗ ಸೇವಾ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿವೆ. ಮುಖ್ಯವಾಗಿ ಬ್ಯಾಂಕಿಂಗ್ ಕ್ಷೇತ್ರ, ವಿಮಾ ಕ್ಷೇತ್ರ ಹಾಗೂ ಹೋಟೆಲ್ ಉದ್ಯಮದಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

---

1. ಮಲೆನಾಡಿನಲ್ಲಿ ಆಹಾರ ಬೆಳವಣಿಗೆ – ನವಭಾರತ 15–8–1949

ಕಾರ್ಮಿಕ ಸಂಘಗಳು

ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಮತ್ತು ಮಾಲೀಕರ ದಬ್ಬಾಳಿಕೆಯನ್ನು ತಡೆಯುವ ಸಲುವಾಗಿ ವ್ಯವಸ್ಥಿತವಾಗಿ ಹೋರಾಡಲು ರಚಿಸಿಕೊಂಡ ಸಂಘಗಳೇ ಕಾರ್ಮಿಕ ಸಂಘಗಳಾಗಿವೆ.

ಕೆಲಸಗಾರರು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಸ್ವಯಂ ಪ್ರೇರಣೆಯಿಂದ ರಚಿಸಿಕೊಂಡ ಸಂಘಗಳೇ ಕಾರ್ಮಿಕ ಸಂಘಗಳು.

ಭಾರತದಲ್ಲಿ ಎರಡನೆಯ ಮಹಾಯುದ್ಧದ ನಂತರದಲ್ಲಿ ಕಾರ್ಮಿಕ ಸಂಘಗಳ ಬೆಳವಣಿಗೆ ತೀವ್ರವಾಯಿತು. ಸ್ವಾತಂತ್ರ್ಯಾನಂತರ ಈ ಹಿಂದೆ 1926ರಲ್ಲಿ ಜಾರಿಗೊಳಿಸಲಾದ ಕಾರ್ಮಿಕ ಸಂಘಗಳ ಕಾಯಿದೆಗೆ 1948, 1960, 1964ರಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡುವ ಮೂಲಕ ಎಲ್ಲಾ ವರ್ಗದ ಕಾರ್ಮಿಕರಿಗೂ ಸಂಘವನ್ನು ಸ್ಥಾಪಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡಲಾಯಿತು. ಫಲವಾಗಿ ಇಂದು ಭಾರತದಲ್ಲಿ ಅಸಂಖ್ಯಾತ ಕಾರ್ಮಿಕ ಸಂಘಗಳನ್ನು ನಾವು ಕಾಣುತ್ತೇವೆ.

ಆದರೆ ಭಾರತದ ಕಾರ್ಮಿಕ ಸಂಘಗಳು ತಮ್ಮದೇ ಆದ ಕೆಲವು ದೋಷಗಳನ್ನು ಹೊಂದಿವೆ. ಕಡಿಮೆ ಸದಸ್ಯತ್ವ, ಒಗ್ಗಟ್ಟಿನ ಅಭಾವ, ರಾಜಕೀಯ ಪ್ರಭಾವ ಮತ್ತು ರಚನಾತ್ಮಕ ಕೆಲಸದ ಅಭಾವ ಇತ್ಯಾದಿ. ಈ ಪ್ರಮುಖ ಸಮಸ್ಯೆಗಳಿಂದಾಗಿ ಕಾರ್ಮಿಕ ಸಂಘಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಗಿಲ್ಲ. ಕೇವಲ ಮುಷ್ಕರವನ್ನು ನಡೆಸುವ ಸಲುವಾಗಿಯೇ ಇವುಗಳನ್ನು ಸ್ಥಾಪಿಸ ಲಾಗುತ್ತದೆ ಎಂಬ ಭಾವನೆ ಜನಸಾಮಾನ್ಯರಲ್ಲಿ ಬರುವಂತಾಗಿದೆ.

ಡಾ||ಕೆ. ಶಿವರಾಮ ಕಾರಂತರು ಕಾರ್ಮಿಕ ಸಂಘಗಳಿಗೆ ಸಂಬಂಧಿಸಿದಂತೆ ತಿಳಿಸಿದ ಅಭಿಪ್ರಾಯಗಳು ಅತ್ಯಂತ ಸಮರ್ಪಕವಾಗಿದೆ.

"ಭರತ ಖಂಡಕ್ಕೇನೆ ಇಂದು ಸಂಪುಗಳ ಸುಗ್ಗಿ ಸೊಂಪಾಗಿ ಬಂದಂತೆ ಕಾಣುತ್ತಿದೆ. ಉಡಲು ಅರಿವೆ ಸಾಲದು, ಇರಲು ಮನೆ ಕಾಣದು, ಉಣಲು ಕಾಳು ಸಿಗದು. ಇವುಗಳ ಬರಗಾಲ ಕಾಣುತ್ತಿರುವಾಗ ಜನರ ಪಾಲಿಗೆ ಸಮಾಧಾನವೆಂದರೆ ಸಂಪುಗಳು ಧಾರಾಳವಾಗಿ ಆಗುತ್ತಿವೆಯೆಂದು" ಭಾರತದಲ್ಲಿ ಕಾರ್ಮಿಕವರ್ಗ ಸಂಪುಗಳನ್ನು ನಡೆಸುವುದರಿಂದ ತೀವ್ರ ಸಮಸ್ಯೆಗೆ ಸಿಲುಕುವವರು ಗಿರಾಕಿಗಳು ಅಥವಾ ಅನುಭೋಗಿಗಳು.

ಅವರ ಬಗ್ಗೆ ಯಾವ ಕಾರ್ಮಿಕ ಸಂಘಟನೆಗಳೂ ಸಹ ಯೋಚಿಸುತ್ತಿಲ್ಲ. ಕೇವಲ ತಮ್ಮ ಉದ್ದೇಶ ಸಾಧನೆಗಾಗಿ ಎಲ್ಲಾ ರೀತಿಯ ಕಾರ್ಮಿಕರು ಅಂದರೆ ಅಂಚೆಯವರು, ರೈಲ್ವೇನೌಕರರು, ಶಿಕ್ಷಕರು ಹೀಗೆ ಪ್ರತಿಯೊಂದು ವರ್ಗವೂ ಸಹ ಸಂಪುಗಳನ್ನು ಹೂಡುತ್ತಲೇ ಇರುತ್ತಾರೆ.

ಕಾರ್ಮಿಕರ ವರ್ಗ ಸಂಪು ನಡೆಸಲು ನೇರವಾದ ಕಾರಣ ಬಂಡವಾಳಶಾಹಿಗಳು. ಅವರು ತಮ್ಮ ಲಾಭವನ್ನು ಗರಿಷ್ಟಗೊಳಸುವ ಸಲುವಾಗಿ ಕಾರ್ಮಿಕರ ಬೇಡಿಕೆಗಳನ್ನು ಸದಾ ನಿರ್ಲಕ್ಷಿಸುತ್ತಿರುತ್ತಾರೆ. ಬಂಡವಾಳಗಾರ ಮತ್ತು ಸಾಮ್ರಾಜ್ಯಶಾಹಿಯ ದೃಷ್ಟಿಯಲ್ಲಿ ತಾವೊಬ್ಬರೇ ಸಂಪತ್ತಿನ ಉತ್ಪಾದಕರೆಂಬ ತಿಳವಿದೆ. ಆದುದರಿಂದ ಸಂಪತ್ತಿನ ವಿತರಣೆಯೂ ಅವರ ಅಧೀನವಾಗಿದೆ. ಮಾಲಿಗೆ ಆಧರಿಸಿದ ಬೆಲೆ, ಕೂಲಿಗೆ ಅವರು ಕೊಟ್ಟ ವೇತನ ರೂಡಿಯಾಗಿತ್ತು. ಕಾರ್ಮಿಕ ಸಂಘಗಳ ಉದಯಕ್ಕೆ ಪ್ರಪಂಚದಲ್ಲಿ ಕಾರಣ ಕರ್ತೃ ಕಾಲ್ ಮಾರ್ಕ್ಸ್, ಈತ ತನ್ನ ಸಿದ್ಧಾಂತಗಳ ಮೂಲಕ 'ಕಮ್ಯೂನಿಸ್ಟ್' 'ಮ್ಯಾನಿಪ್ಯಾಸ್ಟೊ' ಹಾಗೂ 'ದಾಸ್ ಕ್ಯಾಪಿಟಲ್' ಗ್ರಂಥಗಳ ಮೂಲಕ ಕಾರ್ಮಿಕ ವರ್ಗದವರಿಗೆ ಕರೆ ನೀಡುತ್ತಾನೆ. ಏಳ ಎದ್ದೇಳ, ಸಂಘಟಿತರಾಗಿ ನೀವು ಸಂಘಟಿತ ರಾಗುವುದರಿಂದ ನೀವು ಕಳೆದುಕೊಳ್ಳುವುದು ನಿಮ್ಮ ಸಂಕೋಲೆಗಳನ್ನಲ್ಲದೆ ಬೇರೆ ಏನನ್ನೂ ಅಲ್ಲ. ಎಂಬುದಾಗಿ ತಿಳಸುತ್ತಾರೆ.

ಈ ಕರೆಯಿಂದ ಪ್ರೇರಿತರಾದ ಪ್ರಪಂಚದ ಕಾರ್ಮಿಕವರ್ಗ ಸಂಘಟಿತರಾಗಿ, ತಮ್ಮ ಬೇಡಿಕೆಯ ಈಡೇರಿಕೆಗಾಗಿ ಒಗ್ಗಟ್ಟಾಗಲು ಮುಂದಾಗುತ್ತಾರೆ. ಪ್ರಪಂಚದ ಬೇರೆ ದೇಶಗಳಂತೆ ನಮ್ಮ ದೇಶದಲ್ಲಿಯೂ ಸಹ ಕಾರ್ಮಿಕ ಸಂಘಗಳು ಸ್ಥಾಪನೆಯಾಗಿ ಸಂಪುಗಳ ಮಹಾಪೂರಕ್ಕೆ ಕಾರಣವಾಗಿದೆ.

ಡಾ॥ಕೆ. ಶಿವರಾಮ ಕಾರಂತರ ಪ್ರಕಾರ "ಕಾರ್ಮಿಕ ಸಂಸ್ಥೆಗಳು ಶ್ರಮಗಾರರ ಹಿತವೊಂದನ್ನು ಗುರಿಯಾಗಿಸಿಕೊಂಡವರು. ಅದೂ ತಮ್ಮ ಬಳಗದ ಕಡಿಮೆ ಶ್ರಮದ ಕಾಲಕ್ಕೆ ಅಧಿಕ ವೇತನಕ್ಕಾಗಿ ಅವರು ಹೊಡೆದಾಡುತ್ತಿದ್ದಾರೆ. ಪ್ರಪಂಚದ ಯಾವತ್ತೂ ಮಾನವ, ಏಕೆ ಪ್ರತಿಯೊಂದು ಜೀವಿಯ ಹಂಬಲವು ಅಷ್ಟೇನೆ. ಆದಷ್ಟು ಕಡಿಮೆ ಶ್ರಮದಿಂದ ಅಧಿಕ ಸುಖ ಸಂಪಾದಿಸುವುದು" -2

ಇಂದು ನಮ್ಮ ದೇಶದ ಸ್ಥಿತಿ ಯಾವ ಹಂತಕ್ಕೆ ತಲುಪಿದೆ ಎಂದರೆ ಮುಷ್ಕರ ಸಂಪುಗಳಲ್ಲದೆ ಯಾವ ಸಮಸ್ಯೆಗೂ ಪರಿಹಾರವೇ ಇಲ್ಲದಂತಾಗಿದೆ. ಯಾವ ಕಾರ್ಮಿಕ ವರ್ಗ ಬಲಶಾಲಿಯಾಗಿ ಮುಷ್ಕರ ನಡೆಸುತ್ತದೆಯೋ ಆ ವರ್ಗದ ಬೇಡಿಕೆಗಳನ್ನು ಸರ್ಕಾರ ಈಡೇರಿಸುತ್ತದೆ. ಉದಾಹರಣೆಗೆ ಅಂಚೆ ನೌಕರರು, ರೈಲ್ವೆ ನೌಕರರು ಇತ್ಯಾದಿ ವರ್ಗದವರು ನಡೆಸುವ ಮುಷ್ಕರ, ಶೀಘ್ರ ಫಲವನ್ನು ನೀಡುತ್ತದೆ. ಶಾಲೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕ ಉಪನ್ಯಾಸಕರ ಕಥೆಯನ್ನು ಕೇಳುವವರಿಲ್ಲದಂತಾಗಿದೆ.

ಕಾರಂತರು ಹೇಳುವಂತೆ ಸಂಪಿನ ಮುಖ್ಯ ಉದ್ದೇಶ ಜೀವನ ಮಟ್ಟದ ಹೆಚ್ಚಳ. ಆದರೆ ಎಲ್ಲಾ ವ್ಯಕ್ತಿಗಳಲ್ಲಿಯೂ ಒಂದೇ ರೀತಿಯಾಗಿರಲೂ ಸಾಧ್ಯವಿಲ್ಲ. "ಶರೀರದ ಯಾವೊಂದು ಅಂಗವೂ ಪಕ್ಷಪಾತದ ರಕ್ಷಣೆ ಬೇಡುವುದು ತಪ್ಪು. ಎಡಕಣ್ಣು ಬಲಗಣ್ಣಿಗಿಂತ ಕಡಿಮೆಯಿಲ್ಲ,

---

2. ಗಿರಾಕಿ ಮಾತ್ರ ಗಿರ್ಕಿ – ಪ್ರಜಾಮತ, ದೀಪಾವಳ ಸಂಚಿಕೆ, ನವೆಂಬರ್ 1946.

ಕಾಲು ಕೈಗಿಂತ ಕಡಿಮೆಯಿಲ್ಲ. ಸಮಾಜಕ್ಕೆ ಸಲ್ಲಿಸುವ ಸೇವೆಯ ಅಂಶದಲ್ಲಿ ಅಂಚೆ ನೌಕರರ ವರ್ಗಕ್ಕೆ ಮಾತ್ರ – ಮನೆ ಭತ್ಯೆ, ತುಟ್ಟಿ ಭತ್ಯೆ ಇತ್ಯಾದಿಗಳ ಸೌಲಭ್ಯ ನೀಡಿ ಉಳಿದವರನ್ನು ನಿರ್ಲಕ್ಷಿಸುವುದು ತಪ್ಪಾಗುತ್ತದೆ.

ಕಾರಂತರು ತಮ್ಮ 'ಗಿರಾಕಿ ಮಾತ್ರ ಗಿರ್ಕಿ' ಎಂಬ ಲೇಖನದಲ್ಲಿ ಸರ್ಕಾರಿ ನೌಕರರು ನಡೆಸುವ ಮುಷ್ಕರದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ.

ಸರ್ಕಾರಕ್ಕೆ – ಪೋಲೀಸರು, ಅಂಚೆಯವರು, ರೈಲಿನವರು, ಉಪಾಧ್ಯಾಯರು, ಉಗ್ರಾಣಿಗಳು ಯಾರೇ ಇರಲಿ, ಸೇವೆ ಸಲ್ಲಿಸುವ ದೃಷ್ಟಿಯಿಂದ ಸಮಾನರಲ್ಲವೇನು ? ಸರ್ಕಾರದ ವರಮಾನ–ತೆರಿಗೆ, ಕಂದಾಯ ಮೊದಲಾದವುಗಳನ್ನು ಹೊಂದಿದೆ. ಆ ವರಮಾನ ಪ್ರಜೆಯ ಹುಟ್ಟುವಳಿಯ ಮೇಲೆ ನಿಂತಿದೆ. ಸರ್ಕಾರವೊಂದು ತನ್ನ ನೌಕರರ ಕ್ಷೇಮಕ್ಕಾಗಿ ತೆರಿಗೆದಾರರನ್ನು ಹಿಂಡಿ, ಹೀರಿದರೆ ನ್ಯಾಯವಾದೀತೆ ? ಅಧಿಕಾರಿ, ಚಾಕರ, ಸೇವಕರ ಗುಂಪುಗಳು ಸರ್ಕಾರವನ್ನು ಬೆದರಿಸಿ, ತಮ್ಮೊಬ್ಬರ ವರಮಾನ ಹೆಚ್ಚಿಸಿಕೊಂಡಷ್ಟೇ ನ್ಯಾಯ ಅದು. ಆದರೆ ರೈತ ಸಮುದಾಯ ಒಂದು ದಿನ ತನ್ನ ಕರ್ತವ್ಯವನ್ನು ನಿಲ್ಲಿಸಿದರೆ ಇಡೀ ವ್ಯವಸ್ಥೆಯೆ ಕುಸಿದು ಬೀಳುತ್ತದೆ. ಆದುದರಿಂದ ಯಾವ ಸಂದರ್ಭದಲ್ಲೇ ಆಗಲಿ, ರೈತರಿಂದಲೇ ಆಗಲಿ ಅಥವಾ ಇನ್ನರಿಂದಲೇ ಆಗಲಿ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆಯನ್ನು ಸಂಗ್ರಹಿಸಬಾರದು.

ಆದರೆ ಇಂದಿನ ದಿನಗಳಲ್ಲಿ ಸಂಪುಗಳು ಸಾಮಾನ್ಯವಾಗಿದ್ದು ಇದು ಸಾಮಾನ್ಯ ಜನತೆಯ ಮೇಲೆ ಅನೇಕ ಕೆಟ್ಟ ಪರಿಣಾಮಗಳುಂಟುಮಾಡುವುದರಿಂದ ಸರ್ಕಾರ ಈ ಸಮಸ್ಯೆಯನ್ನು ಸೂಕ್ತವಾಗಿ ನಿಭಾಯಿಸಬೇಕು. ಸರ್ಕಾರ ಇಲಾಖೆ–ಇಲಾಖೆಯೊಳಗಿನ ಬೇಧ–ಭಾವವನ್ನು ಬದಿಗಿರಿಸಬೇಕು. ಸಂಪಿನ ಆರ್ಥಿಕ ಪ್ರಶ್ನೆಯಲ್ಲಿ – ಬಂಡವಾಳಗಾರ, ಶ್ರಮಜೀವಿ, ಗಿರಾಕಿ ಮೂವರಿಗೂ ಅವರ ಯೋಗ್ಯತೆ, ಸ್ಥಾನವನ್ನು ಕಲ್ಪಿಸಬೇಕು. ಯಾವುದೇ ಸಂಸ್ಥೆ ಇನ್ನು ಮುಂದೆ ತಾನು ಬಂಡವಾಳಗಾರರಿಂದ ಸಡಿಲವಾಗುತ್ತಿರುವ ಆಸನದಲ್ಲಿ ಭದ್ರವಾಗಿ ನೆಲೆ ನಿಂತೇನು ಎಂಬುವ ಸ್ಥಿತಿಯನ್ನು ಬರಲು ಬಿಡಬಾರದು.

ವೇತನ ನಿರ್ಣಯ

ಕಾರ್ಮಿಕರು ಪಡೆಯುವ ವೇತನವು ಅವರ ಜೀವನ ನಿರ್ವಹಣೆಗೆ ಸಾಕಾಗುವಷ್ಟಿರಬೇಕು. ವಿಭಿನ್ನ ಸನ್ನಿವೇಶಗಳಲ್ಲಿ ಸಮಾನ್ಯ ಬೆಲೆಯ ಮಟ್ಟದಲ್ಲಾಗುವ ಸನ್ನಿವೇಶಗಳನ್ನು ಆಧರಿಸಿ ಕಾರ್ಮಿಕರಿಗೆ ತುಟ್ಟಿಭತ್ಯೆ, ದಿನಭತ್ಯೆ ಇತ್ಯಾದಿಗಳನ್ನು ನಿರ್ಧರಿಸಬೇಕಾಗುತ್ತದೆ ಎಂದು ಕಾರಂತರು ಅಭಿಪ್ರಾಯ ಪಟ್ಟಿದ್ದಾರೆ. ನಮ್ಮ ದೇಶದಲ್ಲಿ ಜನತೆ ತಮ್ಮ ಹಕ್ಕುಗಳಿಗಾಗಿ ಹೋರಾಡುವಂತೆ ಕರ್ತವ್ಯಗಳಿಗಾಗಿ ಹೋರಾಡುವುದಿಲ್ಲ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಕ್ಕು ಮತ್ತು ಕರ್ತವ್ಯಗಳನ್ನು ಸಮಾನ ದೃಷ್ಟಿಯಲ್ಲಿ ನೋಡಲಾಗುತ್ತದೆ. ಭಾರತದ ಕಾರ್ಮಿಕ ವರ್ಗ ಕೇವಲ ಹಕ್ಕುಗಳನ್ನು ಪಡೆಯಲು ಪ್ರಯತ್ನಿಸುತ್ತಿದೆಯೇ ಹೊರತು ಅದರ ಜೊತೆಯಲ್ಲಿ ತಮ್ಮ

ಕಾರ್ಯದಕ್ಷತೆಯನ್ನು ಕೌಶಲ್ಯವನ್ನು ಹೆಚ್ಚಿಸಲು ಪ್ರಯತ್ನಿಸುವುದೇ ಇಲ್ಲ. ಪ್ರತಿನಿತ್ಯ ಒಂದಲ್ಲಾ ಒಂದು ಕಾರಣಗಳಿಂದಾಗಿ ಮುಷ್ಕರ ಸಂಪುಗಳನ್ನು ಮಾಡುವುದರಲ್ಲಿ ನಿರತರಾಗುವ ಕಾರ್ಮಿಕ ವರ್ಗ ಅದರ ಪರಿಣಾಮಗಳ ಬಗ್ಗೆ ಚಿಂತಿಸುವುದೇ ಇಲ್ಲ. ಆದರೆ ಜಪಾನಿನಂತಹ ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗ ಸಾಂಕೇತಿಕವಾಗಿ ಸಂಪುಗಳನ್ನು ನಡೆಸಿದರೂ ಸಹ ಅದರಿಂದಾಗುವ ನಷ್ಟವನ್ನು ಮುಂದಿನ ದಿನಗಳಲ್ಲಿ ಭರಿಸಿಕೊಳ್ಳುತ್ತಾರೆ.

ಜಾಗತೀಕರಣದ ಇಂದಿನ ದಿನಗಳಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುವುದರಿಂದ ವಸ್ತುಗಳ ಗುಣಮಟ್ಟ ನಿರ್ವಹಣೆಗೆ ನಮ್ಮ ಕಾರ್ಮಿಕವರ್ಗ ಒತ್ತನ್ನು ನೀಡಬೇಕಾಗಿದೆ. ಈ ಉದ್ದೇಶಗಳಿಗಾಗಿ ಕಾರ್ಮಿಕ ಸಂಘಗಳು ತಮ್ಮ ಸದಸ್ಯರಿಗೆ ಸೂಕ್ತ ತರಬೇತಿ ಹಾಗೂ ಕೌಶಲ್ಯವನ್ನು ವೃದ್ಧಿಸುವ ಕಡೆಗೆ ಗಮನವನ್ನು ಹರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮಾಲಿಕ ವರ್ಗ ಮತ್ತು ಸರ್ಕಾರವೂ ಸಹ ಗಮನವನ್ನು ಹರಿಸಬೇಕಾಗಿದೆ.

ಅಧ್ಯಾಯ ೩

ಆರ್ಥಿಕಾಭಿವೃದ್ಧಿಯಲ್ಲಿ ಬಂಡವಾಳದ ಪಾತ್ರ

ಬಂಡವಾಳವು ಆರ್ಥಿಕಾಭಿವೃದ್ಧಿಯ ಕೀಲಿಕೈ ಆಗಿದೆ. ಆಧುನಿಕ ಯುಗದಲ್ಲಿ ಆರ್ಥಿಕಾಭಿವೃದ್ಧಿಯ ದರವನ್ನು ಲಭ್ಯವಿರುವ ಬಂಡವಾಳದ ಪ್ರಮಾಣವು ನಿರ್ಧರಿಸುತ್ತದೆ. ಆದ್ದರಿಂದಾಗಿ ಬಂಡವಾಳವನ್ನು ಆರ್ಥಿಕ ಪ್ರಗತಿಯ ಜೀವಾಳವೆಂದು ಕರೆಯುತ್ತಾರೆ.

ಡಾ||ಕೆ. ಶಿವರಾಮ ಕಾರಂತರು ಅಭಿವೃದ್ಧಿಯ ನಿರ್ಧಾರಕಗಳಲ್ಲಿ ಒಂದಾದ ಬಂಡವಾಳಕ್ಕೆ ಸಂಬಂಧಿಸಿದಂತೆ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಅರ್ಥಶಾಸ್ತ್ರದ ಹಿನ್ನೆಲೆಯಿಂದ ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಕಾರಂತರ ಅಭಿಪ್ರಾಯವನ್ನು ತಿಳಯುವ ಮುನ್ನ ಬಂಡವಾಳ ಎಂದರೇನು ? ಅದರ ಮಹತ್ವವೇನು ? ಅದನ್ನು ಸಂಗ್ರಹಿಸುವ ವಿಧಾನಗಳು ಯಾವುವು ಎಂಬುದನ್ನು ಅರಿಯುವ ಅಗತ್ಯದ ಬಗ್ಗೆ ಸಂಕ್ಷಿಪ್ತವಾಗಿ ತಿಳಯುವ ಪ್ರಯತ್ನ ಮಾಡಲಾಗಿದೆ.

ಬಂಡವಾಳದ ಅರ್ಥ

ಸಾಮಾನ್ಯ ಭಾಷೆಯಲ್ಲಿ ಬಂಡವಾಳವೆಂದರೆ ಹಣ ಎಂದು ಭಾವಿಸಲಾಗುತ್ತದೆ. ಆದರೆ ಅರ್ಥಶಾಸ್ತ್ರದಲ್ಲಿ ಬಂಡವಾಳಕ್ಕೆ ವಿಶೇಷ ಅರ್ಥವಿದೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ಬಳಸಲಾಗಿರುವ ಎಲ್ಲಾ ಮಾನವ ನಿರ್ಮಿತ ಸರಕುಗಳನ್ನು ಬಂಡವಾಳವೆನ್ನಲಾಗುತ್ತದೆ. ಅಂದರೆ ಸಂಪತ್ತಿನ ಮರು ಉತ್ಪಾದನೆಯಲ್ಲಿ ಬಳಸಲಾಗುವ ಸಂಪತ್ತಿನ ಯಾವುದೇ ಭಾಗವನ್ನು ಬಂಡವಾಳ ಎನ್ನಬಹುದು. ಉದಾಹರಣೆಗೆ ಯಂತ್ರಗಳು, ಉಪಕರಣಗಳು, ಸಲಕರಣೆಗಳು, ಸಾರಿಗೆ ಪರಿಕರಗಳು, ಹಣ ಇತ್ಯಾದಿ.

ಸಂಪತ್ತು ಯಾವುದೇ ವಸ್ತುವಿನಿಂದ ಹೆಚ್ಚುವುದಾದಲ್ಲಿ ಅದು ಬಂಡವಾಳವಾಗುತ್ತದೆ. ಸಂಕ್ಷಿಪ್ತವಾಗಿ ಬಂಡವಾಳ ಎಂದರೆ "ಉತ್ಪಾದನೆಯ ಉತ್ಪಾದಿತ ಸಾಧನ". ಬಂಡವಾಳವೆನ್ನುವ ಪರಿಕಲ್ಪನೆಗೆ ಸಂಬಂಧಿಸಿದಂತೆ ವಿಭಿನ್ನ ಅರ್ಥಶಾಸ್ತ್ರಜ್ಞರು ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಆಲ್‌ಫ್ರೆಡ್ ಮಾರ್ಷಲ್‌ರವರ ಪ್ರಕಾರ "ಬಂಡವಾಳವು ನಿಸರ್ಗದ ಉಚಿತ ಕೊಡುಗೆಯನ್ನು ಹೊರತುಪಡಿಸಿ ಆದಾಯವನ್ನು ಉತ್ಪತ್ತಿ ಮಾಡುವ ಎಲ್ಲಾ ರೀತಿಯ ಸಂಪತ್ತನ್ನು ಒಳಗೊಂಡಿರುತ್ತದೆ."

ಪ್ರೊಫೆಸರ್ ಸ್ಯಾಮ್ಯುಯಲ್ಸನ್‌ರವರ ಪ್ರಕಾರ "ಮರು ಉತ್ಪಾದನೆಯಲ್ಲಿ ಉತ್ಪಾದನಾ ಸಾಧನವಾಗಿ ಬಳಸಲಾಗುವ ಎಲ್ಲಾ ಉತ್ಪಾದಿತ ಸರಕುಗಳು ಬಂಡವಾಳವಾಗಿದೆ".

ಜೆ.ಆರ್. ಹಿಕ್ಸ್ ರವರ ಪ್ರಕಾರ "ಬರುವ ವರ್ಷಗಳಲ್ಲಿ ಬಯಕೆಯನ್ನು ತೃಪ್ತಿಪಡಿಸಲು ಯಾವುದೇ ರೀತಿಯಲ್ಲಿ ಬಳಸಬಹುದಾದ, ಪ್ರಸ್ತುತ ಕಾಲದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ರೀತಿಯ ಸರಕುಗಳನ್ನು ಬಂಡವಾಳ ಒಳಗೊಂಡಿರುತ್ತದೆ".

ಬಾಂ ಬಾವೆರ್ಕ್ ರವರ ಮಾತಿನಲ್ಲಿ "ಬಂಡವಾಳವು ಉತ್ಪಾದನೆಯ ಉತ್ಪಾದಿತ ಸಾಧನ" ಬಂಡವಾಳವೆಂದರೆ ಉತ್ಪಾದನೆಯ ವ್ಯವಸ್ಥೆಯಲ್ಲಿ ಪುನಃ ಪುನಃ ಬಳಕೆ ಮಾಡಬಹುದಾದ ಸಂಪತ್ತಾಗಿದೆ.

ಬಂಡವಾಳದ ಲಕ್ಷಣಗಳು

1. ಮಾನವ ನಿರ್ಮಿತವಾದದ್ದು – ಬಂಡವಾಳವು ನಿಸರ್ಗದ ಕೊಡುಗೆಯಾಗಿರದೇ ಮಾನವ ನಿರ್ಮಿತವಾಗಿದೆ.

2. ನಶಿಸುತ್ತದೆ – ಬಂಡವಾಳವು ನಶಿಸುವ ಅಥವಾ ನಾಶಹೊಂದುವ ಗುಣ ಹೊಂದಿದೆ. ಬಂಡವಾಳ ಸರಕುಗಳನ್ನು ಉಪಯೋಗಿಸುತ್ತಾ ಹೋದಂತೆಲ್ಲಾ ಸವೆದು ಹೋಗುವ ಅಥವಾ ನಾಶವಾಗುವ ಗುಣ ಹೊಂದಿರುತ್ತದೆ.

3. ಮಾನವನ ಹತೋಟಿ ಸಾಧ್ಯ – ಬಂಡವಾಳವು ಮಾನವ ನಿರ್ಮಿತನಾದುದರಿಂದ ಅದರ ಮೇಲೆ ಮಾನವನ ಹತೋಟಿ ಸಾಧ್ಯವಾಗುತ್ತದೆ.

4. ಚಲನಾತ್ಮಕವಾದದ್ದು – ಬಂಡವಾಳವು ಚಲನೆಯನ್ನು ಹೊಂದಿದೆ. ಅದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ಒಂದು ಉದ್ದೇಶದಿಂದ ಮತ್ತೊಂದು ಉದ್ದೇಶಕ್ಕೆ ಚಲಿಸುವ ಸ್ವಭಾವವನ್ನು ಪಡೆದಿದೆ.

5. ತ್ಯಾಗದ ಅಂಶ – ಬಂಡವಾಳ ಸರಕುಗಳು ಮಾನವ ನಿರ್ಮಿತವಾಗಿರುವುದರಿಂದ ಅವು ಮಾನವನ ತ್ಯಾಅಗದ ಅಂಶವನ್ನು ಒಳಗೊಂಡಿದೆ.

6. ಕೊರತೆ – ಬಂಡವಾಳ ಸರಕುಗಳ ಬೇಡಿಕೆಗೆ ಹೋಲಿಸಿದಾಗ ಪೂರೈಕೆಯು ಕೊರತೆಯಿಂದ ಕೂಡಿದೆ.

7. ನಿಷ್ಕ್ರಿಯ ಉತ್ಪಾದನಾಂಗ – ಬಂಡವಾಳವು ಜಡ ಉತ್ಪಾದನಾಂಗವಾಗಿದ್ದು, ಅದು ತನ್ನಿಂದ ತಾನೇ ಏನನ್ನೂ ಸಹ ಉತ್ಪಾದಿಸಲಾಗದು.

ಬಂಡವಾಳದ ಮಹತ್ವ

ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳದ ಪ್ರಾಮುಖ್ಯತೆಯನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

1. ಬೃಹತ್ ಪ್ರಮಾಣದ ಉತ್ಪಾದನೆಯ ಮೂಲ :- ಬಂಡವಾಳದ ನೆರವಿಲ್ಲದೆ ದೊಡ್ಡ ಪ್ರಮಾಣದ ಉತ್ಪಾದನೆಯನ್ನು ಕೈಗೊಳ್ಳುವುದು ಅಸಾಧ್ಯ. ಬೃಹತ್ ಪ್ರಮಾಣದ ಉತ್ಪಾದನೆಗೆ ದೊಡ್ಡ ಪ್ರಮಾಣದ ಬಂಡವಾಳ ಅನಿವಾರ್ಯ.

2. ಬಂಡವಾಳವು ಶ್ರಮಿಕರ ಉತ್ಪಾದನೆಯನ್ನು ಹೆಚ್ಚಿಸುತ್ತದೆ :- ಶ್ರಮಿಕರ ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಗೊಳಸಲು ಬಂಡವಾಳ ಸಹಾಯ ಮಾಡುತ್ತದೆ. ಉದಾಹರಣೆಗೆ ರೈತ ಪುರಾತನ ಕಾಲದ ಮರದ ನೇಗಿಲಿಗೆ ಬದಲಾಗಿ ಆಧುನಿಕ ಯಂತ್ರಗಳನ್ನು ಬಳಸುವುದರಿಂದ ಉತ್ಪಾದಕತೆ ಅಧಿಕವಾಗಲು ಸಹಾಯವಾಗುತ್ತದೆ.

3. ಬಂಡವಾಳದ ಸಹಾಯದಿಂದ ಆಧುನಿಕ ತಂತ್ರಜ್ಞಾನವನ್ನು ಬೆಳೆಸಲು ಸಾಧ್ಯ :- ಬಂಡವಾಳದ ಸಹಾಯವಿಲ್ಲದೇ ಆಧುನಿಕ ತಂತ್ರಜ್ಞಾನವನ್ನು ಯಾವುದೇ ಆರ್ಥಿಕ ಚಟುವಟಿಕೆಯಲ್ಲಿ ಅಳವಡಿಸಿಕೊಳ್ಳುವುದು ಅಸಾಧ್ಯ.

4. ಸಂಪನ್ಮೂಲದ ಗರಿಷ್ಟ ಬಳಕೆ :- ಯಾವುದೇ ಒಂದು ರಾಷ್ಟ್ರದಲ್ಲಿ ಲಭ್ಯವಿರುವ ಮಾನವ ಸಂಪತ್ತು ಹಾಗೂ ಪ್ರಾಕೃತಿಕ ಸಂಪತ್ತನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಬಂಡವಾಳವು ಸಹಾಯ ಮಾಡುತ್ತದೆ.

5. ಉದ್ಯೋಗ ಸೃಷ್ಟಿ :- ಭಾರತದಂತಹ ಅನಭಿವೃದ್ಧಿ ರಾಷ್ಟ್ರದಲ್ಲಿ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಬಂಡವಾಳ ತೀರಾ ಅಗತ್ಯವಾಗಿದೆ.

6. ಆರ್ಥಿಕ ಚಟುವಟಿಕೆ ವಿಸ್ತರಣೆ :- ಕೃಷಿ-ಕೈಗಾರಿಕೆ, ಸಾರಿಗೆ-ಸಂಪರ್ಕ, ವ್ಯಾಪಾರ-ವಾಣಿಜ್ಯ ಮುಂತಾದ ಆರ್ಥಿಕ ಚಟುವಟಿಕೆಗಳು ಬಂಡವಾಳದ ಸಹಾಯವಿಲ್ಲದೆ ವಿಸ್ತರಣೆ ಆಗಲಾರವು.

ಒಟ್ಟಿನಲ್ಲಿ ದೇಶದ ಆರ್ಥಿಕಾಭಿವೃದ್ಧಿಗೆ ಬಂಡವಾಳ ತೀರಾ ಅಗತ್ಯವಾಗಿದೆ ಎಂಬ ಅಂಶವನ್ನು ನಾವು ಮನಗಾಣಬೇಕಾಗುತ್ತದೆ. ಅದರಂತೆ ಹೆಚ್ಚಿನ ಬಂಡವಾಳ ಹೊಂದಿರುವ ರಾಷ್ಟ್ರಗಳು ಕಡಿಮೆ ಆರ್ಥಿಕಾಭಿವೃದ್ಧಿಯನ್ನು ಹೊಂದಿರುವ ಅಂಶವನ್ನು ನಾವು ಕಾಣಬಹುದಾಗಿದೆ.
ಬಂಡವಾಳದ ವಿಧಗಳು :

1. ಸ್ಥಿರ ಮತ್ತು ಚರ ಬಂಡವಾಳ :

ಸ್ಥಿರ ಬಂಡವಾಳವೆಂದರೆ ಉತ್ಪಾದನಾ ವ್ಯವಸ್ಥೆಯಲ್ಲಿ ಬಹಳ ದೀರ್ಘಕಾಲ ಬಳಸಲು ಸಾಧ್ಯವಿರುವ ಬಂಡವಾಳ. ಅಂದರೆ ಉತ್ಪಾದನಾ ಪ್ರಕ್ರಿಯೆಯಲ್ಲಿ ಪುನಃ ಪುನಃ ಸಾಕಷ್ಟು ದೀರ್ಘಾವಧಿಯವರೆಗೆ ಬಳಸಲು ಸಾಧ್ಯವಿರುವ ಬಂಡವಾಳವೇ ಸ್ಥಿರ ಬಂಡವಾಳವಾಗಿದೆ.

ಉದಾಹರಣೆಗೆ:- ಯಂತ್ರಗಳು, ಕಟ್ಟಡ, ಸಾಧನ ಸಲಕರಣೆ ಇತ್ಯಾದಿ. ಚರ ಬಂಡವಾಳ ವೆಂದರೆ ಉತ್ಪಾದನಾ ಪ್ರಕ್ರಿಯೆಯಲ್ಲಿ ಒಮ್ಮೆ ಮಾತ್ರ ಬಳಸಲು ಸಾಧ್ಯವಿರುವ ಬಂಡವಾಳ. ಅಂದರೆ ಯಾವುದೇ ಉತ್ಪಾದನಾ ಪ್ರಕ್ರಿಯೆಯಲ್ಲಿ ಒಮ್ಮೆ ಮಾತ್ರ ಬಳಸಬಹುದಾದ ಸಲಕರಣೆಗಳಾಗಿವೆ. ಇಂತಹ ಬಂಡವಾಳವನ್ನು ಒಮ್ಮೆ ಬಳಸಿದ ನಂತರ ಅವು ತುಷ್ಟಿ ಗುಣವನ್ನು ಕಳೆದುಕೊಳ್ಳುತ್ತದೆ. ಚರ ಬಂಡವಾಳವನ್ನು ದುಡಿಯುವ ಬಂಡವಾಳವೆಂದೂ ಕರೆಯುತ್ತಾರೆ. ಉದಾಹರಣೆಗೆ-ಕಚ್ಚಾ ವಸ್ತುಗಳು. ಇವುಗಳನ್ನು ಒಮ್ಮೆ ಉಪಯೋಗಿಸಿದ ನಂತರ ಅವುಗಳು ಪುನ: ಉಪಯೋಗಕ್ಕೆ ಬರುವುದಿಲ್ಲ.

2. ಭೌತಿಕ ಮತ್ತು ಹಣಕಾಸಿನ ಬಂಡವಾಳ

ನೈಜ ಮತ್ತು ಸ್ಪರ್ಶಯೋಗ್ಯ ಸರಕುಗಳ ರೂಪದಲ್ಲಿ ವ್ಯಕ್ತಪಡಿಸಲಾದ ಬಂಡವಾಳವನ್ನು ಭೌತಿಕ ಬಂಡವಾಳ ಎನ್ನಲಾಗುತ್ತದೆ. ಅಂದರೆ ಭೌತಿಕ ಬಂಡವಾಳವನ್ನು ಭೌತಿಕ ಸ್ವರೂಪದಲ್ಲಿ ಅಳೆದು ವ್ಯಕ್ತಪಡಿಸಲಾಗುತ್ತದೆ. ಉದಾಹರಣೆಗೆ:-ಯಂತ್ರಗಳು, ಸಾಧನ ಸಲಕರಣೆಗಳು, ಕಟ್ಟಡ ಮುಂತಾದವುಗಳು.

ಹಣಕಾಸಿನ ಬಂಡವಾಳ ಎಂದರೆ ಹಣದ ಮೂಲಕ ವ್ಯಕ್ತಪಡಿಸಲಾಗುವ ಬಂಡವಾಳವಾಗಿದೆ. ಅಂದರೆ ಹಣಕಾಸಿನ ಬಂಡವಾಳವನ್ನು ಹಣದ ಮೌಲ್ಯದ ಮೂಲಕ ಅಳೆದು ವ್ಯಕ್ತಪಡಿಸಲಾಗುತ್ತದೆ.

ಬಂಡವಾಳದ ಲಭ್ಯತೆ

ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಲು ಅಗತ್ಯವಾಗಿರುವ ಬಂಡವಾಳವನ್ನು ಸಂಗ್ರಹಿಸಲು ಅಥವಾ ಕ್ರೋಢೀಕರಿಸಲು ಯಾವುದೇ ಒಂದು ರಾಷ್ಟ್ರವು ಪ್ರಮುಖವಾಗಿ ಮೂಲಗಳನ್ನು ಆಶ್ರಯಿಸುತ್ತವೆ.

1. ಸ್ವದೇಶಿ ಮೂಲಗಳು
2. ವಿದೇಶೀ ಮೂಲಗಳು

ಪ್ರಸ್ತುತ ನಾವು ವಿಭಿನ್ನ ಸ್ವದೇಶಿ ಮೂಲಗಳ ಬಗ್ಗೆ ಪ್ರಸ್ತಾಪಿಸೋಣ.

1. ಸ್ವದೇಶಿ ಉಳಿತಾಯ ಯಾವುದೇ ಒಂದು ರಾಷ್ಟ್ರದ ಪ್ರಜೆಗಳು ಅನುಭೋಗದ ಮೇಲೆ ವೆಚ್ಚ ಮಾಡದೇ ಉಳಿಸಿಕೊಂಡಿರುವ ಭಾಗವು ಪ್ರಮುಖವಾದ ಬಂಡವಾಳದ ಮೂಲವಾಗಿದೆ.

2. ಕಡ್ಡಾಯ ಉಳಿತಾಯ ಜನರಲ್ಲಿ ಉಳಿತಾಯದ ಅವಶ್ಯಕತೆಯ ಮೂಲಕ ಅರಿವನ್ನು ಮೂಡಿಸುವ ಮೂಲಕ ಅಗತ್ಯವಾದ ಬಂಡವಾಳವನ್ನು ಸಂಗ್ರಹಿಸಬಹುದಾಗಿದೆ.

3. ಹಣಕಾಸು ಸಂಸ್ಥೆಗಳ ಸ್ಥಾಪನೆ ದೇಶದ ಬೇರೆ ಬೇರೆ ಭಾಗದಲ್ಲಿ ಅಗತ್ಯಕ್ಕೆ ತಕ್ಕಂತೆ ಬ್ಯಾಂಕಿಂಗ್ ಸಂಸ್ಥೆಗಳನ್ನು ಸ್ಥಾಪಿಸಿ ಉಳಿತಾಯಕ್ಕೆ ಉತ್ತೇಜಿಸಬಹುದು.

4. ರಾಷ್ಟ್ರೀಯ ಆದಾಯದ ಹೆಚ್ಚಳ ರಾಷ್ಟ್ರೀಯ ಆದಾಯ ಅಥವಾ ಉತ್ಪನ್ನವನ್ನು ಹೆಚ್ಚಿಸುವ ಮೂಲಕ ಜನತೆಯ ಉಳಿತಾಯ ಮಾಡುವ ಶಕ್ತಿಯನ್ನು ಹೆಚ್ಚಿಸಬಹುದಾಗಿದೆ.

5. ಆದಾಯದ-ಸಂಪತ್ತಿನ ಅಸಮಾನ ಹಂಚಿಕೆ ನಿವಾರಣೆ-ಸಮಾಜದಲ್ಲೂ ಆದಾಯ ಮತ್ತು ಸಂಪತ್ತಿನ ಅಸಮಾನ ಹಂಚಿಕೆಯನ್ನು ನಿವಾರಣೆ ಮಾಡುವ ಮೂಲಕ ಉಳಿತಾಯವನ್ನು ಉತ್ತೇಜಿಸುವುದು ಸಾಧ್ಯವಾಗುತ್ತದೆ.

6. ಅನುಭೋಗದ ಕಡಿತ – ಶ್ರೀಮಂತರ ಅನವಶ್ಯಕ ಅನುಭೋಗದ ಮೇಲೆ ನಿಯಂತ್ರಣವನ್ನು ಸಾಧಿಸುವ ಮೂಲಕ ಉಳಿತಾಯದ ಪ್ರಮಾಣವನ್ನು ಹೆಚ್ಚಿಸಬಹುದಾಗಿದೆ.

7. ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ಲಾಭದ ಹೆಚ್ಚಳ ಮುಂತಾದ ಕ್ರಮಗಳಿಂದಲೂ ಉಳಿತಾಯವನ್ನು ಹೆಚ್ಚಿಸಿ ಬಂಡವಾಳವನ್ನು ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಬಹುದಾಗಿದೆ.

8. ತೆರಿಗೆಗಳು ಮತ್ತು ಸಾರ್ವಜನಿಕ ಸಾಲಗಳು – ಬಂಡವಾಳ ಸಂಗ್ರಹಣೆಗೆ ತೆರಿಗೆಯು ಒಂದು ಪ್ರಮುಖವಾದ ಆಕರವಾಗಿದ್ದು, ತೆರಿಗೆಯಿಂದ ಬಂಡವಾಳ ಸಂಗ್ರಹಿಸಲು ಅಸಾಧ್ಯವಾದ ಸನ್ನಿವೇಶದಲ್ಲಿ ಸಾರ್ವಜನಿಕ ಸಾಲಗಳನ್ನು ಎತ್ತಬೇಕಾಗುತ್ತದೆ.

9. ಕೊರತೆಯ ಧನವಿನಿಯೋಗ ಕೊರತೆಯ ಧನ ವಿನಿಯೋಗ ನೀತಿಯ ಮೂಲಕ ಆದಾಯದ ಹೆಚ್ಚಳಕ್ಕೆ ಪ್ರೋತ್ಸಾಹವನ್ನು ನೀಡುವ ಮೂಲಕ ಉಳಿತಾಯಕ್ಕೆ ಪ್ರೋತ್ಸಾಹ ನೀಡಬಹುದು.

10. ಸಾರ್ವಜನಿಕ ಉದ್ಯಮಗಳಿಂದ ಆದಾಯ – ಸರ್ಕಾರ ತಾನೇ ಮುಂದಾಗಿ ಸಾರ್ವಜನಿಕ ಉದ್ಯಮಗಳನ್ನು ಸ್ಥಾಪಿಸಿ ಅವರಿಂದ ಬರುವ ಆದಾಯದಿಂದ ಬಂಡವಾಳ ಸಂಗ್ರಹಿಸಬಹುದಾಗಿದೆ.

11. ಮರೆಮಾಚಿದ ನಿರುದ್ಯೋಗ – ಮರೆಮಾಚಿದ ನಿರುದ್ಯೋಗ, ನಿರುದ್ಯೋಗದ ಒಂದು ವಿಧಾನವಾಗಿದ್ದು ಈ ಮೂಲಕ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಿ ಉಳಿತಾಯದ ಪ್ರಮಾಣವನ್ನು ಹೆಚ್ಚಿಸಬಹುದಾಗಿದೆ.

ಈ ಮೇಲಿನ ಎಲ್ಲಾ ಮೂಲಗಳನ್ನು ಸ್ವದೇಶೀ ಮೂಲವೆನ್ನಲಾಗುತ್ತದೆ.

ವಿದೇಶಿ ಮೂಲಗಳು

ಭಾರತದಂತಹ ಅನಭಿವೃದ್ಧ ರಾಷ್ಟ್ರದಲ್ಲಿ ಸ್ವದೇಶಿ ಮೂಲಗಳಿಂದ ಬಂಡವಾಳವನ್ನು ಸಂಗ್ರಹಿಸಲು ಇರುವ ಅವಕಾಶಗಳು ತೀರಾ ಕಡಿಮೆ ಇದ್ದು ಇಂತಹ ಸನ್ನಿವೇಶದಲ್ಲಿ ನಾವು ಅನಿವಾರ್ಯವಾಗಿ ವಿದೇಶಿ ಮೂಲಗಳನ್ನೆ ಆಶ್ರಯಿಸಬೇಕಾಗುತ್ತದೆ.

ಪ್ರಮುಖವಾದ ವಿದೇಶಿ ಮೂಲಗಳೆಂದರೆ

1. ವಿದೇಶಿ ಖಾಸಗಿ ಹೂಡಿಕೆ :- ವಿದೇಶದಲ್ಲಿರುವ ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಬಂಡವಾಳವನ್ನು ಅನಭಿವೃದ್ಧ ರಾಷ್ಟ್ರಗಳಲ್ಲಿ ತೊಡಗಿಸುವುದು ಒಂದು ಪ್ರಮುಖವಾದ ಒಂದು ವಿದೇಶಿ ಮೂಲವಾಗಿದೆ.

2. ವಿದೇಶಿ ನೆರವು :- ಬಂಡವಾಳ ಸಂಗ್ರಹಣೆಯ ಪ್ರಮುಖವಾದ ಮೂಲವೆಂದರೆ ವಿದೇತಿ ನೆರವು. ಶ್ರೀಮಂತ ರಾಷ್ಟ್ರಗಳು ಅನಭಿವೃದ್ಧ ರಾಷ್ಟ್ರಗಳಿಗೆ ವಿಭಿನ್ನ ರೀತಿಯ ಸಹಾಯವನ್ನು ನೀಡುವ ಮೂಲಕ ಬಂಡವಾಳ ಸಂಗ್ರಹಣೆಯನ್ನು ಉತ್ತೇಜಿಸಬಹುದಾಗಿದೆ.

3. ಆಮದು ನಿಯಂತ್ರಣ :- ವಿದೇಶದಿಂದ ಆಮದಾಗುವ ವಸ್ತುಗಳ ಮೇಲೆ ನಿರ್ಬಂಧವನ್ನು ಹೇರುವ ಮೂಲಕ ಸಂಪನ್ಮೂಲವನ್ನು ಉಳಿಸಿ ಬಂಡವಾಳವಾಗಿ ಪರಿವರ್ತಿಸಬಹುದಾಗಿದೆ.

4. ವ್ಯಾಪಾರದ ಕರಾರುಗಳು :- ವ್ಯಾಪಾರದ ಕರಾರುಗಳನ್ನು ಉತ್ತಮಪಡಿಸಿಕೊಳ್ಳುವ ಮೂಲಕ ಬಂಡವಾಳವನ್ನು ಸಂಗ್ರಹಿಸಬಹುದಾಗಿದೆ.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ವಿದೇಶಿ ಮೂಲಗಳಿಂದ ಬಂಡವಾಳವನ್ನು ಕ್ರೋಢೀಕರಿಸಬಹುದಾಗಿದೆ. ಆದಾಗ್ಯೂ ವಿದೇಶೀ ಮೂಲಗಳಿಂದ ಬಂಡವಾಳ ಸಂಗ್ರಹಣೆ ಮಾಡುವಲ್ಲಿ ರಾಜಕೀಯ ಅಂಶಗಳು ತಮ್ಮದೇ ಆದ ಪ್ರಭಾವವನ್ನು ಬೀರುತ್ತದೆ ಎಂಬುದನ್ನು ನಾವು ಮರೆಯುವಂತಿಲ್ಲ.

ಕರ್ನಾಟಕದ ಆರ್ಥಿಕಾಭಿವೃದ್ಧಿಗೆ ಬಂಡವಾಳದ ಅಗತ್ಯತೆಯನ್ನು ಮನಗಂಡ ಕಾರಂತರು ತಮ್ಮ ಲೇಖನವಾದ 'ಕರ್ನಾಟಕ ಪ್ರಾಂತ್ಯದ ಹೊಂಗನಸಿಗೆ' ಎಂಬ ಲೇಖನದಲ್ಲಿ ಹೀಗೆ ಹೇಳಿದ್ದಾರೆ.

ಕರ್ನಾಟಕದ ಆರ್ಥಿಕಾಭಿವೃದ್ಧಿಯಲ್ಲಿ ಬಂಡವಾಳಗಾರರ ಪಾತ್ರ ಅತ್ಯಮೂಲ್ಯವಾದದ್ದು. ಆದರೆ ದೂರದೃಷ್ಟಿಯುಳ್ಳ ಅನಿಶ್ಚಿತತೆಯನ್ನು ಎದುರಿಸಬಲ್ಲ ಬಂಡವಾಳಗಾರರ ಕೊರತೆ

[illegible]

[illegible]

[illegible]

[illegible]

[illegible]

ಕಂಡುಬರುತ್ತಿದೆ. ಈಗ ನಮ್ಮ ರಾಜ್ಯದಲ್ಲಿ ಆಗಿರುವ ಕೈಗಾರಿಕಾ ಅಭಿವೃದ್ಧಿಯು ಕೇವಲ ಸರ್ಕಾರದಿಂದಾಗಿದೆ. ನಮ್ಮಲ್ಲಿರುವ ಖಾಸಗಿ ಬಂಡವಾಳಗಾರರು ಬರಿಯ ವ್ಯಾಪಾರದಲ್ಲಿಯೇ ತೊಡಗಿಕೊಂಡಿದ್ದಾರೆ. ಪಾಲು ಬಂಡವಾಳ ಸಂಸ್ಥೆಗಳಿಂದ ಪ್ರಯೋಜನಕ್ಕಿಂತ ಹೆಚ್ಚಿನ ಹಾನಿಯನ್ನು ಜನರು ಅನುಭವಿಸಿದ್ದಾರೆ. ವ್ಯವಹಾರ ಕುಶಲರಲ್ಲದೆ ಸ್ವಾರ್ಥಿಗಳಾದ ಲಾಭಕೋರ ಬಂಡವಾಳಗಾರರಿಂದ ನಾಡು ತುಂಬಿ ಕೊಂಡಿದ್ದರೂ ಅದರಿಂದ ಏನೂ ಪ್ರಯೋಜನವಿಲ್ಲ. ಕೇವಲ ಸರ್ಕಾರವನ್ನೇ ಆಶ್ರಯಿಸುವುದು ಅಭಿವೃದ್ಧಿ ದೃಷ್ಟಿಯಿಂದ ಹಿತವಾಗಲಾರದು.

ನಮ್ಮ ಯುವ ಜನಾಂಗ ನೌಕರಿಯನ್ನು ಹಿಂಬಾಲಿಸಿ ದೊಡ್ಡ ದೊಡ್ಡ ಪಟ್ಟಣಗಳಿಗೆ ವಿದೇಶಗಳಿಗೆ ಹೋಗುವ ಬದಲು ಸ್ಥಳೀಯ ಬಂಡವಾಳ ನೆರವಿನಿಂದ ಸಂಪನ್ಮೂಲಗಳನ್ನು ಬಳಸಿ ನಮ್ಮ ರಾಜ್ಯದಲ್ಲೇ ಉದ್ಯಮಗಳನ್ನು ಸ್ಥಾಪಿಸಬೇಕು. ಅದರ ಜೊತೆಗೆ ಕೃಷಿ ಕ್ಷೇತ್ರದಲ್ಲಿ ಬಂಡವಾಳ ತೊಡಗಿಸಲು ಇರುವ ಅವಕಾಶಗಳನ್ನು ಸದುಪಯೋಗ ಗೊಳಿಸಿಕೊಳ್ಳಬೇಕು. ನೀರಾವರಿ ಸೌಲಭ್ಯಗಳ ವಿಸ್ತರಣೆಗಾಗಿ ನಮ್ಮ ರಾಜ್ಯದ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಕೃಷಿ ಭೂಮಿಯನ್ನು ಸಾಗುವಳಿ ಮಾಡುವ ಮೂಲಕ ಕನ್ನಡ ನಾಡನ್ನು ಶ್ರೀಮಂತಗೊಳಿಸಬಹುದು. ಜೊತೆಗೆ ಬೆಂಗಾಡಾಗಿರುವ ರಾಜ್ಯದ ಕೆಲವು ಪ್ರಾಂತ್ಯಗಳ ಗುಡ್ಡಗಾಡುಗಳಲ್ಲಿ ವ್ಯವಸ್ಥಿತವಾಗಿ ಕಾಡನ್ನು ಬೆಳೆಸದೆ ಹೋದರೆ ಮುಂದಿನ ದಿನಗಳಲ್ಲಿ ಅದಕ್ಕಾಗಿ ನಾವು ಭಾರೀ ಬೆಲೆಯನ್ನು ತೆರಬೇಕಾಗುತ್ತದೆ.

ಕಾರಂತರ ಪ್ರಕಾರ ಕೇವಲ ಬಂಡವಾಳಕ್ಕಾಗಿ ಸರ್ಕಾರವನ್ನು ಆಶ್ರಯಿಸದೇ ಖಾಸಗಿ ವ್ಯಕ್ತಿಗಳು ಉತ್ಪಾದನಾ ಉದ್ದೇಶಗಳಿಗೆ ತೊಡಗಿಸಬೇಕು.

ಡಾ||ಕೆ. ಶಿವರಾಮ ಕಾರಂತರು ಹೇಳುವಂತೆ ಭಾರತದ ಆರ್ಥಿಕಾಭಿವೃದ್ಧಿಗೆ ಬಂಡವಾಳವನ್ನು ತೊಡಗಿಸುವಾಗ ಗೃಹ ಕೈಗಾರಿಕೆ, ಗುಡಿ ಕೈಗಾರಿಕೆ ಹಾಗೂ ಬಹುಸಂಖ್ಯಾತರು ಅವಲಂಬಿಸಿರುವ ಕೃಷಿಯನ್ನು ಗಮನದಲ್ಲಿರಿಸಿಕೊಳ್ಳಬೇಕು. ನಾಡಿನ ಅಭಿವೃದ್ಧಿಗೆ ಅಗತ್ಯವಾದ ವಿದ್ಯುತ್ ಉತ್ಪಾದನೆಗೆ ಆದ್ಯ ಗಮನವನ್ನು ನೀಡಿ ಬಂಡವಾಳವನ್ನು ತೊಡಗಿಸಬೇಕು. [1]

ಸರ್ಕಾರ ಬಂಡವಾಳದ ಕ್ರೋಢೀಕರಣಕ್ಕಾಗಿ ತೆರಿಗೆಯನ್ನು ಆಶ್ರಯಿಸುವುದು ಸಾಮಾನ್ಯ. ಕಾರಂತರ ಪ್ರಕಾರ ತೆರಿಗೆಯನ್ನು ವಿಧಿಸಲು ಮಿತಿ ಇರಲೇ ಬೇಕು.

"ಜನರ ಗಳಿಕೆಯ ಮೇಲೆ ಶೇಕಡಾ 80.97 ರಷ್ಟು ಆದಾಯ ತೆರಿಗೆಯನ್ನು ಹೊರಿಸುವ ನಿರ್ಣಯ ವೃತ್ತಿಯಿಂದ ಬಂದ ಲಾಭವನ್ನು ಅಡಗಿಸುವ ಪ್ರವೃತ್ತಿಯು ಹೆಚ್ಚುತ್ತದೆ. ಜನರು ವ್ಯವಹಾರದಲ್ಲಿ ಹಾಕಿದ ಬಂಡವಾಳಕ್ಕೆ ಶೇಕಡಾ 10 ರಷ್ಟು ಲಾಭವನ್ನು ಪಡೆಯುವುದು ಅನ್ಯಾಯವೆಂದು ತಿಳಿಯುವಲ್ಲಿ ಸರ್ಕಾರ, ಉತ್ಪಾದಿಸಿದ ವಸ್ತುಗಳ ಮೇಲೆ ಶೇ.50ರಷ್ಟು ಸುಂಕ ವಿಧಿಸಿದರೆ ಅದು ದರೋಡೆ ಯಂತಾಗುತ್ತದೆ.

---

1. ಡಾ||ಕೆ. ಶಿವರಾಮ ಕಾರಂತ, ಬಂಡವಾಳಗಾರರಿಗೂ, ಸಂಪೂರ್ಣ ಸ್ವಾಮ್ಯಕ್ಕೂ ಮಧ್ಯಮ ಮಾರ್ಗ – ಪ್ರಜಾಮತ, ದೀಪಾವಳಿ ಸಂಚಿಕೆ, 1950

ಆರ್ಥಿಕ ನೀತಿಯು ವ್ಯಕ್ತಿಗೊಂದು, ಸರಕಾರಕ್ಕೆ ಇನ್ನೊಂದು ಎಂದು ನಾವು ತೋರಿಸಿಕೊಟ್ಟಾಗ ಜನರು ಸ್ವಾಭಾವಿಕವಾಗಿಯೇ ತೆರಿಗೆ ತಪ್ಪಿಸುತ್ತಾರೆ.

ಜನಗಳ-ಉಳಿಸಿದ ಹಣ ನಿರ್ಭಯವಾಗಿ, ನಾಡಿನ ಸರ್ಕಾರದ ಭೀತಿ ಇಲ್ಲದೆ ಬಂಡವಾಳವಾಗಿ ಉದ್ಯಮಕ್ಕೆ ಒದಗಬೇಕು. ಇಂತಾಹ ಸನ್ನಿವೇಶವಿದ್ದಾಗ ಮಾತ್ರ ಆರ್ಥಿಕಾಭಿವೃದ್ಧಿ ಸಾಧ್ಯವಾಗುತ್ತದೆ. ಖಾಸಗಿ ವ್ಯಕ್ತಿಗಳು ಆದಾಯಗಳಿಕೆಯ ಮೇಲೆ ಮಿತಿಯನ್ನು ವಿಧಿಸದೇ ಇದ್ದರೆ ಇಂತಹ ವಾತಾವರಣ ಸೃಷ್ಟಿಸಲು ಸಾಧ್ಯವಾಗುತ್ತದೆ.

ಬಂಡವಾಳಗಾರರು, ವ್ಯಾಪಾರಿಗಳು, ಬ್ಯಾಂಕಿನವರು ಇವರ ನಡುವೆ ಸೌಹಾರ್ದಯುತ ವಾತಾವರಣ ವಿರಬೇಕು. ಜಪಾನ್ ದೇಶ ಶೀಘ್ರವಾಗಿ ಅಭಿವೃದ್ಧಿ ಸಾಧಿಸಲು ಕಾರಣ ಬಂಡವಾಳಗಾರರು, ವ್ಯಾಪಾರಿಗಳು, ಬ್ಯಾಂಕಿನವರು, ಶ್ರಮಗಾರರು ಬೇರೆ ಬೇರೆ ಜಾತಿ ಎಂದು ತಿಳಿಯದೇ ಇರುವುದು ಎಂದು ಕಾರಂತರು ಜಪಾನನ್ನು ಉದಾಹರಿಸುತ್ತಾರೆ. ಅವರು ತಮ್ಮ ಲೇಖನವಾದ ಉದ್ಯೋಗಾವಕಾಶ ಕಲ್ಪಿಸಲು – ನವಯುಗ, ಸುವರ್ಣೋತ್ಸವ ಸಂಚಿಕೆ, 1972ರಲ್ಲಿ ಸಮಾಜವಾದದ ಸಿದ್ಧಾಂತದಿಂದ ಹೆಚ್ಚಿನ ಬಂಡವಾಳ ಸಂಗ್ರಹಣೆ ಅಸಾಧ್ಯವೆಂದು ಹೀಗೆ ವಿವರಿಸಿದ್ದಾರೆ. ಸಮಾಜವಾದದ ಕೆಂಗಾಜಿ ನಿಂದ, ಹಣ ಇರುವವ ತೋಳ ಎಂದು ಅವನನ್ನು ಕೊಲ್ಲಲು ಹೊರಟರೆ ಹಣ ಇಲ್ಲದವನಿಂದ ಬಂಡವಾಳ ಹುಟ್ಟದು. ಶ್ರೀಮಂತರನ್ನು ಬಡವರಾಗಿಸಿದಷ್ಟು ಅವರ ಉಳಿತಾಯ ಸಾಮರ್ಥ್ಯ ಕಡಿಮೆಯಾಗಿ ಬಂಡವಾಳ ಸಂಗ್ರಹಣೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

ಒಟ್ಟಾರೆಯಾಗಿ ಕಾರಂತರು ಬಂಡವಾಳಶಾಹಿ ಅರ್ಥವ್ಯವಸ್ಥೆಯೇ ಆರ್ಥಿಕಾಭಿವೃದ್ಧಿಗೆ ಪೂರಕವೆಂದು ತಿಳಿಸಿದ್ದಾರೆ.

ಬಂಡವಾಳ ಆರ್ಥಿಕಾಭಿವೃದ್ಧಿಯ ಅವಶ್ಯಕತೆಗಳಲ್ಲಿ ಒಂದೆಂಬ ಕಾರಂತರ ಅಭಿಪ್ರಾಯವನ್ನು ಒಪ್ಪಿಕೊಂಡರೂ ಅದನ್ನು ಸಂಗ್ರಹಿಸಲು ಬಂಡವಾಳಶಾಹಿ ಅರ್ಥ ವ್ಯವಸ್ಥೆಯೇ ಸೂಕ್ತ ಎಂಬ ಭಾವನೆ ಸರಿ ಅಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಬಂಡವಾಳಶಾಹಿ ಅರ್ಥ ವ್ಯವಸ್ಥೆಯನ್ನು ಹೊಂದಿರುವ ಅಮೇರಿಕಾದಂಥ ರಾಷ್ಟ್ರಗಳು ಬಡರಾಷ್ಟ್ರಗಳನ್ನು ಶೋಷಿಸುತ್ತಿರುವ ಅಂಶ ಗಾಬರಿ ಹುಟ್ಟಿಸುವಂತದ್ದು. ಅದರಂತೆ ದೇಶದ ಒಳಗೂ ಬಂಡವಾಳಶಾಹಿಗಳು ಸರ್ಕಾರದ ಮೇಲೆ ನಿಯಂತ್ರಣವನ್ನು ಸಾಧಿಸಿ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ.

---

2. ಡಾ॥ಕೆ. ಶಿವರಾಮ ಕಾರಂತ, ಬಂಡವಾಳಗಾರರಿಗೂ, ಸಂಪೂರ್ಣ ಸ್ವಾಮ್ಯಕ್ಕೂ ಮಧ್ಯಮ ಮಾರ್ಗ – ಪ್ರಜಾಮತ, ದೀಪಾವಳಿ ಸಂಚಿಕೆ, 1950

ಅಧ್ಯಾಯ 6

ಬಡತನ ನಿರುದ್ಯೋಗ ಸಮಸ್ಯೆ

ಮಾನವ ಜನಾಂಗಕ್ಕೆ ತಗುಲಿರುವ ಪ್ರಮುಖವಾದ ಶಾಪಗಳೆಂದರೆ ಬಡತನ ಮತ್ತು ನಿರುದ್ಯೋಗ. ಬಡತನ ಮತ್ತು ನಿರುದ್ಯೋಗ ಪರಸ್ಪರ ಅವಲಂಬಿತ ಸಮಸ್ಯೆಗಳು. ಭಾರತವು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಲ್ಲಿ ಬಡತನ ಮತ್ತು ನಿರುದ್ಯೋಗ ಪ್ರಮುಖವಾಗಿವೆ. ಪಂಚವಾರ್ಷಿಕ ಯೋಜನೆಗಳನ್ನು ಅನುಷ್ಠಾನಗೊಳಸಿದ ನಂತರದಲ್ಲಿ ಈ ಸಮಸ್ಯೆಯ ನಿವಾರಣೆಗಾಗಿ ಸಾಕಷ್ಟು ಬಂಡವಾಳವನ್ನು ತೊಡಗಿಸಿದಾಗ್ಯೂ ಈ ಸಮಸ್ಯೆಗಳು ಇಂದಿಗೂ ಸಹ ಜೀವಂತವಾಗಿದೆ.

ಬಡತನ ಮತ್ತು ನಿರುದ್ಯೋಗ ಸಮಸ್ಯೆಗೆ ಸಂಬಂಧಿಸಿದಂತೆ ಕಾರಂತರ ಅಭಿಪ್ರಾಯವನ್ನು ಪರಿಶೀಲಿಸುವ ಮೊದಲು ಇವುಗಳ ಅರ್ಥವನ್ನು ತಿಳಿಯುವುದು ಸೂಕ್ತ ಎನಿಸುತ್ತದೆ.

ಬಡತನ ಎಂಬ ಪದವನ್ನು ವ್ಯಾಖ್ಯಾನಿಸುವುದು ಕಷ್ಟ. ಬಡತನವು ಒಂದು ಸ್ಥಿತಿಯಾಗಿದ್ದು ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ ಮುಂತಾದ ಸೌಲಭ್ಯಗಳಿಂದ ವಂಚಿತರಾದಒಂದು ವರ್ಗ ಎನ್ನಬಹುದು. ಪ್ರತಿಯೊಬ್ಬರಿಗೂ ಮೂಲಭೂತ ಅವಶ್ಯಕತೆಗಳು ತೀರಾ ಅನಿವಾರ್ಯ. ಇವುಗಳನ್ನು ಯಾವ ವ್ಯಕ್ತಿಗಳಿಗೆ ಪಡೆಯಲು ಸಾಧ್ಯವಿಲ್ಲವೋ ಅವರನ್ನು ಬಡವರು ಎನ್ನಬಹುದು.

ಬಡತನ ಎಂಬ ಪದವನ್ನು ವ್ಯಾಖ್ಯಾನಿಸುವುದು ಕಷ್ಟದ ಕೆಲಸ. ಏಕೆಂದರೆ ಅದರ ಮಾಪನ ವಿಶ್ವದ ಬೇರೆ ಬೇರೆ ಭಾಗದಲ್ಲಿಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆದಿವೆ.

ಭಾರತದ ಯೋಜನಾ ಆಯೋಗದ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಪ್ರತಿನಿತ್ಯ 2,400 ಕ್ಯಾಲೋರಿ ಮತ್ತು ನಗರ ಪ್ರದೇಶದಲ್ಲಿ 2100 ಕ್ಯಾಲೊರಿಗಿಂತಲೂ ಕಡಿಮೆ ಆಹಾರವನ್ನು ಸೇವಿಸುತ್ತಿರುವವರನ್ನು ಬಡವರೆಂದು ಪರಿಗಣಿಸಬೇಕೆಂದು ತಿಳಿಸಿದೆ. ಅಂದರೆ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ತಿಂಗಳಿಗೆ ರೂ.107 ಹಾಗೂ ನಗರ ಪ್ರದೇಶದಲ್ಲಿ ರೂ.122 ಕ್ಕಿಂತಲೂ ಕಡಿಮೆ ಹಣವನ್ನು ಅನುಭೋಗದ ಮೇಲೆ ವಿನಿಯೋಗಿಸುತ್ತಿರುವವರನ್ನು ಬಡವರು ಎನ್ನಲಾಗುವುದು.

ಇತ್ತೀಚೆಗೆ ವಿಶ್ವಸಂಸ್ಥೆಯು ಬಡತನ ಎಂಬ ಪರಿಕಲ್ಪನೆಯನ್ನು ಆದಾಯದ ಆಧಾರದ ಮೇಲೆ ವ್ಯಾಖ್ಯಾನಿಸುವ ಪ್ರಯತ್ನ ಮಾಡಿದೆ. ಪ್ರತಿನಿತ್ಯ ಒಂದು ಅಮೇರಿಕನ್ ಡಾಲರ್‌ಗಿಂತ ಕಡಿಮೆ ಆದಾಯವನ್ನು ಯಾರು ಹೊಂದಿರುತ್ತಾರೋ ಅವರನ್ನು ಬಡವರೆಂದು ಪರಿಗಣಿಸ ಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಒಟ್ಟಾರೆಯಾಗಿ ಬಡತನ ಎಂಬ ಪರಿಕಲ್ಪನೆಯನ್ನು ಅರ್ಥೈಸುವುದು ಹಾಗೂ ಮಾಪನ ಮಾಡುವುದು ಸರಳವಲ್ಲ, ಸುಲಭವೂ ಅಲ್ಲ.

ಭಾರತದಲ್ಲಿ ಬಡತನದ ಪ್ರಮಾಣವನ್ನು ಈ ಕೆಳಗಿನ ಪಟ್ಟಿಯಿಂದ ತಿಳಿದುಕೊಳ್ಳಬಹುದು (ಶೇಕಡಾವಾರು)

ವರ್ಷ	ಗ್ರಾಮೀಣ ಪ್ರದೇಶ	ನಗರ ಪ್ರದೇಶ	ಒಟ್ಟು
1980	ಶೇ.45.7	ಶೇ.40.8	ಶೇ.44.5
1993	ಶೇ.37.3	ಶೇ.32.4	ಶೇ.36.0
2000	ಶೇ.27.1	ಶೇ.23.6	ಶೇ.26.1
2007	ಶೇ.21.1	ಶೇ.15.1	ಶೇ.19.3

ಮಾಹಿತಿಯ ಮೂಲ : ಆರ್ಥಿಕ ಸಮೀಕ್ಷೆ 2007

ಬಡತನಕ್ಕೆ ಕಾರಣಗಳು

1. ಜನಸಂಖ್ಯಾ ಸ್ಫೋಟ ಯಾವುದೇ ಒಂದು ರಾಷ್ಟ್ರದಲ್ಲಿ ಜನಸಂಖ್ಯೆಯು ತೀವ್ರವಾಗಿ ಹೆಚ್ಚುತ್ತಿದ್ದರೆ ಅದು ಬಡತನಕ್ಕೆ ಕಾರಣವಾಗುತ್ತದೆ.

2. ಕೃಷಿಯಲ್ಲಿ ಕಡಿಮೆ ಉತ್ಪನ್ನ – ಭಾರತದಂತಹ ಕೃಷಿ ಪ್ರಧಾನ ರಾಷ್ಟ್ರದಲ್ಲಿ ಕೃಷಿಯು ಕೇವಲ ಜೀವನಾಧಾರ ಕಸುಬಾಗಿದ್ದು, ಉತ್ಪಾದಕತೆ ಕಡಿಮೆ ಇರುವುದರಿಂದ ಆ ವಲಯದ ಮೇಲೆ ಅವಲಂಬಿತರಾಗಿರುವವರು ಬಡವರಾಗಿರುತ್ತಾರೆ.

3. ನಿರುದ್ಯೋಗ ಮತ್ತು ಅರೆ ಉದ್ಯೋಗದ ಸಮಸ್ಯೆ – ಸಾಮಾನ್ಯವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಿರುದ್ಯೋಗ ಸಮಸ್ಯೆ ಸಾಮಾನ್ಯ ಸಮಸ್ಯೆಯಾಗಿರುವ ಜೊತೆಗೆ ಅರೆ ಉದ್ಯೋಗ ಎಂದರೆ ಸಾಮರ್ಥ್ಯಕ್ಕಿಂತಲೂ ಕಡಿಮೆ ಮಟ್ಟದ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವುದಾಗಿದೆ.

4. ಆದಾಯದ ಅಸಮಾನತೆ – ಹಿಂದುಳಿದ ರಾಷ್ಟ್ರಗಳಲ್ಲಿ ಆದಾಯ ಮತ್ತು ಸಂಪತ್ತು ಸಮಾನವಾಗಿ ಹಂಚಿಕೆಯಾಗದಿರುವುದು ಬಡತನಕ್ಕೆ ಪ್ರಮುಖ ಕಾರಣವಾಗಿದೆ.

5. ದೋಷಪೂರಿತ ತೆರಿಗೆ ಪದ್ಧತಿ – ಸರ್ಕಾರದ ತೆರಿಗೆ ಪದ್ಧತಿಯು ಸಹ ಕೆಲವು ವೇಳೆ, ಬಡತನಕ್ಕೆ ಕಾರಣವಾಗುತ್ತದೆ. ಪ್ರಗತಿಪರ ತೆರಿಗೆ ವಿಧಾನವನ್ನು ಅನುಸರಿಸದೇ ಹೋದರೆ ಬಡತನ ಸಮಸ್ಯೆ ಉದ್ಭವವಾಗುತ್ತದೆ.

6. ಕೆಲವು ಸಾಮಾಜಿಕ ಅಂಶಗಳಾದ ಜಾತಿ ಪದ್ಧತಿ, ಅನಕ್ಷರತೆ, ಅವಿಭಕ್ತ ಕುಟುಂಬ ಪದ್ಧತಿ, ಜೊತೆಯಲ್ಲಿ ರಾಜಕೀಯ ಕಾರಣಗಳು ಬಡತನದ ಸಮಸ್ಯೆಗೆ ಕಾರಣವಾಗುತ್ತದೆ. ಸ್ವಾತಂತ್ರ್ಯ ಪಡೆದ ವೇಳೆಯಲ್ಲಿ ಅಂದರೆ 1947ರ ವೇಳೆಗೆ ಒಟ್ಟು ಜನಸಂಖ್ಯೆಯ ಶೇಕಡ 60ರಷ್ಟು ಜನ ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಪ್ರಸ್ತುತ ಶೇ.19.3ರಷ್ಟು ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಭಾರತದ ಎಲ್ಲಾ ರಾಜ್ಯಗಳಲ್ಲೂ ಬಡತನ ಒಂದೇ ಸಮನಾಗಿಲ್ಲ. ಒರಿಸ್ಸಾ ರಾಜ್ಯದಲ್ಲಿ ಅತಿ ಹೆಚ್ಚು ಅಂದರೆ ಶೇ.47ರಷ್ಟು ಮಂದಿ ಇದ್ದರೆ, ಕರ್ನಾಟಕದಲ್ಲಿ ಶೇಕಡಾ 20ರಷ್ಟು, ಪಂಜಾಬ್ ರಾಜ್ಯದಲ್ಲಿ ಅತಿ ಕಡಿಮೆ ಎಂದರೆ ಶೇ.6.63ರಷ್ಟು ಮಂದಿ ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ.

ಅದರಂತೆ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಬಡತನದ ಪ್ರಮಾಣವು ಏಕ ಪ್ರಕಾರವಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ 2007-08ರ ವೇಳೆಗೆ ಶೇ.26ರಷ್ಟು ಮಂದಿ ಹಾಗೂ ಪಟ್ಟಣ ಪ್ರದೇಶದಲ್ಲಿ ಶೇ.17ರಷ್ಟು ಮಂದಿ ಬಡತನವನ್ನು ಹೊಂದಿದ್ದಾರೆ.

"ಬಡತನ ಅಥವಾ ಶ್ರೀಮಂತಿಕೆ ಎನ್ನುವುದು ಬರಿಯ ವೇತನವನ್ನು ಹೊಂದಿಕೊಂಡಿಲ್ಲ. ಆ ವೇತನವನ್ನು ದೊರಕಿಸಿಕೊಡಬಲ್ಲ ಸೇವೆ, ಸೌಕರ್ಯಗಳನ್ನು ಅದು ಹೊಂದಿಕೊಂಡಿರುತ್ತದೆ. ಹಣದ ಪ್ರತಿಫಲವಿಲ್ಲದ ಸೇವೆ, ಸೌಕರ್ಯಗಳು ದುರ್ಲಭವಾದರೆ, ಅಥವಾ ಅವುಗಳ ಪ್ರಮಾಣ ಕಡಿಮೆಯಾದರೆ ಬಡತನ ನಿವಾರಣೆಯಾದಂತಾಗದು. ನಾವು ಇಂದಿನ ಯುಗದಲ್ಲಿ ಯಾವುದನ್ನು ವಿಲಾಸಿ ವಸ್ತುವೆಂದು ಕರೆಯಬಹುದು, ಯಾವುದು ಆವಶ್ಯಕ ವಸ್ತುವೆಂದು ಕರೆಯಬಹುದು ಎಂಬುದನ್ನು ನಿರ್ಧರಿಸುವುದು ಕಷ್ಟದ ಸಂಗತಿ. ಶರೀರದ ನಿತ್ಯಾವಶ್ಯಕತೆಗಳಿಗೆ ಬೇಕಾದ ಆಹಾರ, ಬಟ್ಟೆ, ಪಾದರಕ್ಷೆ ಅವಶ್ಯಕ ಪದಾರ್ಥಗಳಲ್ಲವೇ? ಅನ್ನದಲ್ಲೂ ತುಸು ಸರಿಯಾದದ್ದನ್ನೆ ತಿನ್ನಬೇಕಾದರೆ, ಪೌಷ್ಟಿಕವಾದದನ್ನು ತಿನ್ನಬೇಕಾದರೆ ಮೊಟ್ಟೆ, ಮಾಂಸ, ಹಾಲು ಉಪಯೋಗಿಸಬೇಕಾದಲ್ಲಿ ಅವುಗಳ ಬೆಲೆ ನಮ್ಮ ವರಮಾನ ಮೀರಿದಲ್ಲಿ ಅವನ್ನು ವಿಲಾಸಿ ವಸ್ತುಗಳು ಎನ್ನಬೇಕೆ ? ಅಲ್ಲದೇ ಮನುಷ್ಯ ಬರಿ ಅನ್ನದೇಹಿಯಲ್ಲ, ಹಸಿವೊಂದೇ ಅವನ ಜೀವನದ ಸಮಸ್ಯೆಯಲ್ಲ. ಆತ ಬುದ್ಧಿಜೀವಿ, ಬುದ್ಧಿಜೀವಿ ಯಾದುದರಿಂದಲೇ ವಿವಿಧ ಆಹಾರ ಪದಾರ್ಥಗಳಿಂದ ನಾಲಿಗೆ ತೃಪ್ತಿ ತೋರುತ್ತದೆ. ವಸ್ತ್ರ, ಒಡವೆಗಳಿಂದ ಮೈ ತೃಪ್ತಿ ಬೇಡುತ್ತದೆ. ಆಟ, ಸಂಚಾರ, ವಿರಾಮ ಮೊದಲಾದವುಗಳಿಂದ ಮನಸ್ಸು ಸಂತೋಷ ತೋರುತ್ತದೆ. ಇವೆಲ್ಲವನ್ನು ವಿಲಾಸದ ಪಟ್ಟಿಯಲ್ಲಿ ಸೇರಿಸಿದರೆ, ಮನುಷ್ಯನ ಬುದ್ಧಿಯ ಬಯಕೆಗೆ ಮುಟ್ಟುಗೋಲು ಹಾಕಿದಂತೆಯೇ ಸರಿ".

ಕಾರಂತರ ಪ್ರಕಾರ ಬಡತನವನ್ನು ಗುರುತಿಸುವುದು ಹಾಗೂ ಮಾಪನ ಮಾಡುವುದು ಕಷ್ಟದ ಕೆಲಸ. ಕೇವಲ ಮೂಲಭೂತ ಅವಶ್ಯಕತೆಗಳಿಂದ ವಂಚಿತರಾದ ಜನರನ್ನು ಬಡವರು ಎಂದು ಕರೆಯುವುದನ್ನು ಕಾರಂತರು ಒಪ್ಪುವುದಿಲ್ಲ.

ಕಾರಂತರು ಸಂಪತ್ತಿನ ಅಸಮಾನತೆಯಿಂದ ಬಡತನದ ಸಮಸ್ಯೆ ಉದ್ಭವಿಸುತ್ತದೆ ಎಂಬ ಅರ್ಥಶಾಸ್ತ್ರಜ್ಞರ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಏಕೆಂದರೆ ಭಾರತದಲ್ಲಿ ಸಂಪತ್ತನ್ನು

ಹಂಚುವಷ್ಟು ಪ್ರಮಾಣದಲ್ಲಿ ಸಂಪತ್ತೇ ಇಲ್ಲ. ಬದಲಾಗಿ ಬಡತನ ನಿವಾರಣೆಯಾಗಬೇಕಾದರೆ ಸಂಪತ್ತನ್ನು ಹೆಚ್ಚಿಸುವ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಮಿಕವರ್ಗವನ್ನು, ಬಂಡವಾಳಗಾರರನ್ನು ಪ್ರೋತ್ಸಾಹಿಸಬೇಕಾಗುತ್ತದೆ. ವ್ಯಕ್ತಿಯ ಲಾಭದೃಷ್ಟಿ ತನ್ನ ಶ್ರಮ ಮತ್ತು ಉತ್ಪನ್ನ ಇವುಗಳಿಗೆ ಪರಸ್ಪರ ಹೊಂದಿಕೆ ಇದೆ ಎಂಬ ಧೋರಣೆಯನ್ನು ತಿದ್ದಬೇಕು. ಸರ್ಕಾರ ಕನಿಷ್ಠ ವೇತನ ಮಿತಿಗಾಗಿ ಶಾಸನ ಮಾಡುವಂತೆಯೇ ಅವನ ಉತ್ಪನ್ನದ ಕನಿಷ್ಠ ಮಿತಿ ಎಷ್ಟೆಂದು ಶೋಧಿಸಿ ಗುರುತಿಸಿಕೊಡಬೇಕು. ಅದನ್ನು ಮೀರಬಲ್ಲ ವ್ಯಕ್ತಿಗಳು ಮಾತ್ರ ಸಂಪತ್ತನ್ನು ಹೆಚ್ಚಿಸುವವರಾಗುತ್ತಾರೆ. ಹಾಗೆ ಮೀರಬಲ್ಲ ಶ್ರಮಗಾರರ ಬಗ್ಗೆಯೂ, ಬಂಡವಾಳಗಾರರ ಬಗ್ಗೆಯೂ ಲಾಭದ ಹಾಗೂ ವೇತನದ ಆಸೆ ಹೆಚ್ಚುವಂತೆ ಮಾಡಬೇಕು.

ನಮ್ಮ ದೇಶದಲ್ಲಿ ಬಡತನ ನಿವಾರಣೆಯಾಗಬೇಕಾದರೆ ಉದ್ಯಮಗಳನ್ನು ಹೆಚ್ಚಿಸಬೇಕು. ನಮ್ಮಲ್ಲಿ ಲಭ್ಯವಿರುವ ಸಂಪತ್ತನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಕಾರಂತರ ಪ್ರಕಾರ ಭಾರತದಲ್ಲಿ ಉದ್ಯಮ ವಿಸ್ತರಣೆಗೆ ವಿಫುಲವಾದ ಅವಕಾಶಗಳಿವೆ. "ನಮ್ಮ ದೇಶದಲ್ಲಿ ತುಳಿದ ದಾರಿಗಿಂತ, ತುಳಿಯದಿರುವ ದಾರಿ ಬಹಳವಾಗಿದೆ. ಬೆಳೆದ ಉದ್ಯಮಗಳಿಗಿಂತ ಬೆಳೆಯ ಬೇಕಾದವು ಗಳ ಸಂಖ್ಯೆ ಹೆಚ್ಚಾಗಿದೆ. ಇಂಥಲ್ಲಿ ಬೆಳವಣಿಗೆಯನ್ನು ತಡೆಯುವ ಯಾವ ತೆರವಾದ ಭೀತಿಗೂ ಇಂಬುಗೊಡಬಾರದು. ಇಂದು ಅತಿ ಹೆಚ್ಚು ಉದ್ಯಮಗಳಿರುವ ರಾಷ್ಟ್ರಗಳು ಒಂದು ಪ್ರಶ್ನೆಯನ್ನು ಎದುರಿಸಬೇಕಾಗಿದೆ. ಉದ್ಯೋಗ ಕೇಂದ್ರಗಳು ಅಳತೆ ಮೀರಿ ಬೆಳೆದು ಜನರು ತಮ್ಮ ನೆಲೆ, ಮನೆಗಳನ್ನು ಬಿಟ್ಟು ನಗರಗಳಲ್ಲಿ ಬಾಳುವಂತಾಗಿದೆ.

ಕಾರಂತರು ಬಡತನ ನಿವಾರಣೆಗಾಗಿ ಉದ್ಯಮದ ವಿಸ್ತರಣೆಗೆ ಪ್ರಾಮುಖ್ಯತೆ ನೀಡಬೇಕೆಂದು ಅಭಿಪ್ರಾಯಪಟ್ಟರೂ ನಗರೀಕರಣದ ಪರಿಣಾಮವಾಗಿ ಅಲ್ಲಿ ಅನೇಕ ಸಮಸ್ಯೆಗಳೂ ಉದ್ಭವವಾಗುತ್ತವೆ ಎಂಬ ಅಂಶವನ್ನು ಹೇಳಲು ಮರೆಯಲಿಲ್ಲ. ಉದ್ಯಮಗಳ ವಿಸ್ತರಣೆಯಿಂದ ನಗರದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸಿದರೂ ಅದನ್ನು ಪರಿಹರಿಸಲು ಕಾರಂತರು ಕೆಲ ಮಾರ್ಗೋಪಯವನ್ನು ಸೂಚಿಸಿರುತ್ತಾರೆ.

ಭಾರತದಂತಹ ವಿಶಾಲ ದೇಶದಲ್ಲಿ ಇಂದು ಶೇ.70ರಷ್ಟು ಮಂದಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಅವರನ್ನು ನಗರಗಳ ಕಡೆಗೆ ವಲಸೆ ಹೋಗುವಂತೆ ಅವಕಾಶವನ್ನು ಸರಕಾರ ನೀಡಬಾರದು. ಬದಲಾಗಿ ಗ್ರಾಮೀಣ ಪ್ರದೇಶಗಳ ಕಡೆಗೆ ವಿಕೇಂದ್ರೀಕರಣಗೊಳಿಸಬಹುದಾದ ಉದ್ಯಮ ಗಳನ್ನು ಸ್ಥಳಾಂತರಿಸಿ ಗ್ರಾಮೀಣ ಮಟ್ಟದಲ್ಲಿ ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸಬಹುದಾಗಿದೆ. ಎಂಬುದು ಕಾರಂತರ ಅಭಿಪ್ರಾಯ.

ಕಾರಂತರು ಹೀಗೆ ಮುಂದುವರೆದು "ಜನ ವಾಸಿಸುತ್ತಿರುವ ಸಾವಿರಾರು ಹಳ್ಳಿಗಳಲ್ಲಿ ಉದ್ಯೋಗಗಳು ಹಂಚಿ ಹೋಗಬೇಕು. ಕೃಷಿಕರಾದವರಿಗೆ ವರ್ಷದ ಎಂಟು ತಿಂಗಳಲ್ಲಿ ಬೇರೆ ವೃತ್ತಿ ಇರುವುದಿಲ್ಲ. ಅಂದರೆ ಆಗ ಸಂಪಾದನೆಯೂ ಇಲ್ಲ, ಉತ್ಪಾದನೆಯೂ ಇಲ್ಲ. ಇಂತಹ ವೇಳೆಯಲ್ಲಿ ಕಡಿಮೆ ವೇತನದಿಂದಲೂ ಅವರು ತೃಪ್ತಿ ಪಡೆದು ಬದುಕಬಹುದು. ಈ ನಿಟ್ಟಿನಲ್ಲಿ

ಸರ್ಕಾರ ಯೋಚಿಸಿ ಯಾವೆಲ್ಲಾ ಉದ್ಯೋಗಗಳು ಈ ಬಗೆಯಲ್ಲಿ ಹಂಚಿಹಾಕಲು ಬರುತ್ತವೆ ಎಂಬ ಸಂಶೋಧನೆಯನ್ನು ಸರ್ಕಾರ ಮಾಡಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ – 1

ಉದ್ಯಮದ ವಿಸ್ತರಣೆಯಿಂದ ಸಂಪತ್ತಿನ ಹೆಚ್ಚಳ ಸಾಧ್ಯವೆಂದು ಮನಗಂಡ ಕಾರಂತರು ಅದಕ್ಕೆ ಅಗತ್ಯವಾದ ಬಂಡವಾಳದ ಲಭ್ಯತೆಯ ಬಗ್ಗೆಯೂ ಯೋಚಿಸುತ್ತಾರೆ. ಯಾವ ಯಾವ ಉದ್ಯಮ ಕ್ಷೇತ್ರದಲ್ಲಿ ಖಾಸಗಿ ವ್ಯಕ್ತಿಗಳು ಬಂಡವಾಳವನ್ನು ಹೂಡಲು ಮುಂದೆ ಬರುವುದಿಲ್ಲವೋ ಅಂತಹ ಕ್ಷೇತ್ರಗಳಲ್ಲಿ ಸರ್ಕಾರವೇ ಬಂಡವಾಳ ಹೂಡಿ ಉದ್ಯಮವನ್ನು ವಿಸ್ತರಿಸಬೇಕು. ಜೊತೆಯಲ್ಲಿ ಉದ್ಯಮ ಕ್ಷೇತ್ರದಲ್ಲಿ ಹತೋಟಿಯನ್ನು ಯಾವ ಪ್ರಮಾಣದಲ್ಲಿ ಹೊಂದಬೇಕು ಎಂದು ಸರ್ಕಾರ ಎಂದು ಚಿಂತಿಸಬೇಕಾಗಿದೆ.

ಕಾರಂತರು ಹೇಳುವಂತೆ ಮಲೆನಾಡು ಮತ್ತು ಕರಾವಳಿ ಭಾಗದ ರೈತರು ಬಡತನದ್ದ ಸಮಸ್ಯೆಯಿಂದ ಬಳಲುವುದಕ್ಕೆ ಮಾನವ ನಿರ್ಮಿತ ಅಂಶಗಳು ಕಾರಣವಾದಂತೆ ಪ್ರಾಕೃತಿಕ ಅಂಶಗಳೂ ಕಾರಣವಾಗುತ್ತದೆ. ವರ್ಷ, ಆರು ತಿಂಗಳಲ್ಲಿ ಸುರಿಯುವ ಬಿರುಮಳೆ ಕೆಲವೊಮ್ಮೆ ರೈತರ ಬದುಕನ್ನು ನರಕಸದೃಶ್ಯವಾಗಿಸುತ್ತದೆ. ತಾವು ಬೆಳೆದ ಬೆಳೆ ನಾಶವಾಗುವುದರ ಜೊತೆಗೆ ಫಲವತ್ತಾದ ಭೂಮಿಯ ಮಣ್ಣು ಕೊಚ್ಚಿ ಹೋಗುವ ಮೂಲಕ ಮುಂದಿನ ದಿನಗಳಲ್ಲಿ ಉತ್ತಮ ಬೆಳೆಯನ್ನು ಬೆಳೆಯಾಗದ ಸಮಸ್ಯೆಯನ್ನು ನಿರ್ಮಿಸುತ್ತದೆ. ಈ ಸಮಸ್ಯೆಗೆ ತುಪ್ಪ ಸುರಿದಂತೆ ಅಲ್ಪಸ್ವಲ್ಪ ಉಳಿದ ಬೆಳೆ ಕಾಡುಪ್ರಾಣಿಗಳ ಪಾಲಾಗಿ ರೈತರು ಹತಾಶೆ ಹೊಂದಬೇಕಾಗುತ್ತದೆ.

ಕಾರಂತರು ಬಡತನದ ನಿವಾರಣೆಗೆ ಸೂಚಿಸಿದ ಸೂಕ್ತಕ್ರಮಗಳೆಂದರೆ ವೈಜ್ಞಾನಿಕ ರೀತಿಯಿಂದ ಕೃಷಿಯ ವಿಸ್ತರಣೆ, ಉತ್ಪಾದಿತ ಸರಕಿಗೆ ಉತ್ತಮ ಮಾರುಕಟ್ಟೆ ನೀತಿ, ಸಂಕಷ್ಟ ಕಾಲದಲ್ಲಿ ಸರ್ಕಾರದಿಂದ ಸೂಕ್ತ ಸಹಾಯ, ಉದ್ಯಮದ ವಿಸ್ತರಣೆಗೆ ಅಗತ್ಯವಾದ ಸೂಕ್ತ ವಾತಾವರಣವನ್ನು ಕಲ್ಪಿಸುವುದು. ಈ ನಿಟ್ಟಿನಲ್ಲಿ ಸೂಕ್ತ ಸಂಶೋಧನೆಯನ್ನು ಕೈಗೊಳ್ಳುವ ಮೂಲಕ ಸೂಕ್ತ ಉದ್ಯಮ ನೀತಿಯನ್ನು ಪಾಲಿಸಿ ದೇಶದ ಉದ್ಯಮಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಬೇಕಾಗುತ್ತದೆ.

ನಿರುದ್ಯೋಗ

ಬಡತನವೆಂಬ ಸಮಸ್ಯೆಗೆ ಕಾರಣವಾದ ಒಂದು ಪ್ರಮುಖ ಅಂಶ ನಿರುದ್ಯೋಗ. ನಿರುದ್ಯೋಗ ಮಾನವ ಜನಾಂಗಕ್ಕೆ ತಗುಲಿದ ಮತ್ತೊಂದು ಶಾಪ. ಇದು ವಿಶ್ವವ್ಯಾಪಿಯಾಗಿದ್ದು, ಅನಭಿವೃದ್ಧ, ಅಭಿವೃದ್ಧಿ ಹೊಂದಿದ ರಾಷ್ಟ್ರವೆಂಬ ಬೇಧವನ್ನು ಎಣಿಸದೇ ಎಲ್ಲಾ ರಾಷ್ಟ್ರದಲ್ಲಿಯೂ ಸಹ ಕಾಣ ಬಹುದಾಗಿದೆ.

---

1. ಡಾ॥ಕೆ. ಶಿವರಾಮ ಕಾರಂತ – ಬಂಡವಾಳಗಾರರಿಗೂ ಸಂಪೂರ್ಣ ಸ್ವಾಮ್ಯಕ್ಕೂ ಮಧ್ಯಮ ಮಾರ್ಗ, ಪ್ರಜಾಮತ – ದೀಪಾವಳಿ ಸಂಚಿಕೆ – 1950

ನಿರುದ್ಯೋಗಕ್ಕೆ ಸಂಬಂಧಿಸಿದಂತೆ ಕಾರಂತರ ಅಭಿಪ್ರಾಯವನ್ನು ತಿಳಿಯುವ ಮುನ್ನ ನಿರುದ್ಯೋಗ ಎಂದರೇನು ? ಅದರ ಪ್ರಕಾರಗಳು ಯಾವುವು ? ಮುಂತಾದ ವಿಷಯಗಳ ಬಗ್ಗೆ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡೋಣ.

ಸಾಮಾನ್ಯ ಭಾಷೆಯಲ್ಲಿ ನಿರುದ್ಯೋಗವೆಂದರೆ ದುಡಿಯಲು ಸಮರ್ಥರಾದ್ದ, ದೃಢಕಾಯರಾದ ಮತ್ತು ಇಚ್ಛೆಯುಳ್ಳ ವ್ಯಕ್ತಿಗಳಿಗೆ ಉದ್ಯೋಗ ಸಿಗದೆ ಇರುವುದನ್ನು ನಿರುದ್ಯೋಗ ಎನ್ನಲಾಗುತ್ತದೆ.

ಒಬ್ಬ ವ್ಯಕ್ತಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಡನಾಗಿದ್ದು, ಸಧ್ಯದ ವೇತನ ಶ್ರೇಣಿಯಲ್ಲಿ ಕೆಲಸ ನಿರ್ವಹಿಸಲು ಆಸಕ್ತಿಯನ್ನು ವ್ಯಕ್ತಪಡಿಸಿದಾಗ್ಯೂ ಆತನಿಗೆ ಉದ್ಯೋಗದ ಅವಕಾಶಗಳು ಲಭ್ಯವಾಗದಿದ್ದರೆ ಅವನನ್ನು ನಿರುದ್ಯೋಗಿ ಎನ್ನಬಹುದು.

ಒಬ್ಬ ವ್ಯಕ್ತಿ ದೈಹಿಕವಾಗಿ ಸದೃಢನಾಗಿರುವುದು ಎಂದರೆ ಯಾವುದೇ ಅಂಗವೈಕಲ್ಯವನ್ನು ಹೊಂದದೇ ಇರುವುದು. ಮಾನಸಿಕವಾಗಿ ಸದೃಢರಾಗಿರುವುದು ಎಂದರೆ ಸರ್ಕಾರ ನಿಗದಿಗೊಳಿಸಿದ ಅರ್ಹತೆಯನ್ನು ಹೊಂದಿರುವುದು ಎಂದು ಅರ್ಥ. ಎಲ್ಲಾ ರೀತಿಯ ಅರ್ಹತೆಯನ್ನು ಹೊಂದಿದ್ದು ಸರ್ಕಾರ ನಿಗದಿತ ವೇತನದ ಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸಲು ಇಚ್ಛೆ ಹೊಂದಿದ ವ್ಯಕ್ತಿಗೆ ಉದ್ಯೋಗಾವಕಾಶಗಳು ಲಭ್ಯವಾಗದೇ ಇರುವ ಸ್ಥಿತಿಯನ್ನು ನಾವು ನಿರುದ್ಯೋಗ ಎಂದು ಕರೆಯಬಹುದು.

ನಿರುದ್ಯೋಗದ ಸಮಸ್ಯೆಗೆ ಕಾರಣಗಳು

ಭಾರತದಲ್ಲಿ ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ ನಿರುದ್ಯೋಗ ಸಮಸ್ಯೆಗೆ ಕಾರಣವಾಗಿದೆ. 1950-51ರಲ್ಲಿ 36.1 ಕೋಟಿ ಇದ್ದ ನಮ್ಮ ದೇಶದ ಜನಸಂಖ್ಯೆ 2001ರ ಜನಗಣತಿಯ ಪ್ರಕಾರ 102.8 ಕೋಟಿಗೆ ಹೆಚ್ಚಿದೆ. ಈ ಅಗಾಧ ಬೆಳವಣಿಗೆಯಿಂದಾಗಿ ದುಡಿಯುವ ಕೈಗಳಿಗೆ ಸೂಕ್ತ ಉದ್ಯೋಗವನ್ನು ಒದಗಿಸಲು ನಮಗೆ ಸಾಧ್ಯವಾಗುತ್ತಿಲ್ಲ.

1. ಕೃಷಿಯ ಮೇಲಿನ ಅತಿಯಾದ ಅವಲಂಬನೆ - ಭಾರತದಲ್ಲಿ ಇಂದಿಗೂ ಸಹ ಶೇ.58ರಷ್ಟು ಮಂದಿ ಕೃಷಿಯ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವಲಂಬಿಸುವುದರಿಂದ ಕೃಷಿ ವಲಯದಲ್ಲಿ ನಿರುದ್ಯೋಗ ಸಮಸ್ಯೆ ಕಂಡುಬರುತ್ತಿದೆ.

2. ಅರ್ಥವ್ಯವಸ್ಥೆಯ ಮಂದಗತಿಯ ಬೆಳವಣಿಗೆ:- ಸ್ವಾತಂತ್ರ್ಯ ಪಡೆದ ನಂತರದಲ್ಲಿ ಪಂಚವಾರ್ಷಿಕ ಯೋಜನೆಗಳಲ್ಲಿ ಸರ್ಕಾರ ಸಾಕಷ್ಟು ಬಂಡವಾಳ ತೊಡಗಿಸಿದ್ದರೂ ಸಹ ಅಭಿವೃದ್ಧಿಯ ದರ ಶೇ.7ರ ಆಸುಪಾಸಿನಲ್ಲಿಯೇ ಉಳಿದಿದೆ. ಇದೂ ಸಹ ಬಡತನಕ್ಕೆ ಕಾರಣವಾದ ಅಂಶವಾಗಿದೆ.

3. ದೋಷ ಪೂರಿತ ಶಿಕ್ಷಣ ಪದ್ಧತಿ ಮತ್ತು ವೈಜ್ಞಾನಿಕ ಶಿಕ್ಷಣದ ಅಭಾವದಿಂದಾಗಿ ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ನಮ್ಮಲ್ಲಿ ಹೆಚ್ಚುತ್ತಲಿದೆ.

4. ಉತ್ಪಾದನಾ ತಂತ್ರದ ಆಯ್ಕೆಯಲ್ಲಿನ ದೋಷ – ಭಾರತದಲ್ಲಿ ಶ್ರಮವು ಅಗ್ಗವಾಗಿ ಲಭಿಸುವುದರಿಂದ ಶ್ರಮಸಾಂದ್ರ ಉತ್ಪಾದನಾ ತಂತ್ರವನ್ನು ಸರ್ಕಾರ ಅಳವಡಿಸಿ ಕೊಳ್ಳ ಬೇಕಾಗುತ್ತದೆ. ಆದರೆ ಸ್ವಾತಂತ್ರ್ಯಾನಂತರ ನಮ್ಮ ಸರ್ಕಾರಗಳು ಬಂಡವಾಳ ಸಾಂದ್ರ ಉತ್ಪಾದನಾ ತಂತ್ರಕ್ಕೆ ಪ್ರಾಮುಖ್ಯತೆಯನ್ನು ನೀಡಿರುವುದರಿಂದ ನಮ್ಮಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ.

5. ದೋಷ ಪೂರಿತ ಯೋಜನಾ ಅನುಷ್ಠಾನ – ಭಾರತೀಯರು ಉತ್ತಮ ಯೋಜನಾ ರಚನಕಾರರೇ ವಿನಃ ಅನುಷ್ಠಾನಕಾರರಲ್ಲ. ಈ ಕಾರಣದಿಂದಾಗಿ ಸರ್ಕಾರದ ಯಾವುದೇ ನಿರುದ್ಯೋಗ ನಿವಾರಣಾ ಯೋಜನೆಗಳು ಸೂಕ್ತ ಫಲವನ್ನು ನೀಡದೇ ನಿರುದ್ಯೋಗ ಸಮಸ್ಯೆ ಜೀವಂತವಾಗಿದೆ.

ಭಾರತದಲ್ಲಿನ ನಿರುದ್ಯೋಗದ ಪ್ರಮಾಣ (ಶೇಕಡಾವಾರು)

ವರ್ಷ	ಗ್ರಾಮೀಣ	ನಗರ
1977-78	7.7	10.3
1987-88	5.3	9.4
1993-94	5.6	7.4
1999-2000	7.2	7.7

ಮಾಹಿತಿಯ ಮೂಲ : ರಾಷ್ಟ್ರೀಯ ಮಾದರಿ ಸಮೀಕ್ಷೆ,

ಭಾರತದಲ್ಲಿನ ನಿರುದ್ಯೋಗದ ವಿಧಗಳು

1. ಮುಕ್ತ ಅಥವಾ ತೆರೆದ ನಿರುದ್ಯೋಗ :- ಕೆಲಸ ಮಾಡಲು ಇಚ್ಛೆಯಿದ್ದು, ಸಾಮರ್ಥ್ಯವಿದ್ದು ಕಾರ್ಮಿಕರಿಗೆ ಒಂದು ನಿಗದಿತ ಆದಾಯ ದೊರಕುವಂತಹ ಸ್ಥಿತಿಯನ್ನು ಮುಕ್ತ ನಿರುದ್ಯೋಗ ಎನ್ನಲಾಗುವುದು.

2. ಮರೆಮಾಚಿದ ನಿರುದ್ಯೋಗ :- ಅಗತ್ಯಕ್ಕಿಂತಲೂ ಹೆಚ್ಚಿನ ಕಾರ್ಮಿಕರು ಒಂದು ಆರ್ಥಿಕ ಚಟುವಟಿಕೆಯಲ್ಲಿ ನಿರತರಾದರೆ ಆ ಸ್ಥಿತಿಯನ್ನು ಮರೆಮಾಚಿದ ನಿರುದ್ಯೋಗ ಎನ್ನಲಾಗುತ್ತದೆ.

3. ಅರೆ ಉದ್ಯೋಗ :- ತಮ್ಮ ಅರ್ಹತೆಗಿಂತಲೂ ಕಡಿಮೆ ಮಟ್ಟದ ಉದ್ಯೋಗದಲ್ಲಿ ತೊಡಗಿರುವ ಸ್ಥಿತಿಯನ್ನು ಅರೆ ಉದ್ಯೋಗ ಎನ್ನಲಾಗುತ್ತದೆ.

4. ಸ್ವಯಂ ನಿರುದ್ಯೋಗ :- ಮಾರುಕಟ್ಟೆಯಲ್ಲಿರುವ ವೇತನವನ್ನು ಪರಿಗಣಿಸಿ, ಆ ವೇತನವು ತಮ್ಮ ಸಾಮರ್ಥ್ಯಕ್ಕೆ ತಕ್ಕುದಲ್ಲವೆಂದು ಯಾವುದೇ ಉದ್ಯೋಗದಲ್ಲಿ ತೊಡಗದೇ ಇರುವುದನ್ನು ಸ್ವಯಂ ನಿರುದ್ಯೋಗ ಎನ್ನಲಾಗುತ್ತದೆ.

5. ತಾಂತ್ರಿಕ ನಿರುದ್ಯೋಗ :- ತಾಂತ್ರಿಕ ಅಭಿವೃದ್ಧಿಯಿಂದಾಗಿ ಅಥವಾ ಸುಧಾರಿತ ಮಾದರಿಯ ಯಂತ್ರಗಳ ಶೋಧನೆಯಿಂದಾಗಿ, ಈಗ ಕೆಲಸದಲ್ಲಿರುವ ಕಾರ್ಮಿಕರನ್ನು ತೆಗೆದುಹಾಕಿದಾಗ ಅಥವಾ ಇನ್ನಷ್ಟು ಹೊಸ ಕಾರ್ಮಿಕರನ್ನು ನೇಮಿಸಿಕೊಳ್ಳದಿರುವ ಸ್ಥಿತಿಯನ್ನು ತಾಂತ್ರಿಕ ನಿರುದ್ಯೋಗ ಎನ್ನಲಾಗುತ್ತದೆ.

6. ಋತುಮಾನದ ನಿರುದ್ಯೋಗ :- ಕಾರ್ಮಿಕ ವರ್ಗಕ್ಕೆ ವರ್ಷದ ಕೆಲವು ತಿಂಗಳು ಮಾತ್ರ ಉದ್ಯೋಗವಿದ್ದು, ಉಳಿದ ಸಮಯದಲ್ಲಿ ಕೆಲಸವಿಲ್ಲದಿರುವ ಸ್ಥಿತಿಯನ್ನು ಋತುಮಾನದ ನಿರುದ್ಯೋಗ ಎನ್ನಲಾಗುತ್ತದೆ. ಉದಾಹರಣೆಗೆ ರೈತರಿಗೆ ವರ್ಷದ ಕೆಲವು ತಿಂಗಳು ಮಾತ್ರ ಕೆಲಸವಿದ್ದು ಉಳಿದ ಸಮಯ ಹಾಗೆಯೇ ಇರುವಂತಹ ಸ್ಥಿತಿಯಾಗಿದೆ.

ಡಾ॥ ಕೆ. ಶಿವರಾಮ ಕಾರಂತರ ಅಭಿಪ್ರಾಯದಲ್ಲಿ ಭಾರತದಲ್ಲಿ ಉದ್ಯೋಗ ಸೃಷ್ಟಿಯ ಕಾರ್ಯವನ್ನು ಮಾಡಲು ಕೇವಲ ಸರ್ಕಾರಕ್ಕೆ ಮಾತ್ರ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕಾರಂತರು ಸರ್ಕಾರದ ಉದ್ಯಮಗಳ ರಾಷ್ಟ್ರೀಕರಣದ ನೀತಿಯನ್ನು ಕಟುವಾಗಿ ಟೀಕಿಸುತ್ತಾರೆ. ಮೊದಲೇ ಬಂಡವಾಳದ ಕೊರತೆಯಿಂದ ನರಳುತ್ತಿರುವ ಭಾರತದಲ್ಲಿ ಉದ್ಯಮಗಳನ್ನು ಸರ್ಕಾರವೇ ನಿರ್ವಹಿಸುವಂತಹ ಸ್ಥಿತಿ ಸಾಧ್ಯವಿಲ್ಲ ಎಂಬುದು ಕಾರಂತರ ಅಭಿಪ್ರಾಯ. ಅವರ ಮಾತಿನಲ್ಲೇ ಹೇಳುವುದಾದರೆ ಸರ್ಕಾರ ಇಂದು ಅಷ್ಟೊಂದು ಜನರಿಗೆ ಉದ್ಯಮ ಕಲ್ಪಿಸುವ ಸ್ಥಿತಿಯಲ್ಲಿ ಇಲ್ಲ. ಮೊದಲಿಗೆ ಅಧಿಕ ಮಟ್ಟದ ಉದ್ಯೋಗದ ವಿಸ್ತರಣೆಗೆ ಸರ್ಕಾರದಲ್ಲಿ ಹಣವಿಲ್ಲ. ಅದೀಗ ಮಾಡಿಕೊಂಡಿರುವ ಸಾರ್ವಜನಿಕ ಸಾಲದ ಮೊತ್ತ 18,000 ಕೋಟಿ ರೂಪಾಯಿಗಳನ್ನು ಮುಟ್ಟಿದೆ (ಪ್ರಸ್ತುತ ಸಾರ್ವಜನಿಕ ಸಾಲ-24,73,260 ಕೋಟಿ) ಅದರ ಬಡ್ಡಿ ಮತ್ತು ಕಂತುಗಳನ್ನು ಕಾಲಕಾಲಕ್ಕೆ ಸಲ್ಲಿಸಬೇಕು. ಅಲ್ಲದೇ, ಉದ್ಯಮದಲ್ಲಿ ಈಗಾಗಲೇ ತೊಡಗಿಸಿದ 3,500 ಕೋಟಿ ರೂಪಾಯಿಗಳು ಲಾಭ ತರುವ ಬದಲು ಇನ್ನೂ ನಷ್ಟದಲ್ಲಿ ನಡೆಯುತ್ತಿವೆ.

ಆದ್ದರಿಂದ ಖಾಸಗಿ ವಲಯವು ಉದ್ಯಮವನ್ನು ಪ್ರಾರಂಭಿಸಿ ಉದ್ಯೋಗ ಅವಕಾಶಗಳನ್ನು ವಿಸ್ತರಿಸಬೇಕೆಂದು ಕಾರಂತವಾದ. "ಉದ್ಯಮಗಳು ಯಾವುದೇ ಇರಲಿ- ಅದನ್ನು ಆರಂಭಿಸಿ ನಡೆಸಲು ನೂರಾರು, ಸಾವಿರಾರು ಜನರು ಮುಂದೆ ಬಂದರೆ ಮಾತ್ರ ಅವು ನಡೆದು ವಿಸ್ತರಿಸುತ್ತಾ ಹೋದರೆ ಮಾತ್ರ ಉದ್ಯೋಗಾವಕಾಶ ಹೆಚ್ಚಿತು. ಹೀಗೆ ಅಧಿಕ ಸಂಖ್ಯೆಯಲ್ಲಿ ದೇಶದ ಉದ್ಯಮಗಳು ಬೆಳೆಯ ಬೇಕಾದರೆ ಔದ್ಯಮಿಕ ಸಾಹಸಗಳಗೆ ಪ್ರೋತ್ಸಾಹಬೇಕು. ಅದಕ್ಕೆ

ಬೇಕಾಗುವ ಬಂಡವಾಳವನ್ನು ಜನರು ತೊಡಗಿಸಬೇಕಾದರೆ ಅವರು ಲಾಭದ ಆಸೆಯಿಂದಲೇ ಅದನ್ನು ತೊಡಗಿಸುತ್ತಾರೆಯೇ ಹೊರತು, ಪರೋಪಕಾರದ ದೃಷ್ಟಿಯಿಂದಲ್ಲ. – 2

ಆದರೆ ಭಾರತದಲ್ಲಿ ನಡೆಯುತ್ತಿರುವುದೇ ಬೇರೆ. ರಾಷ್ಟ್ರೀಕರಣದ ಹೆಸರಿನಲ್ಲಿ ಸರ್ಕಾರ ಕೆಲ ಉದ್ಯಮಗಳ ಮೇಲೆ ತಾನು ಸ್ವಾಮ್ಯವನ್ನು ಹೊಂದಿ, ಖಾಸಗಿ ವ್ಯಕ್ತಿಗಳಿಗೆ ಈ ಉದ್ಯಮ ಸ್ಥಾಪನೆಯ ಅವಕಾಶವನ್ನು ನಿರಾಕರಿಸಲಾಗಿದೆ. ಒಂದು ವೇಳೆ ಇತರೆ ಕ್ಷೇತ್ರದಲ್ಲಿ ಖಾಸಗಿಯವರು ಬಂಡವಾಳ ತೊಡಗಿಸಲು ಮುಂದೆ ಬಂದರೂ ಸಹ ಅವರ ಮೇಲೆ ವಿಪರೀತ ನಿಯಂತ್ರಣ ಹೇರುವ ಪ್ರಯತ್ನವನ್ನು ಸರ್ಕಾರ ಬಹಳ ಹಿಂದಿನಿಂದಲೂ ಮಾಡುತ್ತಲೇ ಬಂದಿದೆ.

ಜಾಗತೀಕರಣದ ಇಂದಿನ ದಿನಗಳಲ್ಲೂ ಸಹ ಸರ್ಕಾರ ಒಂದು ರೀತಿಯ ದ್ವಂದ್ವ ನೀತಿಯನ್ನೇ ಪಾಲಿಸಿಕೊಂಡು ಬರುತ್ತಿದೆ. ಆದ್ದರಿಂದ ನಾವು ನಿರೀಕ್ಷಿಸಿದ ಪ್ರಮಾಣದಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡಲು ನಾವು ವಿಫಲರಾಗಿದ್ದೇವೆ.

ಕಾರಂತರು ತಮ್ಮ ಲೇಖನವಾದ 'ನಿರುದ್ಯೋಗ ನಿವಾರಣೆ'ಯಲ್ಲಿ ನಿರುದ್ಯೋಗವು ಸರ್ವಕಾಲೀನವಾದದ್ದು. ವೇದ ಉಪನಿಷತ್ತುಗಳ ಕಾಲದಿಂದ ಪ್ರಸ್ತುತ ಕಾಲದವರೆಗೂ ಈ ಸಮಸ್ಯೆ ಇದೆ. ಆದರೆ ಹಿಂದೆ ನಿರುದ್ಯೋಗ ಸಮಸ್ಯೆಯನ್ನು ಯಾರೂ ಪ್ರಸ್ತಾಪಿಸುತ್ತಿರಲಿಲ್ಲ. ಆದರೆ ಈಗ ಸ್ವಾತಂತ್ರ್ಯಾ- ನಂತರ ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಹಮ್ಮಿಕೊಂಡ ನಂತರದಲ್ಲಿ, ರಾಜಕಾರಣಿಗಳು ರಾಜಕೀಯ ಕಾರಣಕ್ಕಾದರೂ ಈ ಪ್ರಶ್ನೆಯನ್ನು ಎತ್ತಿಕೊಂಡು ಅಂಕಿ ಸಂಖ್ಯೆಗಳನ್ನು ನೀಡುತ್ತಿದ್ದಾರೆ. ಆದ್ದರಿಂದ ನಿರುದ್ಯೋಗವೆಂಬ ಸಮಸ್ಯೆ ಎಲ್ಲ ಜನರಿಗೂ ಗೋಚರಿಸುವ ಸಮಸ್ಯೆಯಾಗಿದೆ ಎನ್ನುತ್ತಾರೆ.

ಉದ್ಯಮ ಕ್ಷೇತ್ರದಲ್ಲಿನ ಮುಷ್ಕರಗಳಿಂದಾಗಿ ನಾವು ಸಾಕಷ್ಟು ಹಾನಿಯನ್ನು ಅನುಭವಿಸುತ್ತಿದ್ದೇವೆ. ಯಾವುದೇ ಒಂದು ಉದ್ಯಮಕ್ಕೆ ನಷ್ಟವಾದರೂ, ಲಾಭವೇ ಆದರೂ ಮುನ್ನಡೆಸಲೇಬೇಕು ಎಂಬ ಸ್ಥಿತಿ ಸೃಷ್ಟಿಯಾಗಿದೆ. ಕಾರ್ಮಿಕ ವರ್ಗ ತಮ್ಮ ಸಂಬಳ-ಸಾರಿಗೆ ಇತ್ಯಾದಿಗಳ ಬಗ್ಗೆ ಮಾತ್ರ ಯೋಚಿಸುತ್ತಾ ಇರುತ್ತದೆ. ಇದರಿಂದ ನಾವು ಸಂಕಷ್ಟವನ್ನು ಅನುಭವಿಸುವಂತಾಗಿದೆ.

ನಿರುದ್ಯೋಗ ಸಮಸ್ಯೆಯ ನಿವಾರಣೆಯನ್ನು ಕಾರಂತರು ಸಾಕಷ್ಟು ಮಾರ್ಮಿಕವಾಗಿ, ಹಾಸ್ಯ ಭರಿತವಾಗಿ ವಿವರಿಸಿದ್ದಾರೆ. "ಈ ಸಮಸ್ಯೆಯ ನಿವಾರಣೆಗೆ ನನಗೆ ಕಾಣಿಸುವ ಮುಖ್ಯ ಉಪಾಯ ವೆಂದರೆ – ಶ್ರಮ ವಿಭಾಗ, ಶ್ರಮವನ್ನು ಚೆನ್ನಾಗಿ ವಿಭಾಗಿಸಿದರೆ, ಪ್ರಾಥಮಿಕ ಗಣಿತದಿಂದಲೇ ನಮ್ಮಲ್ಲಿರುವ ಎಲ್ಲಾ ಜನಗಳಿಗೂ ಉದ್ಯೋಗ ದೊರಕಿಸಬಹುದೆಂದು ನನ್ನ ತೀರ್ಮಾನ. ಜನಗಳಲ್ಲಿ ರಾಜಕೀಯ ಹುಚ್ಚನ್ನು ಚೆನ್ನಾಗಿ ಬೆಳೆಸಿದರೆ, ನನ್ನ ಅಭಿಪ್ರಾಯದಲ್ಲಿ

2. ಡಾ||ಕೆ. ಶಿವರಾಮ ಕಾರಂತ-ಉದ್ಯೋಗ ಕಲ್ಪಿಸಲು-ನವಯುಗ-ಸುವರ್ಣೋತ್ಸವ ಸಂಚಿಕೆ, 1972.

ಕನಿಷ್ಟ ಈ ದೇಶ ಸೇವೆಯ ಕೆಲಸದಲ್ಲಿ ಒಂದು ಮೂರನೆ– ಯಷ್ಟು ಜನಸಂಖ್ಯೆಯನ್ನು ನಾವು ಹೀರಬಹುದು. ಹದಿನೆರಡು ವರ್ಷ ಪ್ರಾಯದ ಒಳಗಿನ ಯಾವತ್ತೂ ಮಕ್ಕಳನ್ನು ಗುಂಪುವಾರು ವಿಭಾಗಿಸಿ, ಬೆಳಗ್ಗೆ ಮತ್ತು ಸಂಜೆ ಎರಡು ಗಂಟೆಗಳ ಕಾಲ ಪ್ರಭಾತ್ ಫೇರಿ ಮಾಡುವ ಕೆಲಸಕ್ಕೆ ಸರ್ಕಾರ ವ್ಯವಸ್ಥೆ ಮಾಡತಕ್ಕದ್ದು".

"ಹದಿನೆರಡು ವರ್ಷದಿಂದ, ಇಪ್ಪತ್ತನಾಲ್ಕು ವರ್ಷದ ಯಾವತ್ತು ತರುಣರ ಆರೋಗ್ಯವನ್ನು ಕಾಯುವ ಅವಶ್ಯಕತೆ ಇರುವುದರಿಂದ ಅವರಿಗೆ ಶ್ರಮದಾಯಕವಾದ ಕೆಲಸವನ್ನು ಕೊಡದೆ ಸದಾ ಪ್ರಬಲವಾದ ಯಾವುದೇ ರಾಜಕೀಯ ಪಂಗಡ ಅಥವಾ ಅಧಿಕಾರದಲ್ಲಿರುವ ರಾಜಕೀಯ ಪಂಗಡದ ಸ್ಲೋಗನ್ ಕೂಗುವುದಕ್ಕೆ ಕಲಿಸಿಕೊಟ್ಟು – ಸಾರ್ವಜನಿಕ ಪೆರೇಡ್, ಮುಷ್ಕರ, ಬಾಯ್ ಕಾಟ್ ಮುಂತಾದ ಕ್ರಾಂತಿಕಾರಕ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಬೇಕು. ಹೀಗಾಗಿ 'ಕಾರ್ಮಿಕರಿಗೆ ಜಯವಾಗಲಿ' 'ಮಹಾತ್ಮಾ ಗಾಂಧೀ ಕೀ ಜೈ' ಮೊದಲಾದ ಕೂಗುಗಳನ್ನು ಈ ಯೂನಿಯನ್ ಸಂಸ್ಥೆಗಳಲ್ಲದೆ ಇತರರು ಕೂಗಕೂಡದೆಂದು ಶಾಸನ ಮಾಡಬೇಕು. ಯಾವತ್ತು ಮುಷ್ಕರ ಮೊದಲಾದ ಕಾಲಗಳಲ್ಲಿ ಬೈ–ಪ್ರಾಕ್ಸಿ ಸಂಪು ಹೂಡುವುದಕ್ಕೆ ಇವರನ್ನೆ ಕಳುಹಿಸಿಕೊಡಬೇಕು. ಇದರಿಂದ ಕಾರ್ಮಿಕರು, ಮಜ್ದೂರರು ಇತ್ಯಾದಿ ಜನಗಳ ಶ್ರಮ, ಗಂಟಲು, ಬುದ್ಧಿ ಇವುಗಳ ಉಳಿತಾಯವಾಗುತ್ತದೆ".

ಕಾರಂತರು ಹೀಗೆ ಮುಂದುವರಿದು ಇಪ್ಪತ್ತನಾಲ್ಕರಿಂದ ಐವತ್ತರ ಒಳಗಣ ಮಿತಿಯ ಯೌವನಸ್ಥರನ್ನು ನಾವು ಕಡ್ಡಾಯವಾಗಿ ರಾಜಕೀಯ ಮುಖಂಡರಾಗಿಯೂ, ಉಪನ್ಯಾಸಕರಾಗಿಯೂ ತರಬೇತು ಮಾಡಿ, ವೇತನದ ಮೇಲೆ ಸರ್ಕಾರ ನೇಮಿಸಿಕೊಳ್ಳಬೇಕು. ಈ ಬಗೆಯಿಂದ ನಾವು ಜನಾಂಗವನ್ನು ಸಿದ್ಧ ಮಾಡಿದಲ್ಲಿ ಪ್ರಪಂಚದಲ್ಲಿಯೇ ರಾಜಕೀಯದಲ್ಲಿ ಭಾರತ ಸ್ಪರ್ಧಿಸಬಹುದು ಎಂದಿದ್ದಾರೆ.

ಈ ಸಲಹೆಯ ಹಿಂದೆ ನಾವು ಕಾಣುವ ಪ್ರಮುಖವಾದ ಅಂಶ ಶ್ರಮವಿಭಜನೆಯ ಪರಿಕಲ್ಪನೆ. ಅರ್ಥಶಾಸ್ತ್ರದಲ್ಲಿ ಶ್ರಮ ವಿಭಜನೆಯ ಕಲ್ಪನೆಯನ್ನು ಪರಿಚಯಿಸಿದವರು 'ಆಡಂ ಸ್ಮಿತ್'. ಈತನ ಪ್ರಕಾರ ಶ್ರಮ ವಿಭಜನೆ ಎಂದರೆ "ಯಾರು ಯಾವ ಕೆಲಸದಲ್ಲಿ ಪರಿಣತಿಯನ್ನು ಹೊಂದಿರುತ್ತಾರೋ ಆ ಕೆಲಸದಲ್ಲಿ ಆ ವ್ಯಕ್ತಿಗಳು ಅಥವಾ ಕಾರ್ಮಿಕ ವರ್ಗ ದುಡಿಯುವಂತೆ ಮಾಡುವುದಾಗಿದೆ". (Wealth of Nations)

ಅಂದರೆ ನಿರ್ಧಿಷ್ಟ ವರ್ಗದ ಕಾರ್ಮಿಕರಿಗೆ ಸೂಕ್ತ ತರಬೇತಿಯನ್ನು ಒದಗಿಸುವುದರಿಂದ ಆ ವರ್ಗ ಆ ಚಟುವಟಿಕೆಯನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಇದರಿಂದ ಉತ್ಪಾದಕತೆಯು ಅಧಿಕವಾಗುವ ಮೂಲಕ ಒಟ್ಟು ಉತ್ಪಾದನೆಯು ಅಧಿಕವಾಗುತ್ತದೆ ಎಂಬುದು 'ಆಡಂಸ್ಮಿತ್' ರವರ ಅಭಿಪ್ರಾಯ.

ಕಾರಂತರು ತಾವು ಪ್ರಸ್ತಾಪಿಸಿದ ಶ್ರಮ ವಿಭಾಗದಲ್ಲಿ ಕೊನೆಯ ವಿಭಾಗದಲ್ಲಿ ಬಹುಮಟ್ಟಿನ ಪಂಗಡಗಳ ರಾಜಕೀಯ ಮುಖಂಡರು ಆಕ್ಷೇಪಿಸಬಹುದು ಎಂದಿದ್ದಾರೆ. ಕಾರಂತರ ಈ ಲೇಖನದ ಬರವಣಿಗೆಯ ಕಾಲದಲ್ಲಿ ಮನುಷ್ಯನ ಜೀವಿತಾವಧಿ ಕೇವಲ 25 ವರ್ಷ ಮಾತ್ರ ಇತ್ತು (ಈಗ 63.4 ವರ್ಷಗಳು) ಇಂತಹಾ ಸನ್ನಿವೇಶದಲ್ಲಿ 50 ವರ್ಷಕ್ಕಿಂತ ಮೇಲ್ಪಟ್ಟು ದುಡಿಯುವುದು ಅನ್ಯಾಯ. ಹಾಗೆ ದುಡಿಯುವವರು ಇನ್ನೊಬ್ಬರ ಅನ್ನ ಕಸಿಯುತ್ತಾರೆಂದು ಲೆಕ್ಕ. ಪಿಂಚಣಿ ಪ್ರಾಪ್ತಿಯ ವಯಸ್ಸನ್ನು ನಾವು ಐವತ್ತಕ್ಕೆ ಇಳಸಬೇಕು. ಅದರ ಮೇಲೆ ಪ್ರಾಯ ಸಂದವರು ಒಬ್ಬನೇ ಒಬ್ಬ ಪಾರ್ಲಿಮೆಂಟ್ ಸದಸ್ಯನಾಗಲೀ, ಸಾರ್ವಜನಿಕ ಮುಖಂಡರಾಗಲೀ ನಾವು ಇರಿಸಿಕೊಳ್ಳಕೂಡದು. ಆಗ ದೇಶದಲ್ಲಿ ಕೇವಲ ಬಿಸಿರಕ್ತದ ಯುವಕರು ಮಾತ್ರ ತುಂಬಿಕೊಂಡಿರುತ್ತಾರೆ. ಅರಳು-ಮರಳು ಮುದುಕರ ರಾಜ್ಯಭಾರಕ್ಕೆ ನಾವು ತಲೆಬಾಗಬೇಕಾಗಿಲ್ಲ. ಇಂತಹಾ ನಿವೃತ್ತರಾದವರಿಗೆ ವಾನಪ್ರಸ್ತಾಶ್ರಮಕ್ಕೆ ಕಳುಹಿಸಬೇಕು. ಅಂದರೆ ರಾಜಕೀಯ ಅಥವಾ ಆಡಳತ ವ್ಯವಸ್ಥೆಯಿಂದ ದೂರವಿಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ನಿರುದ್ಯೋಗ ಮತ್ತು ಕೆಲಸದ ಅವಧಿ

ನಿರುದ್ಯೋಗ ಸಮಸ್ಯೆಯ ನಿರ್ವಹಣೆಯಲ್ಲಿ ಕೆಲಸದ ಅವಧಿಯ ಪಾತ್ರವು ಬಹಳ ಮುಖ್ಯವಾಗುತ್ತದೆ. ಒಟ್ಟು ಕಾರ್ಮಿಕ ವರ್ಗದಲ್ಲಿ ಅರ್ಧ ಭಾಗವಾದರೂ ಸ್ತ್ರೀಯರಿರುತ್ತಾರೆ. ಸ್ತ್ರೀ ಕಾರ್ಮಿಕರ ಸಮಸ್ಯೆಗಳು ಪುರುಷ ಕಾರ್ಮಿಕರ ಸಮಸ್ಯೆಗಿಂತ ಭಿನ್ನವಾಗಿದೆ. ತಾಯ್ತನದ ಜವಾಬ್ದಾರಿ ಯಿಂದಾಗಿ ಸ್ತ್ರೀಯರು ಆರ್ಥಿಕ ಚಟುವಟಿಕೆಯಲ್ಲೂ ಸಕ್ರಿಯವಾಗಿ ತೊಡಗಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಪೂರ್ವ ಬಾಣಂತಿತನ ಹಾಗೂ ಅಪರ ಬಾಣಂತಿತನದ ರಜೆ ಆರು ತಿಂಗಳು ಅವರಿಗೆ ಕಡ್ಡಾಯವಾಗಿ ಸಲ್ಲಲೇ ಬೇಕಾಗುತ್ತದೆ. ಇನ್ನು ಉಳದ ಕಾರ್ಮಿಕ ವರ್ಗಕ್ಕೆ ವಿಭಿನ್ನ ರೀತಿಯ ರಜೆಯನ್ನು ನೀಡ ಬೇಕಾಗುತ್ತದೆ.

ಕಾರ್ಮಿಕ ವರ್ಗ ವಾರಕ್ಕೆ ಎಷ್ಟು ಗಂಟೆಗಳ ಕಾಲ ಕೆಲಸ ಮಾಡಬೇಕೆಂಬ ಅಭಿಪ್ರಾಯ ದಲ್ಲಿ ಸಾಕಷ್ಟು ಬಿನ್ನಾಭಿಪ್ರಾಯಗಳವೆ. ಬಂಡವಾಳಶಾಹಿಗಳು ವಾರಕ್ಕೆ 48 ತಾಸಿನ ತನಕ ಎಂದರೆ ದಿನಕ್ಕೆ ಎಂಟು ಗಂಟೆಗಳ ಕಾಲಬ್ಯಾಂಕುಗಳ ದೃಷ್ಟಿಯಲ್ಲಿ ದಿನಕ್ಕೆ ನಾಲ್ಕೂವರೆ ತಾಸು ದುಡಿದರೆ ಸಾಕೆಂದು ತೀರ್ಮಾನವಾಗಿದೆ. ಶಾಲೆ-ಕಾಲೇಜುಗಳಲ್ಲಿ ಮೂರು ಗಂಟೆ ದುಡಿಮೆ, ಅಂದರೆ ದಿನಕ್ಕೆ ನಾಲ್ಕು ಗಂಟೆಗಿಂತಲೂ ಹೆಚ್ಚಿನ ಶ್ರಮವನ್ನು ಯಾರೂ ಮಾಡಕೂಡದು, ಮಾಡಿಸಕೂಡದು. ಹಾಗೆ ದುಡಿದಲ್ಲಿ ಇಮ್ಮಡಿ ಜನತೆಗೆ ಉದ್ಯೋಗ ದೊರಕಿಸಬಹುದೆಂದು ಕಾರಂತರು ಹೇಳುತ್ತಾರೆ. ಆದರೆ ಕಾರಂತರ ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದು ಕಷ್ಟ. ಏಕೆಂದರೆ ಕೆಲಸದ ಅವಧಿಯು, ಕೆಲಸದ ಸ್ವಭಾವ, ಸ್ಥಿತಿಗತಿ, ವಾತಾವರಣ ಮುಂತಾದ ಅಂಶಗಳಂದ ಪ್ರಭಾವಕ್ಕೆ ಒಳಗಾಗುತ್ತದೆ.

ಕೇವಲ ಕೆಲಸದ ಅವಧಿಯನ್ನು ಕಡಿಮೆ ಮಾಡಿ ಉದ್ಯೋಗ ಸೃಷ್ಟಿ ಸಾಧ್ಯವಿಲ್ಲದಿದ್ದರೂ ಅಗತ್ಯವಿರುವ ಕಡೆ ಮಾತ್ರ ಕೆಲಸದ ಅವಧಿಯನ್ನು ನಿಗದಿಪಡಿಸಲು ಸಾಧ್ಯ. ಐಟಿ, ಬಿಟಿಯ ಇಂದಿನ ಕಾಲದಲ್ಲಿ ಕಾರಂತರ ಈ ಹೇಳಕೆ ಅಪ್ರಸ್ತುತವೆನಿಸಲಾರವು.

ಭಾರತ ಕೃಷಿ ಪ್ರಧಾನವಾದದ್ದು, ಸಾಕಷ್ಟು ಜನರಿಗೆ ಈ ಕ್ಷೇತ್ರ ಉದ್ಯೋಗವನ್ನು ಸೃಷ್ಟಿಸಿದೆ. ಇತ್ತೀಚಿನ ದಿನಗಳಲ್ಲಿ ಜಪಾನ್ ದೇಶ ಕೃಷಿ ಕ್ಷೇತ್ರದಲ್ಲಿ ಸುಧಾರಣೆ ತರುವಂತಹ ಪ್ರಯತ್ನಗಳು ಫಲಕಾರಿಯಾಗಿದೆ. ಉದಾಹರಣೆಗೆ ಮಡಗಾಸ್ಕರ್ ಪದ್ಧತಿಯಲ್ಲಿ ಭತ್ತ ಬೆಳೆಯುವುದು. ಈ ವಿಧಾನ ನಮಗೆ ತಿಳಿದಿದ್ದರೂ ಸಹ ನಾವು ಅವುಗಳನ್ನು ಅನುಸರಿಸುತ್ತಿಲ್ಲ. ಕಾರಣ ಅವು ನಮ್ಮಲ್ಲಿ ನಿರುದ್ಯೋಗಿ ಗಳನ್ನು ಹೆಚ್ಚಿಸುತ್ತದೆ ಎಂಬ ರಾಜಕೀಯ ಪಂಗಡದವರ ವಾದ. ಆದರೆ ಇಂತಹ ವಾದಗಳಿಂದ ನಮ್ಮ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ.

ಭಾರತದ ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾದರೆ ಮಾತ್ರ ಬಡತನ ನಿರುದ್ಯೋಗ ಗಳಂತಹ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದು. ರಾಜಕೀಯದಲ್ಲಿ ಬೇರೆಯವರಿಗೆ ಉಪದೇಶ ಮಾಡುವರೇ ಹೊರತು ತಾವು ಅನುಸರಿಸುವುದಿಲ್ಲ. ಬಡವರಿಗೆ ತಮ್ಮ ಕಿಸೆಯಿಂದ ಒಂದು ಕಾಸು ದಾನ ಮಾಡದಿದ್ದರೂ ಕೂಡ ಬಡವರ ಕ್ಷೇಮ ಚಿಂತನೆ ಮಾಡುವುದಾಗಿ ಹೇಳುತ್ತಾರೆ. ನಮ್ಮ ದೇಶವು ರಾಜಕೀಯ ಕ್ಷೇತ್ರದಲ್ಲಿ ಪ್ರಜ್ಞಾವಂತರನ್ನೂ ವಿದ್ಯಾವಂತರನ್ನೂ ಹೊಂದಿದಾಗ ಮಾತ್ರ ಈ ಎಲ್ಲಾ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಲಭಿಸಬಹುದು.

ಅಧ್ಯಾಯ 7

ಆರ್ಥಿಕಾಭಿವೃದ್ಧಿಯಲ್ಲಿ ಸೇವಾವಲಯದ ಪಾತ್ರ

ಮಾನವನು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. 1. ಪ್ರಾಥಮಿಕ ವಲಯ, 2. ದ್ವಿತೀಯ ವಲಯ, 3. ತೃತೀಯ ವಲಯ ಎಂಬುದಾಗಿದೆ.

ಪ್ರಾಥಮಿಕ ವಲಯದಲ್ಲಿ ಕೃಷಿ, ಪಶು ಸಂಗೋಪನೆ, ಕೋಳಿ ಸಾಕಾಣಿಕೆಯಂಥಹ ಚಟುವಟಿಕೆ ಗಳು ಸೇರಿದರೆ, ದ್ವಿತೀಯ ವಲಯದಲ್ಲಿ ಕೈಗಾರಿಕೆ, ಗಣಿಗಾರಿಕೆ ಹಾಗೂ ಸೇವಾಕ್ಷೇತ್ರವೆಂದೇ ಪರಿಗಣಿತ ವಾಗಿರುವ ತೃತೀಯ ವಲಯದಲ್ಲಿ ಸಾರಿಗೆ, ಸಂಪರ್ಕ, ವ್ಯಾಪಾರ, ವಾಣಿಜ್ಯ, ಹೋಟೆಲ್ ಉದ್ಯಮ, ವಿಮಾ ಸಂಸ್ಥೆಗಳು ಮುಂತಾದ ಆರ್ಥಿಕ ಚಟುವಟಿಕೆಗಳು ಸೇರುತ್ತವೆ.

ಸೇವಾವಲಯವೆಂದರೆ ಯಾವುದೇ ಆರ್ಥಿಕ ಚಟುವಟಿಕೆಯಿಂದ ನೇರವಾಗಿ ಸರಕುಗಳು ಉತ್ಪಾದನೆಯಾಗದೇ ಜನರ ಬಯಕೆಯ ತೃಪ್ತಿಗೆ ಅನುಸಾರವಾಗಿ ಸೇವೆಗಳು ದೊರೆಯಲ್ಪಡುತ್ತವೆ. ಉದಾಹರಣೆಗೆ – ಸಾರಿಗೆ ವ್ಯವಸ್ಥೆಯಿಂದ ಯಾವ ಸರಕೂ ಉತ್ಪಾದನೆಯಾಗುವುದಿಲ್ಲ. ಬದಲಾಗಿ ಜನರಿಗೆ ಸೇವೆ ಲಭ್ಯವಾಗುತ್ತದೆ. ವ್ಯಾಪಾರ ವಾಣಿಜ್ಯದಂತಹ ಚಟುವಟಿಕೆಯಲ್ಲಿ ಯಾವ ಸರಕುಗಳೂ ಉತ್ಪಾದನೆ ಯಾಗದೇ ಅವು ವಿನಿಮಯವಾಗಲ್ಪಡುತ್ತದೆ. ಅದರಂತೆ ಹೋಟೆಲ್ ಉದ್ಯಮವು ಸಹ ಸೇವಾ ಕ್ಷೇತ್ರಕ್ಕೆ ಸೇರಿದ ಆರ್ಥಿಕ ಚಟುವಟಿಕೆಯಾಗಿದೆ.

ಹೋಟೆಲ್ ಉದ್ಯಮ ಬೆಳೆದು ಬಂದ ಇತಿಹಾಸ

ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ಪ್ರಪಂಚದ ವಿಭಿನ್ನ ಭಾಗದಲ್ಲಿ ನಗರಗಳ ಬೆಳವಣಿಗೆ ಸಾಧ್ಯವಾಯಿತು. ಯಾವ ಯಾವ ಪ್ರದೇಶದಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುತ್ತವೆಯೋ ಅಲ್ಲಿ ಜನಸಂಖ್ಯೆ ಕೇಂದ್ರೀಕೃತವಾಗಲು ಪ್ರಾರಂಭಿಸಿ, ನಗರಗಳ ನಿರ್ಮಾಣ ಪ್ರಾರಂಭವಾಯಿತು. ನಗರೀಕರಣ ಕೈಗಾರಿಕಾ ಕ್ರಾಂತಿಯ ಫಲವೆಂದು ಭಾವಿಸಲಾಗಿದೆ. ನಗರೀಕರಣ ಜನತೆಯ ಜೀವನದ ವಿಧಾನದಲ್ಲಿ ಬದಲಾವಣೆಗೆ ಕಾರಣವಾಯಿತು. ವ್ಯವಸಾಯವನ್ನು ಜೀವನದ ಮಾರ್ಗವಾಗಿ ಅನುಸರಿಸುತ್ತಿದ್ದ ಜನತೆ ಕೈಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಕಾರಣದಿಂದ ಪಟ್ಟಣಗಳಿಗೆ ವಲಸೆ ಹೋದರು. ಈ ಬದಲಾವಣೆ ಮಾನವರಲ್ಲಿ ಹೊಸಹೊಸ

ಅವಶ್ಯಕತೆಗಳನ್ನು ಹುಟ್ಟುಹಾಕಿತು. ಇಂತಹ ಒಂದು ಅವಶ್ಯಕತೆ ಹೋಟೆಲ್ ಉದ್ಯಮದ ಬೆಳವಣಿಗೆ. ಹೋಟೆಲ್ ಉದ್ಯಮ ಪ್ರಾರಂಭವಾದಾಗ ಅದನ್ನು ಉದ್ಯಮವೆಂದು ಯಾರೂ ಸಹ ಪರಿಗಣಿಸಿರಲಿಲ್ಲ. ಆದರೆ ಇಂದು ಅದು ಪ್ರಮುಖ ಉದ್ಯಮವಾಗಿ ಲಕ್ಷಾಂತರ ಮಂದಿಗೆ ಉದ್ಯೋಗವನ್ನು ನೀಡುತ್ತಿದೆ. ಸಾವಿರಾರು ಕೋಟಿ ರೂ.ಗಳ ಬಂಡವಾಳವನ್ನು ತೊಡಗಿಸಿರುವ ಒಂದು ಉದ್ಯಮವಾಗಿದೆ.

ಯಾವುದೇ ದೇಶದ ನಾಗರೀಕರಿಗೆ ಮತ್ತು ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಆಹಾರ ಪೂರೈಕೆಯ ಸಮಸ್ಯೆ ಸರ್ವಕಾಲಿಕವಾಗಿದೆ. ಜಾಗತಿಕರಣದ ಕಾರಣದಿಂದ, ವಿಶ್ವಗ್ರಾಮ ಕಲ್ಪನೆ– ಯಂಥಹ ಪರಿಕಲ್ಪನೆ ಹುಟ್ಟಿಕೊಂಡಿದೆ. ಇದರಿಂದ ವ್ಯಾಪಾರ ವ್ಯವಹಾರಗಳಿಗೂ, ವಿನೋದಕ್ಕೋ, ವಿಹಾರಕ್ಕೋ ದೇಶದಿಂದ ದೇಶಕ್ಕೆ ಬಂದು ಹೋಗುವವರಿಗೆ ವಸತಿ ಸೌಕರ್ಯ ಎಷ್ಟು ಕಷ್ಟವೋ, ಕಾಲಕಾಲಕ್ಕೆ ರುಚಿಯಾದ ಊಟ, ಪಾನೀಯ ಮತ್ತು ಉಪಾಹಾರಗಳನ್ನು ಒದಗಿಸುವುದು ಕೂಡಾ ಅಷ್ಟೇ ಕಷ್ಟದ ಸಂಗತಿಯಾಗಿದೆ.

ಇಂದು ನಗರಗಳಿಗೆ ಬಂದು ಹೋಗುವವರೆಲ್ಲರೂ, ತಮ್ಮ ಊಟ, ಉಪಹಾರಗಳಿಗೆ ಅನುಕೂಲ ವಾದ ಹೋಟೆಲ್‌ಗಳನ್ನು ಆಶ್ರಯಿಸಬೇಕಾಗುತ್ತದೆ. ಇವುಗಳ ಮುಖ್ಯ ಉದ್ದೇಶ ಬಂದವರಿಗೆ ವಸತಿಯನ್ನು ಪೂರೈಸುವುದು. ಅದು ಸಾಧ್ಯವಿಲ್ಲದಿದ್ದಾಗ ನಿಯತಕಾಲದಲ್ಲಿ ಅಥವಾ ಎಲ್ಲಾ ಸಮಯದಲ್ಲಿ ಆಗಂತುಕರಿಗೆ ಊಟ, ಉಪಹಾರಗಳನ್ನು ಒದಗಿಸುವ ಕೆಲಸ ಮಹತ್ವದ್ದು.

ಭಾರತದಲ್ಲೂ ಹೋಟೆಲ್ ಉದ್ಯಮ ಇಂದು ಬೃಹತ್ ಉದ್ಯಮವಾಗಿ ಬೆಳೆದಿದೆ. ಬ್ರಿಟೀಷರು ಭಾರತವನ್ನು ಬಿಟ್ಟು ಹೋದ ನಂತರದಲ್ಲಿ ನಮ್ಮ ಸರ್ಕಾರ ಕೈಗಾರಿಕಾ ಅಭಿವೃದ್ಧಿಗೆ ಸಾಕಷ್ಟು ಗಮನವನ್ನು ಕೇಂದ್ರೀಕರಿಸಿದ ಕಾರಣದಿಂದ ಕೈಗಾರಿಕೆಗಳ ಜೊತೆಗೆ ನಗರಗಳು ಬೆಳವಣಿಗೆಯಾಗಿವೆ. ನಗರಗಳಲ್ಲಿ ಜನತೆಯ ಅವಶ್ಯಕತೆಯನ್ನು ಈಡೇರಿಸಲು ಹೋಟೆಲ್‌ಗಳು ಎಲ್ಲಾ ಭಾಗದಲ್ಲಿ ತಲೆ ಎತ್ತಿದೆ. ಜೊತೆಗೆ ಸಾವಿರಾರು ಮಂದಿಗೆ ಉದ್ಯೋಗವನ್ನು ನೀಡುವ ಕ್ಷೇತ್ರವಾಗಿದೆ.

ಮೊದಲು ನಗರಗಳಿಗೆ ಸೀಮಿತವಾಗಿದ್ದ ಹೋಟೆಲ್ ಉದ್ಯಮ ಇಂದು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿದೆ. ಅವಿಭಕ್ತ ಕುಟುಂಬದ ಪತನ, ಸ್ತ್ರೀಯರ ಸ್ಥಾನಮಾನದಲ್ಲಿ ಸುಧಾರಣೆ, ಶಿಕ್ಷಣಕ್ಕೆ ಹೆಚ್ಚಿನ ಮನ್ನಣೆ ಸಿಕ್ಕಿರುವುದರಿಂದ ಗ್ರಾಮೀಣ ಭಾಗದಲ್ಲೂ ಹೋಟೆಲ್ ಗಳು ವಿಸ್ತಾರವಾಗಿ ಬೆಳೆಯುತ್ತಿದೆ. ಇಂದು ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಎಲ್ಲರೂ ಸಹ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವುದು ಅನಿವಾರ್ಯವಾದುದರಿಂದ ಈ ಉದ್ಯಮ ಇಂದು ವ್ಯಾಪಕವಾಗಿ ಬೆಳೆಯುತ್ತಿದೆ.ಪಾಶ್ಚಾತ್ಯರ ಉಪಹಾರ ಗೃಹ ಮತ್ತು ಭಾರತದಲ್ಲಿನ ಹೋಟೆಲ್ ಉದ್ಯಮಕ್ಕೂ ನಾವು ಸಾಕಷ್ಟು ಭಿನ್ನತೆಯನ್ನು ಕಾಣುತ್ತೇವೆ.

ಪಾಶ್ಚಾತ್ಯರಲ್ಲಿ ಬೆಳಗಿನ ಉಪಹಾರ ಬಲು ಮುಖ್ಯವೆನಿಸುತ್ತದೆ. ಹೆಚ್ಚಿನ ವಸತಿಗೃಹಗಳು ಅದನ್ನು ನಿಶ್ಚಿತ ವೇಳೆಗೆ ತಮ್ಮಲ್ಲಿ ಒದಗಿಸುತ್ತದೆ. ಉಳಿದ ಹೊತ್ತಿನ ಊಟಗಳನ್ನು,

ಉಪಹಾರಗಳನ್ನು ಬೇರೆ ಬೇರೆ ಉಪಹಾರ ಮಂದಿರಗಳು ಒದಗಿಸುತ್ತವೆ. ಆದರೆ ಪಾಶ್ಚಾತ್ಯರಲ್ಲಿ ಎಲ್ಲರಿಗೂ ಬೆಳಗಿನ ಉಪಾಹಾರ ಬೇಕೇ ಬೇಕು. ಒಂದೇ ನಗರದಲ್ಲಿ ನೆಲೆಸಿರುವ ನಾಗರೀಕರು ಕೂಡಾ ಸ್ವಂತ ಬಿಡಾರ ಹೂಡದಿರುವ ಪರಿಸ್ಥಿತಿಯಲ್ಲಿ ತಾವಿರುವ ಹೋಟೆಲ್ ಗಳಲ್ಲಿ ಬೆಳಗಿನ ಉಪಾಹಾರವನ್ನು ಮುಗಿಸಿ, ಅಲ್ಲಿಂದ ದುಡಿಯುವ ಸಂಸ್ಥೆಗೋ, ಕಾರ್ಖಾನೆಗೋ, ಇನ್ನೆಲ್ಲಿಗೋ ತೆರಳುತ್ತಾರೆ. ಅಸಂಖ್ಯಾತ ಒಂಟಿ ಜೀವಿಗಳು ಬೆಳಗಿನ ಉಪಹಾರಕ್ಕೆ ಉಪಹಾರಗೃಹಗಳನ್ನು ಆಶ್ರಯಿಸುವುದುಂಟು. ಇದು ಅವರ ನಿತ್ಯ ವಿಧಿ. ಅದನ್ನು ಮುಗಿಸದೆ ಯಾರೂ ತಮ್ಮ ಉದ್ಯೋಗ ಇಲ್ಲವೇ ವ್ಯವಹಾರವನ್ನು ನಡೆಸಲು ಅವಸರಿಸುವ ರೂಢಿ ಇಲ್ಲ. ಬೆಳಗಿನ ಉಪಹಾರ ಮಿತ ಪ್ರಮಾಣದ್ದೂ, ಪೌಷ್ಟಿಕ ರೂಪದ್ದೂ, ಅಷ್ಟೇ ಅಲ್ಲದೆ ಶುಚಿಯಾಗಿಯೂ, ಹಿತಕರವಾಗಿಯೂ ಇರಬೇಕಾದದ್ದು.

ಮಧ್ಯಾಹ್ನದ ಉಪಾಹಾರಕ್ಕೆ ಪಾಶ್ಚಾತ್ಯರು 'ಲಂಚ್' ಎಂದು ಕರೆಯುತ್ತಾರೆ. ಇದು ಭಾರತೀಯರ ಭರ್ಜರಿ ಊಟವಲ್ಲ. ಈ ಊಟದ ತರುವಾಯ ನಾಲ್ಕು ತಾಸು ದುಡಿಮೆ ಇರುವುದರಿಂದ ಹೊಟ್ಟೆಯ ಚೀಲ ತುಂಬಿಕೊಳ್ಳುವಂತಹ ಭರ್ಜರಿ ಊಟವನ್ನು ಪಾಶ್ಚಾತ್ಯರು ಮಾಡುವುದಿಲ್ಲ. ಭರ್ಜರಿ ಊಟವನ್ನು ಮಾಡಿದ ಮೇಲೆ ಹೊಟ್ಟೆ ಸಡಿಲಾಗದೆ ಒಂದೆರಡು ಗಂಟೆಗಳ ಕಾಲ ಜನರು ಮನಸ್ಸಿಟ್ಟು ಕೆಲಸ ಮಾಡಲಾರರು. ಆದರೆ ಇಂತಹಾ 'ಲಂಚ್' ಕಡಿಮೆ ಪ್ರಮಾಣದ್ದು, ಸತ್ವಯುತವೂ ಆಗಿರಬೇಕು. ಸ್ವತ: ಮನೆಯುಳ್ಳವರೂ ಸಹ ಅದನ್ನು ಪಡೆಯಲು ಉಪಾಹಾರ ಗೃಹಗಳನ್ನು ಆಶ್ರಯಿಸುವುದುಂಟು. ಇಲ್ಲವಾದರೆ ಸ್ಯಾಂಡ್‌ವಿಚ್ ನಂತಹ ಲಘು ಆಹಾರವನ್ನು ತಮ್ಮ ಜೊತೆಗೆ ಕಟ್ಟಿಕೊಂಡು, ಶಾಖರಕ್ಷಕ ಸೀಸೆಯಲ್ಲಿ ತಮಗಿಷ್ಟವಾದ ಯಾವುದೇ ಪಾನೀಯವನ್ನು ತುಂಬಿಸಿಕೊಂಡು ತಾವು ಕೆಲಸ ಮಾಡುವ ಕಚೇರಿಯಲ್ಲಿ ಅಥವಾ ಹೊರಗಡೆ ಕುಳಿತು ಆಹಾರ ಸೇವಿಸುತ್ತಾರೆ.

ಬೆಳಗಿನ ಲಗು ಉಪಹಾರ ಸೇವನೆಗೆ ಹೆಚ್ಚಿನ ಸಮಯವನ್ನು ಪಾಶ್ಚಾತ್ಯರು ತೆಗೆದುಕೊಳ್ಳುತ್ತಾರೆ. ಆದರೆ ಮಧ್ಯಾಹ್ನದ ಊಟ ಅವಸರದ್ದು. ದೊರೆತ ಅತ್ಯಲ್ಪ ಬಿಡುವಿನಲ್ಲಿಯೇ ಅದು ಮುಗಿಯಬೇಕು. ಅದು ನಾಲಿಗೆಯ ಸವಿಯನ್ನು ತೃಪ್ತಿಪಡಿಸದೇ ಹೋದರೂ ಹಸಿವನ್ನು ಹಿಂಗಿಸುವಂತಿರಬೇಕು. ಇಂಥಾ ಉಪಹಾರವನ್ನು ಒದಗಿಸುವಂತಹ ಹೋಟೆಲ್‌ಗಳು ತಮ್ಮ ಗಿರಾಕಿಗಳನ್ನು ಕಾಯಿಸದೇ ಶೀಘ್ರವಾಗಿ ಪೂರೈಸುವ ಕೆಲಸವನ್ನು ಮಾಡುತ್ತವೆ.

ಇನ್ನು ದಿನದ ಮೂರನೇ ಬಾರಿಗೆ ಆಹಾರ ಸೇವಿಸುವ ವೇಳೆಯೆಂದರೆ ರಾತ್ರಿ 8 ಗಂಟೆಯ ಸುಮಾರಿಗೆ. ಹೋಟೆಲ್‌ಗಳಲ್ಲಿ ಕುಳಿತು ಮಾಡುವ ವಿರಾಮಗತಿಯ ಭೋಜನ (ಡಿನ್ನರ್) ಅದು ಅಲ್ಪ ಉಪಹಾರವಲ್ಲ. ಭರ್ತಿ ಊಟ. ಅದಕ್ಕೆ ಕುಳಿತವರು ಆಹಾರ ಸೇವನೆಯನ್ನು ನಿಧಾನ ಗತಿಯಿಂದ ಮಾಡುತ್ತಾರೆ. ಊಟದ ಕಾಲಕ್ಕೆ ಮಾತುಕತೆ ಸಂಭಾಷಣೆ ಜರುಗುತ್ತದೆ. ಅದೇ ವೇಳೆಗೆ ಪಾಶ್ಚಾತ್ಯರು ವಿಧ ವಿಧವಾದ ಪಾನೀಯವನ್ನು ಸೇವಿಸುವುದುಂಟು. ಇದಾದ ಬಳಿಕ ಬೇರೆ ಏನೂ ಕೆಲಸ ಇಲ್ಲದಿರುವುದ ರಿಂದ ಊಟದ ಮನೆಗೆ ಬಂದ ಜನರು ಅಲ್ಲಿಂದ ಹೊರಟು ತಮ್ಮ ತಮ್ಮ ವಸತಿಗಳನ್ನು ಸೇರಿ ರಾತ್ರಿ ಕಳೆಯುತ್ತಾರೆ.

ಆದರೆ ಭಾರತೀಯರ ಆಹಾರ ಪದ್ಧತಿ ಇದಕ್ಕಿಂತ ಭಿನ್ನ, ನಮಗೆ ಅವಕಾಶ ಸಿಕ್ಕಾಗಲೆಲ್ಲಾ ತಿನ್ನುವ ಅಭ್ಯಾಸ. ಕೆಲಸದ ಅವಧಿಯಲ್ಲಿ ನಡುನಡುವೆ ತಿನ್ನುವ ಅಭ್ಯಾಸವನ್ನು ರೂಢಿಸಿಕೊಂಡಿದ್ದೇವೆ. ನಾವು ಕೆಲಸಕ್ಕಿಂತ ತಿನ್ನುವ ಕಡೆಗೇ ಹೆಚ್ಚಿನ ಗಮನವನ್ನು ನೀಡುತ್ತೇವೆ. ಭಾರತದ ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ಆಹಾರ ಪದ್ಧತಿಗಳಿದ್ದು ಅವುಗಳಲ್ಲಿ ಏಕರೂಪತೆ ಇಲ್ಲ. ಆದ್ದರಿಂದ ಉಪಹಾರಗೃಹ ಅಥವಾ ಹೋಟೆಲ್ ಗಳು ಪೂರೈಕೆ ಮಾಡುವ ಆಹಾರ ವಿಧಾನಗಳು ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ರೀತಿಯಲ್ಲಿದೆ. ಉದಾಹರಣೆಗೆ ಉತ್ತರ ಭಾರತದ ಆಹಾರ ಪದ್ಧತಿ ದಕ್ಷಿಣ ಭಾರತಕ್ಕಿಂತ ಭಿನ್ನವಾಗಿದೆ.

ಪಾಶ್ಚಾತ್ಯರಲ್ಲಿ ಮೂರು ರೀತಿಯ ಹಸಿವನ್ನು ಅಡಗಿಸುವ ವ್ಯವಸ್ಥೆಯನ್ನು ಕಿರು ಭೋಜನ, ಅರೆ ಭೋಜನ ಮತ್ತು ಹಿರಿ ಭೋಜನವೆಂದು ಕರೆಯುತ್ತಾರೆ. ಇವುಗಳನ್ನು ಪೂರೈಕೆ ಮಾಡುವ ಉಪಹಾರ ಗೃಹಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಅದೇ ನಗರದವರು, ಹೊರಗಿನಿಂದ ಬಂದವರು ಇದನ್ನೇ ನಂಬಿರುತ್ತಾರೆ. ಇಂಥ ಉಪಾಹಾರ ಗೃಹಗಳಲ್ಲಿ ಗಿರಾಕಿಗಳು ಖಾಲಿ ಇರುವ ಆಸನಗಳನ್ನು ಹುಡುಕಿಕೊಂಡು ಅವುಗಳಿದ್ದರೆ ಮಾತ್ರ ಪ್ರವೇಶಿಸುತ್ತಾರೆ. ನೀವು ಕುಳಿತಲ್ಲಿಗೆ ನಿಮ್ಮ ಅಪೇಕ್ಷೆಯ ತಿಂಡಿತಿನಿಸುಗಳನ್ನು ನಿತ್ಯ ಸಂಗ್ರಹದಿಂದಲೋ, ಇಲ್ಲವೇ ತಕ್ಷಣ ತಯಾರಿಕೆ ಇಂದಲೋ ಒದಗಿಸುವ ಸೇವಕರಿರುತ್ತಾರೆ. ಇಂಥಲ್ಲೆಲ್ಲಾ ಬಡಿಸುವ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ಇರಬೇಕಾಗುತ್ತದೆ. ಗಿರಾಕಿಗಳು ಕುಳಿತ ಮೂರ್ನಾಲ್ಕು ಮೇಜುಗಳಿಗೆ ಒಬ್ಬೊಬ್ಬ ಸೇವಕನಿರುತ್ತಾನೆ.

ಬೆಳಗಿನ ಉಪಾಹಾರಕ್ಕೆ ಅನುಕೂಲವಾದ ಉಪಹಾರಗೃಹಗಳು ನಗರದ ಜನವಸತಿ ಪ್ರದೇಶಗಳಿಗೆ ಸಮೀಪವಾಗಿರಬೇಕು. ರಾತ್ರಿಯ ಭೋಜನವನ್ನೊದಗಿಸುವ ಹೋಟೆಲ್‌ಗಳು ಅಥವಾ ಉಪಹಾರ ಮಂದಿರ ಗಳು ಸದ್ದುಗದ್ದಲವಿಲ್ಲದ ವಿಶ್ರಾಂತ ಸ್ಥಳದಲ್ಲಿರಬೇಕು. ರಾತ್ರಿ ಎಷ್ಟೇ ಹೊತ್ತಾದರೂ ಊಟ ಮುಗಿಸಿ ತಮ್ಮ ತಮ್ಮ ವಸತಿಗಳನ್ನು ಸೇರಲು ಅನುಕೂಲವಾದ ಸ್ಥಳದಲ್ಲಿ ಮತ್ತು ಸಾರಿಗೆ ಸಂಪರ್ಕ ಧಾರಾಳವಾಗಿ ಇರುವಲ್ಲಿ ಇರಬೇಕು. ರಾತ್ರಿಯ ಭೋಜನವನ್ನು ಕೊಡತಕ್ಕ ಮಂದಿರಗಳು ಖಾತ್ರಿ ಸ್ಥಳಗಳಾಗಿರಬೇಕು. ಅಲ್ಲಿಗೆ ಹೋದರೆ ಆಹಾರವೂ ದೊರೆಯುತ್ತದೆ. ವಿಶ್ರಾಂತಿಯೂ ಸಿಗುತ್ತದೆ ಎಂಬ ಭರವಸೆ ನೀಡುವ ಮಂದಿರಗಳಾಗಿರಬೇಕು. ಈ ಹೋಟೆಲ್‌ಗಳಲ್ಲಿ ಮೊದಲೇ ತಿಳಿಸಿ ತಮಗಾಗಿ ಸ್ಥಳವನ್ನು ಕಾಯ್ದಿರಿಸಿ ಹೋಗುವುದು ರೂಢಿ. ಇಂಥ ಭೋಜನ ಶಾಲೆಯನ್ನು ನಡೆಸುವವರು ಬಯಸಿ ಬಂದವರಿಗೆಲ್ಲಾ ಆಹಾರ ಒದಗಿಸಲಾರರು. ತಮ್ಮಲ್ಲಿರುವ ಆಸನ ಸೌಕರ್ಯ ಗಿರಾಕಿಗಳು ಬರುವ ಸಮಯ ಯಾವುದೆಂದು ಮುಂಚಿತವಾಗಿ ತಿಳಿದು ವ್ಯವಸ್ಥೆ ಮಾಡಿಕೊಳ್ಳಬೇಕು. ಸ್ಥಳಗಳು ಚೊಕ್ಕವಾಗಿರಬೇಕು, ವಾತಾವರಣವೂ ಸಾಕಷ್ಟು ಶಾಂತವಾಗಿರಬೇಕು.

ನಮ್ಮ ದೇಶದ ಉಪಹಾರಗೃಹ ಅಥವಾ ಹೋಟೆಲ್‌ಗಳಿಗೂ ಪಾಶ್ಚಾತ್ಯರ ಉಪಹಾರ ಗೃಹಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ನಮ್ಮಲ್ಲಿ ಸ್ಥಳದ ಅಭಾವದಿಂದಲೋ ಇನ್ನಾವ ಕಾರಣದಿಂದಲೋ ನಿಧಾನಗತಿಯ ಆಹಾರ ಸೇವನೆಗೆ ಅನುಕೂಲಗಳಿಲ್ಲ. ಅವು ಉಪಹಾರ

ಮಂದಿರಗಳೇ ಆಗಿರಲಿ ಊಟದ ಮನೆಯೇ ಆಗಿರಲಿ ಸದಾ ಗಿರಾಕಿಗಳಿಂದ ಕಿಕ್ಕಿರಿದು ತುಂಬಿರುತ್ತದೆ. ಅಲ್ಲಿ ಹೊರಡುವ ಮಾತುಕತೆ, ಗದ್ದಲ ಸಂತೆಯ ರೂಪದ್ದು. ಊಟಕ್ಕೆ ಬಂದವರನ್ನು ತೃಪ್ತಿ ಪಡಿಸಬೇಕಾದ ಸೇವಕರು ತುದಿಗಾಲ ಮೇಲೆ ಓಡಾಡುವ ಕುದುರೆಗಳು. ಅದೂ ಅಲ್ಲದೆ ಕುಳಿತ ಅತಿಥಿಗಳು ಅವರನ್ನು ಶಪಿಸುತ್ತಾ ಕಾಯಬೇಕು.

ಸ್ಥಳ ಅಭಾವವು ಜೊತೆಗೆ ವ್ಯವಹಾರದ ಭರಕ್ಕೆ ತಕ್ಕಷ್ಟು ಸೇವಕರಿಲ್ಲದ ಅಡಚಣೆಯ ಸಂಸ್ಥೆಗಳು ನಮ್ಮ ದೇಶದ ಹೋಟೆಲ್‌ಗಳು ಎಂದರೆ ತಪ್ಪಾಗಲಾರದು. ಪಾಶ್ಚಾತ್ಯ ಹೋಟೆಲ್‌ಗಳಲ್ಲಿ ಬಂದವರಿಗೆ ಊಟದ ಮೇಜು ಮತ್ತು ಆಸನದ ಸೌಕರ್ಯ ದೂರ ದೂರ ಇರುತ್ತದೆ. ಒಂದು ಮೇಜನ್ನು ಸುತ್ತುವರಿದವರ ಮಾತುಕತೆ ಪಕ್ಕದ ಮೇಜಿನವರ ಕಿವಿಯನ್ನು ನಾಟುವಷ್ಟು ಗಟ್ಟಿಯಾಗಿರುವುದಿಲ್ಲ. ಒಂದೆಡೆ ಕುಳಿತು ಉಣ್ಣುವವರಿಗೆ ಮಗ್ಗಲು ಮೇಜಿನಲ್ಲಿ ಉಣ್ಣುವವರ ಚರ್ಯೆಗಳಿಂದ, ಮಾತುಗಳಿಂದ ತೊಡಕಾಗದು. ಅಲ್ಲಿಗೆ ಬಂದ ಎಲ್ಲರೂ ಶಾಂತವಾಗಿ ಕುಳಿತು ಊಟದ ಸವಿಯನ್ನು ಮೆಲುಕಾಡು- ವಂತಿರಬೇಕು. ಅದಕ್ಕೆ ತಕ್ಕ ಗದ್ದಲ ರಹಿತ ವಾತಾವರಣ ಇಲ್ಲದೇ ಹೋದರೆ ಗಿರಾಕಿಗಳಿಗೆ ತಾವು ಉಂಡ ಊಟದ ನೆನಪು ಉಳಿಯುವುದಿಲ್ಲ. ಆದರೆ ನಮ್ಮ ದೇಶದ ಹೆಚ್ಚಿನ ಉಪಹಾರ ಗೃಹಗಳಲ್ಲಿ ಈ ಪ್ರಶಾಂತತೆಯ ವಾತಾವರಣವನ್ನು ಕಾಣಲಾರೆವು.

ಪಾಶ್ಚಾತ್ಯ ಹೋಟೆಲ್ ಉದ್ಯಮಗಳಲ್ಲಿ ಕಂಡುಬರುವ ಮತ್ತೊಂದು ವಿಶೇಷತೆ ಎಂದರೆ ಶುಚಿತ್ವಕ್ಕೆ ಮಹತ್ವ ನೀಡಿರುವುದು. ಶುಚಿಯಾದ ಚೆನ್ನಾಗಿ ಬಟ್ಟೆ ಧರಿಸಿದ ಸೇವಕರು ಬಡಿಸಿದರೇನೇ ಅವರಿಗೆ ತೃಪ್ತಿ. ಆದರೆ ನಮ್ಮ ದೇಶದ ಬಹುಮಟ್ಟಿನ ಉಪಹಾರ ಗೃಹಗಳಲ್ಲಿ ಬಡಿಸುವವರಲ್ಲಿ ಶುಚಿತ್ವವಿಲ್ಲ. ಆರೋಗ್ಯ- ವನ್ನು ಕುರಿತು ಭಯ ಹುಟ್ಟಿಸುವ ರೀತಿಯಲ್ಲಿ ಅವರು ಇರುತ್ತಾರೆ. ಈ ಸೇವಕರು ಹೋಟೆಲ್‌ನ ಎಲ್ಲಾ ಕೆಲಸವನ್ನು ನಿರ್ವಹಿಸುತ್ತಾರೆ. ಅರ್ಧ ಭೋಜನ ಮುಗಿಯುವ ಮುನ್ನವೇ ಮೇಜನ್ನು ಉಜ್ಜುವ, ಮುಸುರೆ ತೆಗೆಯುವ ಕೆಲಸದಲ್ಲಿ ತೊಡಗುತ್ತಾರೆ. ಉಪಹಾರಕ್ಕೆ ಬಂದವರಲ್ಲಿ ಏತಕ್ಕಾಗಿ ಬಂದೆ ಎಂಬ ಜಿಗುಪ್ಸೆ ಹುಟ್ಟಿಸುತ್ತಾರೆ.

ಪಾಶ್ಚಿಮಾತ್ಯ ಹೋಟೆಲ್ ಉದ್ಯಮಗಳಲ್ಲಿ ಕಾರ್ಮಿಕರನ್ನು ಸೂಕ್ತರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಅವರ ಕೆಲಸದ ಅವಧಿಗೆ ಮಿತಿ ಇದೆ. ವಿರಾಮಕ್ಕೆ ಅವಕಾಶವಿದೆ. ಅವರ ವೇತನವೂ ಹೆಚ್ಚಾಗಿದೆ. ಹೋಟೆಲ್ ಕಟ್ಟಡ, ವಾತಾವರಣ ಶುಚಿತ್ವಕ್ಕೆ ನೀಡುವ ಪ್ರಾಮುಖ್ಯತೆಯನ್ನು ಸೇವಕರಿಗೆ ಸೌಜನ್ಯದ ಪಾಠವನ್ನು ಕಲಿಸುವುದಕ್ಕೂ ನೀಡುತ್ತಾರೆ.

ಗಿರಾಕಿಗಳನ್ನು ನೋಡಿದೊಡನೆ ಸೇವಕರು ಸೌಜನ್ಯದಿಂದ ಸ್ವಾಗತಿಸುವ ರೀತಿಯಲ್ಲಿ ಮುಖ ತೋರಿಸಬೇಕು. ಜೊತೆಗೆ ಅವರು ತೊಟ್ಟ ಬಟ್ಟೆ ಬರೆಗಳು ಶುಚಿಯಾಗಿರಬೇಕು.

ಪ್ರಪಂಚದಲ್ಲಿ ಎರಡನೇ ಮಹಾಯುದ್ಧದ ನಂತರದಲ್ಲಿ ಹೋಟೆಲ್ ಉದ್ಯಮವು ಅನೇಕ ಹೊಸ ಹೊಸ ಸವಾಲುಗಳನ್ನು ಎದುರಿಸಬೇಕಾಗಿದೆ. ಹೋಟೆಲ್ ಉದ್ಯಮದಲ್ಲಿ ವೆಚ್ಚವು

ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲಿದೆ. ಪೈಪೋಟಿಯ ಪ್ರಮಾಣವು ಹಿಂದಿಗಿಂತಲೂ ಹೆಚ್ಚಾಗಿದೆ. ಇದನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದರೆ ಮಿತವ್ಯಯ ಮತ್ತು ಸೂಕ್ತ ಸುಧಾರಣೆಗಳು ಈ ಉದ್ಯಮದಲ್ಲಿ ಬರಲೇಬೇಕಾಗಿದೆ.

ಪಾಕಶಾಲೆಯಲ್ಲಿ ಹೊಗೆ ಇಲ್ಲದೇ ಅಡಿಗೆ ಮಾಡುವ ಕ್ರಮ ಈಗ ಕ್ರಮೇಣವಾಗಿ ಬೆಳೆದಿದೆ. ಕೈ ಕೆಲಸದ ಬದಲು ಯಂತ್ರಗಳ ಬಳಕೆ ಹೆಚ್ಚಾಗಿದೆ. ಉಂಡ ತಟ್ಟೆ ಲೋಟ ಮೊದಲಾದವುಗಳನ್ನು ಬಿಸಿ ನೀರಿನಿಂದ ಬೇಗನೆ ತೊಳೆದು ಚೊಕ್ಕ ಮಾಡುವ ಯಂತ್ರಗಳು ಬೆಳಕಿಗೆ ಬಂದಿವೆ. ಇದಕ್ಕೆ ಸಮನಾಗಿ ಸೇವಕರ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡುವ ಪ್ರಯತ್ನವೂ ನಡೆದಿದೆ. ಇದರ ಫಲವಾಗಿ ಬಡಿಸುವವರೇ ಇಲ್ಲದ ಸ್ವಯಂ ಸೇವಾ ಅಥವಾ ಸ್ವ ಸೇವಾ ಉಪಹಾರ ಗೃಹಗಳು ಕಾಣಸಿಗುತ್ತವೆ. ಇದರಿಂದ ಗಿರಾಕಿಗಳಿಗೆ ಸಾಕಷ್ಟು ಅನುಕೂಲವಾಗುತ್ತದೆ. ಜೊತೆಗೆ ಉಪಹಾರ ಗೃಹಗಳಲ್ಲಿ ಬಡಿಸುವ ಕೆಲಸವನ್ನು ಗಿರಾಕಿಗಳೇ ನಿರ್ವಹಿಸುವುದರಿಂದ ಮಿತವ್ಯಯ ಸಾಧ್ಯ.

ಭಾರತದಲ್ಲೂ ಸಹ ಇತ್ತೀಚಿನ ವರ್ಷಗಳಲ್ಲಿ ಸ್ವ ಸೇವಾ ಉಪಹಾರ ಗೃಹಗಳು ಸಾಕಷ್ಟು ಪ್ರಚಾರಕ್ಕೆ ಬರುತ್ತಿವೆ. ನಮ್ಮ ದೇಶದ ಹೋಟೆಲ್ ಉದ್ಯಮದಲ್ಲಿರುವ ನ್ಯೂನ್ಯತೆ ಎಂದರೆ ಸೌಜನ್ಯದಿಂದ ವರ್ತಿಸುವ ನೌಕರರ ಅಭಾವ. 'ನಿಮ್ಮ ಸೇವೆಗಾಗಿ ನಾವು ಇದ್ದೇವೆ' ಎಂಬ ಭಾವನೆ ಅವರಲ್ಲಿ ಇಲ್ಲ. ಹೋಟೆಲ್‌ಗಳಿಗೆ ಗಿರಾಕಿಗಳೇ ಆಶ್ರಯದಾತರು. ಅವರನ್ನು ನಾವು ಜಿಗುಪ್ಸೆಗೊಳಿಸುವಂತಿಲ್ಲ. ಅವರು ಮೇಲಿಂದ ಮೇಲೆ ತಮ್ಮ ಬಳಿ ಬರಲೇಬೇಕು ಎಂಬ ವರ್ತನೆ ಹೋಟೆಲ್ ಸೇವಕರಲ್ಲಿ ಇರಲೇಬೇಕು. ಆದರೆ ಅಂತಹಾ ಸ್ಥಿತಿ ಮಾತ್ರ ನಮ್ಮಲ್ಲಿ ಕಾಣಿಸುತ್ತಿಲ್ಲ.

ಶಿವರಾಮ ಕಾರಂತರು ವಿದೇಶಕ್ಕೆ ಪ್ರವಾಸ ಕೈಗೊಂಡಾಗ ವಿದೇಶೀ ಹೋಟೆಲ್ ಗಳಲ್ಲಿ ನೋಡಿದಂತಹ ವಿಶೇಷ ಅನುಭವವನ್ನು ಹೀಗೆ ಹಂಚಿಕೊಂಡಿದ್ದಾರೆ. 'ಟೋಕಿಯೋ ನಗರದ ಒಂದು ಬಲುದೊಡ್ಡ ಹೋಟೆಲ್‌ನಲ್ಲಿ ನಾನು ಆರೆಂಟು ದಿನ ವಾಸ ಮಾಡಿದ್ದೆ. ಆ ದಿನಗಳಲ್ಲಿ ನಾನು ನನ್ನ ಊಟ ಉಪಹಾರಗಳಿಗೆ ಅಲೆದಾಡುವಾಗ ಅಥವಾ ಬರಿದೇ ಹೊಕ್ಕು ಹೊರಡುವ ಸಮಯದಲ್ಲಾಗಲೀ ಯಾವುದೇ ಸೇವಕ ಅಥವಾ ಸೇವಕಿ ನನಗೆ ಎದುರಾದಾಗ ವಿನಯದಿಂದ ತಲೆತಗ್ಗಿಸಿ ಸ್ವಾಗತದ ನಗುಮೊಗವನ್ನು ತೋರಿಸುತ್ತಿದ್ದರು. ಅವರು ತೋರಿದ ಸೌಜನ್ಯಕ್ಕೆ ಎಷ್ಟು ಸಂಬಳ ಕೊಡಬಹುದು ಎಂಬ ಭಾವನೆ ಬರುತ್ತಿತ್ತು'. – 1

ಡಾ.ಕೆ. ಶಿವರಾಮ ಕಾರಂತ – ಪಾಶ್ಚಾತ್ಯರ ಸ್ವ ಸೇವಾ ಉಪಹಾರ ಗೃಹಗಳು – ಹೊಂಗಿರಣ – ಸುವರ್ಣ ಮಹೋತ್ಸವ ಸಂಚಿಕೆ, ಬೆಂಗಳೂರು ಹೋಟೆಲ್ ಸಂಘ, ದಿನಾಂಕ 28.1.1997ರಿಂದ 29.1.1997.

ಆದರೆ ಈ ಬಗೆಯ ಸೌಜನ್ಯವಾಗಲಿ, ಶುಚಿತ್ವವನ್ನಾಗಲೀ ನಾವು ಎಷ್ಟು ಬೆಲೆ ತೆತ್ತರೂ ನಮ್ಮ ದೇಶದ ಮಾಮೂಲಿ ಹೋಟೆಲ್‌ಗಳಲ್ಲಿ ಕಾಣಸಿಗುವುದಿಲ್ಲ. ಹೋಟೆಲ್ ಉದ್ಯಮವು ಯಶಸ್ವಿಯಾಗಬೇಕಾದರೆ ಸವಿ ರುಚಿ, ಶುಚಿಗಳೊಂದಿಗೆ ಸೇವಕರ ಸೌಜನ್ಯವೂ ಅಷ್ಟೇ ಕಡ್ಡಾಯವಾಗಿ ದೊರೆಯುವ ಅಮೂಲ್ಯ ಒಡವೆ ಎನಿಸಬೇಕು.

ದಕ್ಷಿಣ ಕನ್ನಡ ಜಿಲ್ಲೆಯು ಹೋಟೆಲ್ ಉದ್ಯಮಕ್ಕೆ ನೀಡಿದ ಕೊಡುಗೆ

ದಕ್ಷಿಣ ಕನ್ನಡ ಜಿಲ್ಲೆಯು ಪ್ರಾದೇಶಿಕವಾಗಿ ಸ್ವಲ್ಪ ಭಿನ್ನವಾದ ಜಿಲ್ಲೆ. ಕರಾವಳಿ ಪ್ರದೇಶ ಮತ್ತು ಘಟ್ಟ ಪ್ರದೇಶಗಳಿಂದ ಸುತ್ತುವರಿದಿದ್ದು ರಾಜ್ಯದ ಇನ್ನಿತರ ಜಿಲ್ಲೆಗಳಿಗೆ ಹೋಲಿಸಿದರೆ ಅಷ್ಟೇನೂ ಸಂಪದ್ಭರಿತವಾದ ಜಿಲ್ಲೆಯಲ್ಲ. ಇತ್ತೀಚಿನ ವರ್ಷಗಳವರೆಗೂ ಇಲ್ಲಿನ ಜನರ ಮುಖ್ಯ ಉದ್ಯೋಗ ಕೃಷಿ ಮತ್ತು ಮೀನುಗಾರಿಕೆಗೆ ಮಾತ್ರ ಸೀಮಿತವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುತ್ತಾ ಬಂದಿವೆ. ಇಲ್ಲಿನ ಭೌಗೋಳಿಕ ವಿಸ್ತೀರ್ಣಕ್ಕೆ ಹೋಲಿಸಿದರೆ ಜನಸಂಖ್ಯೆ ಹೆಚ್ಚಾಗಿಯೇ ಇದೆ. ಇಂದಿಗೂ ಸಹ ಹೆಚ್ಚಿನ ಜನ ಕೃಷಿಕರಾಗಿ ಇಲ್ಲವೇ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಕಳೆದ ಶತಮಾನದ ಆರಂಭದಲ್ಲಿ ಉದ್ಯೋಗವನ್ನು ಅರಸಿ ಇಲ್ಲಿನ ಜನ ದೇಶದ ವಿಭಿನ್ನ ಭಾಗಗಳಿಗೆ ವಲಸೆ ಹೋಗಿ ನೆಲೆಸಿದ್ದಾರೆ. ಅದರಲ್ಲೂ ಪ್ರಮುಖವಾಗಿ ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರಿನ ಬಹುತೇಕ ಅಡಿಕೆ, ಕಾಫಿ, ಏಲಕ್ಕಿ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಬಹುತೇಕ ಈ ಜಿಲ್ಲೆಯವರೆ.

ಕೃಷಿ ಮತ್ತು ಮೀನುಗಾರಿಕೆಯ ಜೊತೆಗೆ ಇಲ್ಲಿನ ಜನ ಆಯ್ಕೆ ಮಾಡಿಕೊಂಡ ಮತ್ತೊಂದು ಚಟುವಟಿಕೆಯೆಂದರೆ ಹೋಟೆಲ್ ಉದ್ಯಮ. ಇಂದು ಭಾರತದಲ್ಲಿ ಮಾತ್ರವಲ್ಲದೇ ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿ ಇಲ್ಲಿನ ಉದ್ಯಮಿಗಳು ಹೋಟೆಲ್‌ಗಳನ್ನು ಸ್ಥಾಪಿಸಿ, ಸಾಕಷ್ಟು ಹೆಸರು ಮತ್ತು ಹಣವನ್ನು ಗಳಿಸಿರುತ್ತಾರೆ. ಪ್ರಪಂಚದ ಯಾವುದೇ ಭಾಗದಲ್ಲಿ ನಾವು 'ಕಾಮತ್ ಹೋಟೆಲ್', 'ಉಡುಪಿ ಬ್ರಾಹ್ಮಣರ ಹೋಟೆಲ್' ಮುಂತಾದ ಹೆಸರುಗಳಿರುವ ಹೋಟೆಲ್‌ಗಳನ್ನು ಕಾಣುತ್ತೇವೆ. ಭಾರತದ ಮೆಟ್ರೋಪಾಲಿಟನ್ ಸಿಟಿಗಳಾದ ದೆಹಲಿ, ಕೊಲ್ಕತ್ತಾ, ಮುಂಬಯಿ, ಚೆನ್ನೈ, ಬೆಂಗಳೂರನ್ನು ಒಳಗೊಂಡಂತೆ ಸಣ್ಣ ಪುಟ್ಟ ಊರುಗಳಲ್ಲೂ ಸಹ ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್‌ಗಳನ್ನು ನಾವು ಕಾಣಬಹುದು.

ಡಾ॥ಕೆ. ಶಿವರಾಮ ಕಾರಂತರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋಟೆಲ್ ಉದ್ಯಮ ಬೆಳೆಯಲು ಕಾರಣವೇನೆಂದರೆ "ತೀರಾ ಪುರಾತನ ಕಾಲದಲ್ಲಿ, ನಮ್ಮ ದೇಶದಲ್ಲಿ ತೀರ್ಥಯಾತ್ರೆ ಮಾಡುವವರೋ, ವ್ಯಾಪಾರ, ವ್ಯವಹಾರ ನಡೆಸುವವರೋ ಊರಿಂದ ಊರಿಗೆ ಸಂಚರಿಸುತ್ತಿದ್ದ ಅವಧಿಯಲ್ಲಿ ಅವರಿಗೆ ತಮ್ಮ ಹೊಟ್ಟೆಯ ಸಮಸ್ಯೆಯನ್ನು ಪೂರೈಸುವ ವಿಧಾನವೆಂದರೆ, ದಿನಕ್ಕೊಮ್ಮೆ ನೆರಳನ್ನು ಕೊಡಬಲ್ಲ ಯೋಗ್ಯ ತಾಣವನ್ನು ಅರಸಿ, ಅಲ್ಲಿ ತಂಗಿ, ತಾವು ಕಟ್ಟಿಕೊಂಡು ಬಂದ ಅಥವಾ ತಂಗಿದಲ್ಲೇ ಇರುವ ಅಂಗಡಿಯಲ್ಲಿ ದಿನಸಿಯನ್ನು ಕೊಂಡು ಬೇಯಿಸಿ ತಮ್ಮ ಹಸಿವನ್ನು ತಣಿಸುವ ಒಂದೇ ಉಪಾಯವಿತ್ತು. ಇಲ್ಲದೇ ಹೋದರೆ, ತಮ್ಮ ಪ್ರವಾಸ ಮಾರ್ಗದಲ್ಲಿ

ಕಾಲಮಾನದಿಂದ ಪೂರ್ವಿಕರು ನಡೆಸುತ್ತಿದ್ದ ಧರ್ಮ ಛತ್ರಗಳನ್ನು ಆಶ್ರಯಿಸಿ, ಅಲ್ಲಿನ ಊಟ ಮತ್ತು ನೆರಳನಿಂದ ಸಂತೃಪ್ತರಾಗಬೇಕಿತ್ತು.

ಹಿಂದಿನ ಕಾಲದಲ್ಲಿ ರೈಲು ಸಂಚಾರ ಕಡಿಮೆ ಇತ್ತು. ಕಾಲು ನಡಿಗೆಯಲ್ಲಿ ದೇಶಾಟನೆ ಮಾಡುವ ಜನರ ಸಮಸ್ಯೆಯೂ ಅಷ್ಟೊಂದು ಇರಲಿಲ್ಲ. ಅಂತಹವರಲ್ಲಿ ಯಾತ್ರಿಕರಿರಬಹುದು, ಭಿಕ್ಷುಕರಿರಬಹುದು, ವಿದ್ಯಾರ್ಥಿಗಳಿರಬಹುದು ಅವರೆಲ್ಲಾ ಒಂಟಿಯಾಗಿಯೋ, ನಾಲ್ಕಾರು ಮಂದಿ ಕೂಡಿಯೋ ಪಯಣಿಸು- ತ್ತಿದ್ದರು. ಅನ್ನ ನೀರು ದೊರೆಯುವಲ್ಲಿ ತಂಗಿ ಮುಂದುವರೆಯಬೇಕಾದ ಪಾಡು ಅವರದ್ದು.

ಹಿಂದೆ ನಮ್ಮ ಮಲೆನಾಡಿನಲ್ಲಿ ಅನೇಕ ಹಳ್ಳಿಗಳಲ್ಲಿ ಊಟದ ಹೊತ್ತಿಗೆ ಮನೆಗೆ ಬಂದ ಅಭ್ಯಾಗತರಿಗೆ ಅನ್ನ ನೀಡುವ ವಾಡಿಕೆ ಗೃಹಸ್ಥಧರ್ಮಕ್ಕೆ ಭೂಷಣ ಎಂಬ ಅಭಿಪ್ರಾಯವಿದ್ದಿತ್ತು. ಅಪರೂಪಕ್ಕೆ ಮನೆಗೆ ಬರುವ ಅವರಿಂದ ಗೃಹಸ್ಥರಿಗೆ ಬಾಹ್ಯ ಲೋಕದ ಸಮಾಚಾರ ದೊರೆಯುತ್ತಿತ್ತು.

ಗಾಡಿಗಳಲ್ಲಿ, ಹೇರೆತ್ತುಗಳಲ್ಲಿ ಊರಿಂದೂರಿಗೆ ದವಸ ಧಾನ್ಯ ಮೊದಲಾದ ಸರಕುಗಳನ್ನು ಹೊತ್ತು ಸಾಗಿಸುವ ಬಣಜಿಗರು ಮಾತ್ರ ತಮ್ಮಂತಿರುವ ಇತರ ವ್ಯಾಪಾರಸ್ಥರನ್ನು ಕೂಡಿಕೊಂಡು ಸಂಚರಿಸುವ ಅನಿವಾರ್ಯವಿತ್ತು. ದೀರ್ಘಕಾಲ ಇಂತಹ ವ್ಯಾಪಾರಿಗಳು, ನಾಡಿನ ಹಲವಾರು ಅರಸರು ಮತ್ತು ತುಂಡರಸರ ರಾಜ್ಯಗಳನ್ನು ಕಚ್ಚಾದಾರಿಗಳ ಮೂಲಕ ಹಾದುಹೋಗುವಾಗ, ಅಲ್ಲಲ್ಲಿ ಡಕಾಯಿತರ ಪೀಡೆಗೆ ಬಲಿಯಾಗುವ ಪ್ರಸಂಗವಿತ್ತು. ಆ ದರೋಡೆಕೋರರು ಕಾಡುಗಳಲ್ಲೋ, ಗುಡ್ಡಗಾಡಿನ ಗವಿಗಳಲ್ಲೋ ಅಡಗಿ ಕೊಂಡಿದ್ದು, ತಮ್ಮ ದೂತರ ಮೂಲಕ ಸಂಚಾರಿ ವ್ಯಾಪಾರಿಗಳ ಸುಳಿವು ತಿಳಿದು ಅವರ ತಂಡವನ್ನು ತಡೆದು ಸುಲಿಯುತ್ತಿದ್ದರು. ಇಂಥವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲದೇ ಭಾರತದ ಹಲವು ರಾಜ್ಯ ಗಳಲ್ಲಿ ಇದ್ದೇ ಇದ್ದವು ಎಂದು ಕಾರಂತರು ಅಭಿಪ್ರಾಯ ಪಟ್ಟಿದ್ದಾರೆ.

"ಇಂತಹಾ ಪರಿಸ್ಥಿತಿ ಪ್ರವಾಸಿಗಳು ಸಂಚರಿಸುತ್ತಿದ್ದ ಯಾವುದೇ ಪ್ರದೇಶವಾದರೂ ಕಾಲಮಾನದಲ್ಲಿ, ಶ್ರೀಮಂತರಾಗಿ ಬೆಳೆದು ಬಂದ ವ್ಯಾಪಾರ ವ್ಯವಹಾರಗಳ ನಗರಗಳಲ್ಲಿ, ವ್ಯಾಪಾರಿಗಳ ಸಲುವಾಗಿ ಸಂತೆಮಾಳಗಳು, ಅವರ ಊಟೋಪಚಾರಕ್ಕೆ ಅನುಕೂಲವಾದ ಧರ್ಮಶಾಲೆಗಳಾಗಿ ಬೆಳೆದು ಬಂದವು. ಅಲ್ಲಿ ಬಂದವರಿಗೆಲ್ಲಾ ಊಟ ಹಾಕದೇ ಹೋದರೂ ಕುಡಿಯಲು ನೀರು, ವಿಶ್ರಾಂತಿಗೆ ಸ್ಥಳವನ್ನಷ್ಟೆ ಕೊಡುವ ಧರ್ಮಶಾಲೆಗಳಾಗಿದ್ದವು. ಕೆಲವು ಕಡೆಗಳಲ್ಲಿ ಹಸಿದು ಬಂದವರಿಗೆ ಅನ್ನ ಕೊಡುವ ಛತ್ರಗಳು ಇದ್ದವು.

ನಾನು ಈ ಶತಮಾನದ ಆರಂಭದಲ್ಲಿ ಹುಟ್ಟಿದವನು, ನನ್ನ ಊರಿನಲ್ಲಿ ಅನೇಕ ಹಳಬರು ಕಾಶಿ, ರಾಮೇಶ್ವರಕ್ಕೆ ನಡೆದೇ ಹೋಗಿ ಬಂದದ್ದನ್ನು ಕೇಳಿದ್ದೇನೆ. ಅವರೆಲ್ಲರೂ ದಾರಿಯಲ್ಲಿ ಧರ್ಮದ ಅನ್ನವನ್ನು ಉಂಡದ್ದುಂಟು. ಅದು ಸಿಗದಲ್ಲಿ ಹಸಿದು ಹೆಜ್ಜೆ ಹಾಕಿದ್ದುಂಟು.

ಒಂದು ದಿನ ನಮ್ಮ ಮನೆಯ ಮುಂದುಗಡೆಯ ಜಗುಲಿಯಲ್ಲೆ ಅಂತಹ ಒಬ್ಬ ಯಾತ್ರಿಕ ಕಾಶಿಯಾತ್ರೆ ಮುಗಿಸಿ ಬಂದು ವಿರಮಿಸಿದ್ದ. ಹಾಗೆ ಯಾತ್ರೆಯನ್ನು ಮುಗಿಸಿ ಬಂದವನು, ನಾಳೆಗೆ ಉಳಿದುಕೊಳ್ಳಲು ಸ್ಥಳ ಸಿಗದೇ ಹೋದಲ್ಲಿ ಇನ್ನೊಮ್ಮೆ ಕ್ಷೇತ್ರ ಯಾತ್ರೆ ಮಾಡಬೇಕಾದ ಸಂದರ್ಭವೂ ಇತ್ತು. ಅಂತಹ ವ್ಯಕ್ತಿಯನ್ನು ನಮ್ಮ ತಂದೆ, ನಮ್ಮದೇ ಮನೆಯಲ್ಲಿರಲು ಆಮಂತ್ರಿಸಿದರು. ಆತನ ಶೇಷಾಯುಷ್ಯ ನಮ್ಮ ಮನೆಯಲ್ಲೇ ದೇವರ ಪೂಜೆ ಮಾಡುವುದರಲ್ಲೇ ಕಳೆಯಿತು.

ಈ ಶತಮಾನದ ಮೊದಲನೆ ಎರಡು ದಶಕಗಳಲ್ಲಿ, ನಾನು ಹುಟ್ಟಿ ಬೆಳೆದ ಕೋಟದ ಸುತ್ತ ಜೀವಿಸುತ್ತಿದ್ದ ಹಲವು ಬ್ರಾಹ್ಮಣ ಕುಟುಂಬಗಳ ವಿಚಾರವನ್ನು ಕಣ್ಣಾರೆ ಕಂಡವನು. ಇತರ ಜಾತಿ ಮತಸ್ಥರಲ್ಲಿ ಬಡತನ ಹೇಗೇ ಇದ್ದಿರಲಿ ಅದನ್ನು ತೀರಾ ಹತ್ತಿರದಿಂದ ನೋಡದ ನಾನು ಏನನ್ನೂ ಹೇಳಲಾರೆ. ಹತ್ತಿರದಿಂದ ನೋಡಿದ ಹಲವಾರು ಬ್ರಾಹ್ಮಣ ಕುಟುಂಬಗಳ ಬಗ್ಗೆ ಒಂದಿಷ್ಟು ತಿಳಿವು ನನಗುಂಟು. ಅವರಲ್ಲಿ ಹೆಚ್ಚಿನವರಿಗೆ ತಮ್ಮ ಕುಟುಂಬಕ್ಕೆ ಬೇಕಾಗುವಷ್ಟು ಬೇಸಾಯದ ಭೂಮಿ ಇರುತ್ತಿರಲಿಲ್ಲ. ಬೇಸಿಗೆಯ ಸಮಯದಲ್ಲಿ ಮದುವೆ, ಮುಂಜಿಗಳ ಕಾಲದಲ್ಲಿ ಅನೇಕ ಬ್ರಾಹ್ಮಣ ಕುಟುಂಬದ ಜನರು ಮದುವೆ ಮುಂಜಿಗಳಿಗೆ ಹೋಗಿ ಮಧ್ಯಾಹ್ನದ ಹೊತ್ತು ಉಂಡರೆ ಆ ದಿನ ಸ್ವತಃ ಮನೆಯಲ್ಲಿ ಒಲೆ ಹೊತ್ತಿಸುತ್ತಿರಲಿಲ್ಲ. ನಾನು ನಮ್ಮದೇ ವರ್ಗಕ್ಕೆ ಸೇರಿದ ಕುಟುಂಬಗಳ ಬಡತನದ ಅನೇಕ ಚಿಕ್ಕ ಪುಟ್ಟ ದೃಶ್ಯಗಳನ್ನು ಕಣ್ಣಾರೆ ಕಂಡಿದ್ದೇನೆ. ನನ್ನದೇ ತಾಯಿ ಉಡಲು ಕಿರಿಗೆ ದೊರೆಯುತ್ತದೆ– ಯೆಂದು ಕೇಳಿ, ನವರಾತ್ರಿಯ ವೇಳೆ ಇಲ್ಲಿಂದ ಶೃಂಗೇರಿಗೆ ಹೋಗಿ ಬಂದಿದ್ದನ್ನು ನಾನು ಕೇಳಿದ್ದೆ. ಸುದೈವಕ್ಕೆ ನಮ್ಮ ಮನೆಯಲ್ಲಿ ತಂದೆ ನಡೆಸುತ್ತಿದ್ದ ವ್ಯಾಪಾರೋದ್ಯಮದಿಂದಾಗಿ ಆ ತರದ ಬಡತನವನ್ನು ಮಕ್ಕಳಾದ ನಾವು ಎಂದೂ ಕಂಡಿರಲಿಲ್ಲ.

ಅಲ್ಲಿಂದ ಮುಂದೆ ಎರಡನೆಯ ದಶಕದಲ್ಲಿ ನಮ್ಮ ಮನೆಯ ಸಮೀಪದ ಒಬ್ಬಿಬ್ಬರು ಕೋಟದಿಂದ ಎಂಟು ಮೈಲು ದೂರದ ಕುಂದಾಪುರಕ್ಕೆ ಹೋಗಿ ನೆಲೆಸಿ, ಹೋಟೆಲ್ ಉದ್ಯಮ ನಡೆಸಿದರು. ಅಂಥವರನ್ನು ಕುರಿತು ನಮ್ಮ ಊರವರು ಅನ್ನ ಮಾರಿ ಜೀವಿಸುತ್ತಾರೆ ಎಂಬ ಕಳಂಕವನ್ನು ಅಂಟಿಸಿದ್ದನ್ನು ಕೇಳಿದ್ದೇನೆ. ಆ ಕಾಲದಲ್ಲಿ ಕುಂದಾಪುರ ಪಟ್ಟಣದಲ್ಲಿ ಎರಡು ಮೂರು ಚಿಕ್ಕ ಹೋಟೆಲ್‌ಗಳಿದ್ದರೇ ದೊಡ್ಡದು. ಕೋರ್ಟ್ ಕೆಲಸಗಳಿಗೆ ಹೋಗಿ ಅನಿವಾರ್ಯವಾಗಿ ಉಳಿಯಬೇಕಾದರೆ ಅಲ್ಲಿ ಇರಬಹುದು. ಅವೇ ಹೋಟೆಲ್‌ಗಳಲ್ಲಿ ವಾರದ ಆರು ದಿನ ನಾಲ್ಕು ಮಂದಿ ಹೈಸ್ಕೂಲ್ ವಿದ್ಯಾರ್ಥಿಗಳು ವಾಸಿಸುತ್ತಿದ್ದರೆ ದೊಡ್ಡದು.

ಈ ರೀತಿಯಲ್ಲಿ ತೊಡಗಿದ 'ಅನ್ನ ವಿಕ್ರಯ' ಒಂದು ಉದ್ಯಮ ನಮ್ಮದೇ ಗ್ರಾಮದ ನಮ್ಮ ಮನೆಯ ಸಮೀಪದ ಒಂದು ಕುಟುಂಬದವರಿಂದ ಬೆಂಗಳೂರಿನಲ್ಲಿ ಎರಡನೆಯ ದಶಕದಲ್ಲಿ ತೊಡಗಿತ್ತೆಂದು ಕೇಳಿದ್ದೆ. ಅದೇ ಪ್ರೇರಣೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಇನ್ನೂ ನಾಲ್ಕು ಬ್ರಾಹ್ಮಣ ಕುಟುಂಬದ ಗಂಡಸರು, ಮೈಸೂರು ಸೀಮೆಯ ಕೆಲವು ಪೇಟೆ ಪಟ್ಟಣಗಳನ್ನು ಸೇರಿ, ಹೋಟೆಲ್ ಉದ್ಯಮ ನಡೆಸತೊಡಗಿದರು. ಆರಂಭದಲ್ಲಿ ಇವು ಉಪಹಾರ ಗೃಹಗಳ

ರೂಪ ತಳೆದು ಅನಂತರ ಅನ್ನ ಮಾರುವ ವ್ಯವಹಾರದಲ್ಲಿ ತೊಡಗಿದವು. ಅವರ ಪಾಲಿನ ಗಳಿಕೆ ಹೆಚ್ಚಾದಂತೆ ಉದ್ಯಮ ಬೆಳೆಯಿತು. ಇವರಲ್ಲಿ ದುಡಿಯುವ ಸೇವಕರೆಲ್ಲರೂ ಆ ಕಾಲಕ್ಕೆ 'ಹೋಟೆಲ್ ಮಾಣಿ' ಗಳೆಂದು ಅನಿಸಿಕೊಂಡವರು. ಆ ಬಗ್ಗೆ ಸ್ವಂತ ಊರಿನಲ್ಲಿ ಅವರಿಗೆ ಗೌರವವಿರಲಿಲ್ಲ. ಅವರು ಮಾಡಿ ಬಡಿಸುತ್ತಿದ್ದ ಊಟಕ್ಕೂ, ಉಪಹಾರಕ್ಕೂ ಗಿರಾಕಿ ಬೆಳೆಯುತ್ತಾ ಹೋಯಿತು. ಆದರೆ ಅವರಿಗೆ ಸಮಾಜದಲ್ಲಿ ಗೌರವವಿತ್ತು ಎನ್ನಲಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಡತನವು ದಟ್ಟವಾಗಿ ಹಬ್ಬಿದ್ದ ಕಾಲದಲ್ಲಿ ಯಾರೋ ಕೆಲವು ಮಂದಿ ಅನ್ನ ಮಾರಿಯಾದರೂ ತಮ್ಮ ಊರಿನಲ್ಲಿ ಹಸಿದಿರುವ ಮಡದಿ, ಮಕ್ಕಳು ಹಾಗೂ ತಾಯಂದಿರನ್ನು ಸಾಕಲು ಹೊರಟ ಉದಾಹರಣೆ ನಮ್ಮ ಇಡೀ ಜಿಲ್ಲೆಗೆ ವ್ಯಾಪಿಸಿತ್ತು. ಇಲ್ಲಿನ ದ್ರಾವಿಡ ಬ್ರಾಹ್ಮಣ ಸಮಾಜದ ಅನೇಕರು 'ಉಡುಪಿ ಕೃಷ್ಣನ' ಆಶೀರ್ವಾದವೆಂಬಂತೆ ಅಡುಗೆಯ ಭಟ್ಟರಾಗಿ, ನಾಲಿಗೆಯ ರುಚಿಯ ತಿಂಡಿ ತೀರ್ಥಗಳನ್ನು ಇಟ್ಟು, ಹೋಟೆಲ್ ಉದ್ಯಮವನ್ನು ಘಟ್ಟದ ಮೇಲಿನ ವಿಶಾಲ ಕರ್ನಾಟಕದ ನಗರಗಳಲ್ಲಿ ನಡೆಸಿ ಹೆಸರುಗಳಿಸಿದರು. ಅದೇ ವೃತ್ತಿಯಿಂದ ತಮ್ಮ ಊರಿನ ಬಡತನವನ್ನು ನೀಗಿಸತೊಡಗಿದರು. ಉದ್ಯಮಕ್ಕೆ ವೃತ್ತಿಯಿಂದ ತಮ್ಮ ಊರಿನ ಬಡತನವನ್ನು ನೀಗಿಸತೊಡಗಿದರು. ಉದ್ಯಮಕ್ಕೆ ಬೇಕಾಗುವ ಸೇವಕರನ್ನು ಮೊದಮೊದಲು ತಮ್ಮ ಬಂಧುಗಳಿಂದ ಆಯ್ದು ಕರೆ ತಂದರೂ, ಮುಂದೆ ಜಾತಿ ಮತಸ್ಥರನ್ನು ಆಯ್ದು ಒಯ್ದರು. ಕೊನೆ ಕೊನೆಗೆ ಪರಿಚಾರಿಕೆಗೆ ಬೇಕಾಗುವ ಹಲವು ಸೇವಕರನ್ನು ಬ್ರಾಹ್ಮಣ ಕುಟುಂಬದಷ್ಟೇ ಕಂಗಾಲಾದ ಬ್ರಾಹ್ಮಣೇತರರ ಕುಟುಂಬದಿಂದಲೂ ಕರೆದೊಯ್ದರು.

ಹೀಗೆ ಹೋಟೆಲ್ ಉದ್ಯಮ ದೇಶದ ಬೇರೆ ಬೇರೆ ಭಾಗದಲ್ಲಿ ಬೆಳೆಯಿತು. ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್ ಉದ್ಯಮ ಆರಂಭದ ದಿನಗಳಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭವಾದರೂ ನಂತರದ ದಿನಗಳಲ್ಲಿ ಬೃಹತ್ ಉದ್ಯಮವಾಗಿ ಬೆಳೆಯತೊಡಗಿತು. ದಕ್ಷಿಣ ಕನ್ನಡದ ಹೋಟೆಲ್‌ಗಳು ನಾನಾ ಆಕಾರ ಗಳಲ್ಲಿ, ಗಟ್ಟಿ ಮುಟ್ಟಾದ ಕಟ್ಟಡಗಳಲ್ಲಿ ಅಥವಾ ಹರುಕು ಮುರುಕು ಜೋಪಡಿಗಳಲ್ಲಿ ನಡೆಯುವುದನ್ನು ಕಾಣಬಹುದು.

ಹೋಟೆಲ್ ಉದ್ಯಮದಿಂದ ಊರಿಗೆ ಹರಿದು ಬರುತ್ತಿರುವ ಹಣದ ಪ್ರಮಾಣವನ್ನು ಕಾರಂತರು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ.

> "ನಮ್ಮ ತಂದೆಯ ಜವುಳಿ ಅಂಗಡಿಯಲ್ಲೇ ಪ್ರಥಮ ಬಾರಿಗೆ ಒಂದು 'ಟಪ್ಪಾಲು ಆಫೀಸು' ತೆರೆಯಿತು. ಜಿಲ್ಲೆಯ ಹೊರಗಿನಿಂದ ಪ್ರತಿದಿನವೂ ಎಂಬಂತೆ, ಕೋಟದ ಸುತ್ತ ಮುತ್ತಲ ಸಂಸಾರಗಳಿಗೆ ಹೋಟೆಲ್ ದುಡಿತದ ಹಣ ಮನಿಯಾರ್ಡರ್ ಮೂಲಕ ಹರಿದು ಬರುವುದು ತಿಳಿಯಿತು. ಅದೇ ನನ್ನ ಪರಿಸರದ ಜನರ ಹೊಟ್ಟೆಯನ್ನು ತಣಿಸತೊಡಗಿದ್ದನ್ನು ಕಂಡೆ. ಈ ಅವಧಿಯಲ್ಲಿ ತಮಿಳುನಾಡಿಗೂ, ಕೇರಳಕ್ಕೂ ನಮ್ಮ ಜನರು ವಲಸೆ ಹೋಗಲಿಲ್ಲವಾದರೂ ಆಂಧ್ರ ಪ್ರದೇಶದ ಹಲವಾರು ನಗರಗಳಿಗೆ ಹೋಗಿ ಬೇರು ಬಿಟ್ಟಿದ್ದನ್ನು ಕೇಳಿದ್ದೆ"

ನಂತರದ ದಿನಗಳಲ್ಲಿ ಮುಂಬಯಿಯಂತಹ ಮಹಾನಗರಗಳಿಗೂ ಹೋಟೆಲ್ ಉದ್ಯಮವನ್ನು ದಕ್ಷಿಣ ಕನ್ನಡ ಜಿಲ್ಲೆಯವರು ವಿಸ್ತರಿಸಿದರು. ಅಲ್ಲಿ ವಿಭಿನ್ನ ಹೆಸರುಗಳಿಂದ 'ವೆಲ್ ಕಮ್ ಹೋಟೆಲ್' ಇತ್ಯಾದಿ ಹೆಸರುಗಳಿಂದ ಪ್ರಖ್ಯಾತಿ ಪಡೆದರು. ಈ ಶತಮಾನದ ಆರಂಭದಲ್ಲಿ ಪ್ರಾರಂಭವಾದ ಉದ್ಯಮ ಕೇವಲ ಐದು ದಶಕಗಳಲ್ಲೇ ದಕ್ಷಿಣ ಕನ್ನಡ ಜಿಲ್ಲೆಯ ಅಸಂಖ್ಯಾತ ಉದ್ಯಮಗಳಿಗೆ ಉದ್ಯೋಗವನ್ನು ಆದಾಯವನ್ನು ಒದಗಿಸಿತು. ಇದರಿಂದ ಮಕ್ಕಳ ವಿದ್ಯಾಭ್ಯಾಸ, ಮದುವೆ, ಮುಂಜಿ ಇತ್ಯಾದಿ ಕಾರ್ಯಗಳು ಸಾಂಗವಾಗಿ ನಡೆಯಲು ಕಾರಣವಾಯಿತು.

ಆರಂಭದ ದಿನಗಳಲ್ಲಿ ಕೇವಲ ಬ್ರಾಹ್ಮಣ ಜನಾಂಗಕ್ಕೆ ಮಾತ್ರ ಸೀಮಿತವಾಗಿದ್ದ ಈ ಉದ್ಯಮ, ನಂತರದ ದಿನಗಳಲ್ಲಿ ಗೌಡ ಸಾರಸ್ವತ ಬ್ರಾಹ್ಮಣ, ಬಂಟರು, ಇತ್ಯಾದಿ ಜನಾಂಗದವರಿಗೂ ಆಕರ್ಷಣೆ ಯಾಯಿತು. ಇಂದು ಮಹಾರಾಷ್ಟ್ರ, ಮುಂಬಯಿ ಮುಂತಾದ ಕಡೆ ಬಂಟ ಸಮಾಜದ ಸಾವಿರಾರು ಹೋಟೆಲ್‌ಗಳನ್ನು ನಾವು ಕಾಣಬಹುದು.

ಕಾರಂತರ ಪ್ರಕಾರ ಹೋಟೆಲ್ ಉದ್ಯಮದಲ್ಲಿ ತೊಡಗಿದ ಅನೇಕರು ತಮ್ಮ ಊರುಗಳನ್ನು ಬಿಟ್ಟು ಪರ ಊರುಗಳಲ್ಲಿ ಶಾಶ್ವತವಾಗಿ ನೆಲೆಸಿದರು. ಅಂಥವರು ಪ್ರತಿಷ್ಠೆಯನ್ನು ಗಳಿಸದೇ ಹೋದರೂ, ಹಣವನ್ನು ಗಳಿಸಿ ಜೊತೆಗೆ ತಾವು ಬೀಡುಬಿಟ್ಟ ಪ್ರದೇಶದ ಜನರ ನಾಲಿಗೆಯನ್ನು ತಣಿಸಲು ಶಕ್ತರಾದರು. ಎಲ್ಲಿಂದಲೋ ಬಂದ ಈ ಜನರು ಹಣ ದೋಚಿದರು ಎಂಬ ಟೀಕೆಯನ್ನು ಸಹ ಎದುರಿಸಬೇಕಾಯಿತು. ದಕ್ಷಿಣ ಕನ್ನಡದಲ್ಲಿ ಪ್ರಾರಂಭವಾದ ಈ ಹೋಟೆಲ್ ಉದ್ಯಮ ಸಾಕಷ್ಟು ವಿದ್ಯಾಭ್ಯಾಸದ ವಿಸ್ತರಣೆಗೆ ಕಾರಣವಾಗಿದೆ. ತಾವು ನೆಲೆಸಿದ ಸ್ಥಳದಲ್ಲಿಯೇ ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸವನ್ನು ನೀಡಿದ ಅನೇಕರು ಇಂದು ವಿದೇಶಗಳಲ್ಲೂ ಉನ್ನತ ಹುದ್ದೆಯನ್ನು ಹೊಂದುವಂತೆ ಮಾಡಿದ್ದಾರೆ.

ಒಟ್ಟಿನಲ್ಲಿ ಅನಿವಾರ್ಯ ಸಂದರ್ಭದಲ್ಲಿ ಪ್ರಾರಂಭವಾದ ಹೋಟೆಲ್ ಉದ್ಯಮ ಇಂದು ಬಡತನ ಮತ್ತು ನಿರುದ್ಯೋಗದ ನಿವಾರಣೆಯಲ್ಲೂ ಒಂದು ಪ್ರಮುಖ ಪಾತ್ರ ವಹಿಸಿದೆ. ಜೊತೆಗೆ ಇದರಿಂದ ಲಾಭ ಪಡೆದ ಬಹುತೇಕ ಮಂದಿ ತಾವು ಗಳಿಸಿದ ಹಣದಿಂದ ಜಿಲ್ಲೆಯ ಅಭಿವೃದ್ಧಿಗೆ ಪ್ರತಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾಗುತ್ತಿರುವ ಅಂಶವನು ನಾವು ಕಾಣಬಹುದು. ಆದರೆ ಕಾರಂತರ ಹೋಟೆಲ್ ಉದ್ಯಮದ ಉಗಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲಾಗದು. ಕೇವಲ ಯಾತ್ರಿಕರ ಹಸಿವನ್ನು ತಣಿಸಲು, ವಿದ್ಯಾರ್ಥಿಗಳಿಗೆ ಸೂಕ್ತ ವಸತಿ ವ್ಯವಸ್ಥೆಯನ್ನು ಕಲ್ಪಿಸಲು ಈ ಉದ್ಯಮ ಬೆಳೆಯಿತು. ನಂತರ ಇತರ ನಗರಗಳಿಗೆ ಹರಡಿತು ಎಂಬ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ.

ಡಾ|| ಕೆ.ಶಿವರಾಮ ಕಾರಂತ, ಪಾಶ್ಚಾತ್ಯರ ಉಪಹಾರ ಗೃಹಗಳು – ಹೊಂಗಿರಣ – ಸುವರ್ಣ ಮಹೋತ್ಸವ ಸಂಚಿಕೆ, ಬೆಂಗಳೂರು ಹೋಟೆಲ್ ಸಂಘ, ದಿನಾಂಕ : 28-01-1997 – 29-01-1997

ಕೃಷಿ ಕಾರ್ಮಿಕರಿಗೆ ವರ್ಷವಿಡೀ ಉದ್ಯೋಗ ಸಿಗದೆ ಇರುವ ಸಂದರ್ಭದಲ್ಲಿ ತಮ್ಮ ಹತ್ತಿರದ ಸಣ್ಣ ಪುಟ್ಟ ನಗರದಲ್ಲಿ ಉದ್ಯೋಗವನ್ನು ಅರಸಿ ಬಂದ ಜನ ಬೆಳಗ್ಗೆಯಿಂದ ಸಂಜೆಯ ತನಕ ಯಾವುದೇ ಉದ್ಯಮದಲ್ಲಿ ಅನಿವಾರ್ಯವಾಗಿ ತೊಡಗಬೇಕಾಗುತ್ತಿತ್ತು. ಈ ಸಂದರ್ಭದಲ್ಲಿ ಅವರ ಹಸಿವನ್ನು ತಣಿಸಲು ಈ ಉದ್ಯಮ ಅನಿವಾರ್ಯವಾಯಿತು.

ಇತ್ತೀಚಿನ ದಿನಗಳಲ್ಲಿ ಅವಿಭಕ್ತ ಕುಟುಂಬದ ನಾಶದಿಂದಾಗಿ ಅನಿವಾರ್ಯ ಸಂದರ್ಭಗಳಲ್ಲಿ ಹೋಟೆಲ್‌ಗಳ ಮೇಲೆ ಜನರ ಅವಲಂಬನೆ ಹೆಚ್ಚಾಗುತ್ತಿದೆ. ಜೊತೆಯಲ್ಲಿ ವಿದ್ಯಾಭ್ಯಾಸಕ್ಕೆ ಈ ಹಿಂದಿ- ಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವ ಕಾರಣದಿಂದಾಗಿ ಈ ಉದ್ಯಮ ಈಗ ಅನಿವಾರ್ಯವಾಗಿದೆ. ನಮ್ಮ ದೇಶದಲ್ಲಿ ಜಾತಿ ಪದ್ಧತಿಯ ನಿವಾರಣೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಸಮಾಜದ ಎಲ್ಲಾ ವರ್ಗದವರೂ ಈ ಉದ್ಯಮವನ್ನು ಅವಲಂಬಿಸಿದವರಾಗಿದ್ದಾರೆ. ಈ ಹಿಂದೆ ಬ್ರಾಹ್ಮಣರು ಬ್ರಾಹ್ಮಣ ಉಪಹಾರ ಮಂದಿರಗಳಿಗೆ ಮಾತ್ರ ಹೋಗುತ್ತಿದ್ದರು. ಈ ಉದ್ಯಮದ ಬೆಳವಣಿಗೆಗೆ ಜಾತಿ ಪದ್ಧತಿ ಅಡ್ಡ ಬರುತ್ತಿತ್ತು. ಈಗ ಎಲ್ಲಾ ವರ್ಗದವರಿಗೂ ಈ ಉದ್ಯಮ ಅನಿವಾರ್ಯವಾಗಿದೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರವಲ್ಲದೇ ಇಡೀ ನಮ್ಮ ದೇಶದಲ್ಲಿ ಸೇವಾ ವಲಯದ ಅವಿಭಾಜ್ಯ ಅಂಗವಾಗಿ ಹೋಟೆಲ್ ಉದ್ಯಮ ಸಾಕಷ್ಟು ಕೊಡುಗೆಯನ್ನು ನೀಡುತ್ತಿದೆ. ಜಾಗತೀಕರಣದ ಇಂದಿನ ಕಾಲದಲ್ಲಿ ಹೋಟೆಲ್ ಉದ್ಯಮವನ್ನು ವ್ಯವಸ್ಥಿತವಾಗಿ ಬೆಳೆಸಲು ಸಾಕಷ್ಟು ಅವಕಾಶಗಳೂ ಸಹ ಇದೆ.

ಆರ್ಥಿಕಾಭಿವೃದ್ಧಿಯಲ್ಲಿ ವ್ಯಾಪಾರ ವಾಣಿಜ್ಯದ ಪಾತ್ರ

ಸೇವಾಕ್ಷೇತ್ರದ ವ್ಯಾಪ್ತಿಗೆ ಬರುವ ಮತ್ತೊಂದು ಚಟುವಟಿಕೆಯೆಂದರೆ ವ್ಯಾಪಾರ ಮತ್ತು ವಾಣಿಜ್ಯ.

ವ್ಯಾಪಾರವೆಂದರೆ ಸರಕುಗಳ ಮತ್ತು ಸೇವೆಗಳ ವಿನಿಮಯ ಎಂದು ಅರ್ಥ. ಅಂದರೆ ಹಣದ ಮೂಲಕ ಸರಕು ಮತ್ತು ಸೇವೆಗಳನ್ನು ಕ್ರಯ ಮತ್ತು ವಿಕ್ರಯ ಮಾಡುವ ವ್ಯವಸ್ಥೆಯನ್ನು ವ್ಯಾಪಾರ ಎನ್ನಬಹುದು. ವ್ಯಾಪಾರದಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ.

1. ಆಂತರಿಕ ವ್ಯಾಪಾರ ದೇಶದ ಪರಿಧಿ ಅಥವಾ ವ್ಯಾಪ್ತಿಯ ಒಳಗೆ ನಡೆಯುವ ವ್ಯಾಪಾರ. ಉದಾಹರಣೆಗೆ ಭಾರತದ ವಿಭಿನ್ನ ರಾಜ್ಯಗಳ ಮಧ್ಯೆ ನಡೆಯುವ ವ್ಯಾಪಾರ.

2. ಅಂತರ ರಾಷ್ಟ್ರೀಯ ವ್ಯಾಪಾರ ಎರಡು ಅಥವಾ ಹೆಚ್ಚಿನ ರಾಷ್ಟ್ರಗಳ ಮಧ್ಯೆ ಸರಕು ಮತ್ತು ಸೇವೆಗಳ ಕ್ರಯ ಮತ್ತು ವಿಕ್ರಯವನ್ನು ಅಂತರರಾಷ್ಟ್ರೀಯ ವ್ಯಾಪಾರ ಎಂದು ಕರೆಯಲಾಗುತ್ತಿದೆ.

ಒಂದು ದೇಶ ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸಬೇಕಾದಲ್ಲಿ ವ್ಯಾಪಾರ ತೀರಾ ಅವಶ್ಯಕ. ವ್ಯಾಪಾರದ ರೀತಿ ನೀತಿ ಕಟ್ಟಳೆಗಳನ್ನು ವಿವರಿಸುವುದು ವ್ಯಾಪಾರದ ನೀತಿ. ಇದನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. 1. ಮುಕ್ತ ವ್ಯಾಪಾರ ನೀತಿ, 2. ರಕ್ಷಣಾ ವ್ಯಾಪಾರ ನೀತಿ.

ಮುಕ್ತ ವ್ಯಾಪಾರ ನೀತಿಯೆಂದರೆ ಆಮದು ಮತ್ತು ರಫ್ತುಗಳ ಮೇಲೆ ಯಾವುದೇ ನಿರ್ಬಂಧವನ್ನು ವಿಧಿಸದೇ ಇರುವ ವ್ಯಾಪಾರ ನೀತಿ ಸರ್ಕಾರ ಯಾವುದೇ ನಿಯಂತ್ರಣಗಳಿಗೆ ಒಳಪಡದೆ ವ್ಯಾಪಾರ ಚಟುವಟಿಕೆಗಳು ಏರ್ಪಡುತ್ತದೆ. ಯಾವುದೇ ರೀತಿಯ ಕೃತಕ ನಿರ್ಬಂಧಗಳನ್ನು ವಿಧಿಸುವ ಅವಕಾಶ ಈ ವ್ಯಾಪಾರ ನೀತಿಯಲ್ಲಿ ಇರುವುದಿಲ್ಲ. ಇದನ್ನು ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರಾದ ಆಡಂಸ್ಮಿತ್, ಡೇವಿಡ್ ರಿಕಾರ್ಡೋ ಹಾಗೂ ಕೆಲ ಆಧುನಿಕ ಅರ್ಥಶಾಸ್ತ್ರಜ್ಞರು ಸಹ ಪ್ರತಿಪಾದಿಸಿದರು.

ಇನ್ನೊಂದು ಬಗೆಯ ವ್ಯಾಪಾರ ನೀತಿ ರಕ್ಷಣಾ ವ್ಯಾಪಾರ ನೀತಿ. ಈ ನೀತಿಯಲ್ಲಿ ಅಂತರರಾಷ್ಟ್ರೀಯ ವ್ಯಾಪಾರದ ಮೇಲೆ ವಿಭಿನ್ನ ರೀತಿಯ ನಿಯಂತ್ರಣಗಳನ್ನು ವಿಧಿಸುವ ಮೂಲಕ ಅಂತರರಾಷ್ಟ್ರೀಯ ವ್ಯಾಪಾರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ರಕ್ಷಣಾ ವ್ಯಾಪಾರ ನೀತಿಯಲ್ಲಿ ತೆರಿಗೆಗಳನ್ನು ಸುಂಕ ಗಳನ್ನು ವಿನಿಮಯ ನಿರ್ಬಂಧಗಳನ್ನು ವ್ಯಾಪಾರದ ಮೇಲೆ ವಿಧಿಸುವ ಮೂಲಕ ಅಂತರ ರಾಷ್ಟ್ರೀಯ ವ್ಯಾಪಾರವನ್ನು ನಿಯಂತ್ರಿಸುವ ನೀತಿಯಾಗಿದೆ. ಅಲೆಗ್ಸಾಂಡರ್ ಹ್ಯಾಮಿಲ್ಟನ್ ಮತ್ತು ಫೆಡ್ರಿಕ್ ಲಿಸ್ಟ್ ಎಂಬ ಆಧುನಿಕ ಅರ್ಥಶಾಸ್ತ್ರಜ್ಞರು ಈ ನೀತಿಯನ್ನು ಪ್ರತಿಪಾದಿಸಿದರು.

ಭಾರತವು ಸ್ವಾತಂತ್ರ್ಯವನ್ನು ಪಡೆದುಕೊಂಡ ನಂತರದಲ್ಲಿ ರಕ್ಷಣಾ ವ್ಯಾಪಾರ ನೀತಿಯನ್ನು ಅಳವಡಿಸಿಕೊಂಡಿತ್ತು. ಆದರೆ 1991ರ ಹೊಸ ಆರ್ಥಿಕ ನೀತಿಯ ಅನುಷ್ಠಾನ ಹಾಗೂ 1995ರಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಸ್ಥಾಪಕ ಸದಾಸ್ಯರಾದ ನಂತರ ಮುಕ್ತ ವ್ಯಾಪಾರ ನೀತಿಯನ್ನು ಜಾರಿಗೊಳಸುವ ಕಡೆಗೆ ಪ್ರಯತ್ನಿಸಲಾಗುತ್ತಿದೆ.

ಡಾ||ಕೆ. ಶಿವರಾಮ ಕಾರಂತರು ನಮ್ಮ ದೇಶದ ವ್ಯಾಪಾರ ನೀತಿಯು ಹೇಗಿರಬೇಕೆಂದು ತಮ್ಮ ಲೇಖನಗಳಲ್ಲಿ ವಿವರಿಸಿದ್ದಾರೆ. ಸ್ವಾತಂತ್ರ್ಯಾನಂತರ ಅನುಸರಿಸಿದ ರಕ್ಷಣಾ ವ್ಯಾಪಾರ ನೀತಿಯನ್ನು ಕಟುವಾಗಿ ಟೀಕಿಸಿದ್ದಾರೆ.

> "ಹಣದ ಅಭಾವದಿಂದಲೂ ಅಥವಾ ಇನ್ನಾವುದೇ ಕಾರಣದಿಂದಲೂ ನಮ್ಮ ಮುಂದಾಳುಗಳಿಗೆ ನಮ್ಮ ರಾಷ್ಟ್ರೀಕರಣದ ದಾಹ ತೀರಿದಾಗ, ಇನ್ನೊಂದು ದಾಹ ಉಂಟಾಯಿತು. ಅದೇನೆಂದರೆ ಸುಂಕವನ್ನು ವಿಧಿಸುವುದು. ಗಾಂಧೀಜಿಯವರು ಸುಂಕವನ್ನು ವಿಧಿಸಬಾರದೆಂದು ಬ್ರಿಟೀಷರ ವಿರುದ್ಧ ಸತ್ಯಾಗ್ರಹ ಹೂಡಿದರು. ಆದರೆ ಇಂದು ನಾವು ಬಳಸುವ ದಿನಬಳಕೆಯ ವಸ್ತುಗಳಾದ ಸಕ್ಕರೆ, ಬಟ್ಟೆ ಇತ್ಯಾದಿಗಳ ಮೇಲೆ ವಿಧಿಸುವ ಸುಂಕ ಶೇ.30ರಷ್ಟನ್ನು ಮೀರಿದೆ. ಈ ತೆರಿಗೆಯ ಲಾಲಸೆ, ಹುಲಿಗೆ ಮನುಷ್ಯನ ರಕ್ತದ ರುಚಿಯನ್ನು ತೋರಿಸಿದಂತೆ. ಸುಂಕದ ಈ ದಾಹ ಹೋಗುವ ತನಕವೂ ಭಾರತದಲ್ಲಿ ಯಾವ ಉದ್ಯಮವೂ ಚೇತರಿಸಿಕೊಳ್ಳಲಾರವು. ಶೇ.10ರಷ್ಟು ಲಾಭವೇ ಅನ್ಯಾಯವೆಂದು ಸಾರುವವರು ಶೇ.35ರಷ್ಟು ಸುಂಕವನ್ನು, ಶೇ.10 ರಿಂದ 12ರಷ್ಟು ಮಾರಾಟ ಕರವನ್ನು ಸಾಧುವೆಂದು ಹೇಳುವುದಾದರೆ, ಅವರನ್ನು

ಯಾವ ಹೆಸರಿನಿಂದ ಕರೆಯಬೇಕೆಂದು ತಿಳಿಯದು. ರಾಷ್ಟ್ರಸ್ವಾಮ್ಯದ ಹಿಂದೆಯೇ ತನ್ನ ದುರಾಡಳಿತದ ನಷ್ಟವನ್ನು ತುಂಬಿಸುವುದಕ್ಕಾಗಿ ಈ ಸುಂಕದ ದಾಹ ಹೆಚ್ಚಿತೇ ಹೊರತು ಇನ್ನವುದೇ ಕಾರಣದಿಂದಲೂ ಅಲ್ಲ. ಇದು ಉದ್ಯಮ ಇಲ್ಲವೇ ವ್ಯಾಪಾರದ ಶ್ರೇಯಸ್ಸಾಗಲಿ, ಪ್ರಜೆಗಳ ಹಿತವನ್ನುಸಾಧಿಸುವವರ ನೀತಿಯಾಗಲೀ ಆಗಲಾರದು" – 2

ಕಾರಂತರ ಪ್ರಕಾರ ಸುಂಕವನ್ನು ವಿಧಿಸುವ ನೀತಿ ಆರ್ಥಿಕಾಭಿವೃದ್ಧಿಗೆ ಪೂರಕವಾಗಲಾರದು. ಇದರಿಂದ ವ್ಯಾಪಾರ, ವಾಣಿಜ್ಯ, ಚಟುವಟಿಕೆಗಳು ಬೆಳೆಯಲು ಸಾಧ್ಯವಾಗುವುದಿಲ್ಲ. ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರುಗಳಾದ ಆಡಂಸ್ಮಿತ್, ಡೇವಿಡ್ ರಿಕಾರ್ಡೋರವರು ಪ್ರತಿಪಾದಿಸಿದ ಮುಕ್ತ ವ್ಯಾಪಾರ ನೀತಿಯ ಮೂಲಕ ಆರ್ಥಿಕಾಭಿವೃದ್ಧಿಯನ್ನು ಸಾಧಿಸಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ರಕ್ಷಣಾ ವ್ಯಾಪಾರ ನೀತಿಯಿಂದ ನಮ್ಮ ಆಮದು ಮತ್ತು ರಫ್ತುಗಳ ಮೇಲೆ ಸಾಕಷ್ಟು ಪ್ರತಿಕೂಲ ಪರಿಣಾಮಗಳಾಗಿವೆ. ಆದರೆ ಕೆಲವು ಪಟ್ಟಭದ್ರ ಕಳ್ಳಸಂತೆ ವ್ಯಾಪಾರಸ್ಥರು ಸರ್ಕಾರದ ಮೇಲೆ ಹಿಡಿತ ಸಾಧಿಸಿ ಈ ನೀತಿ ಮುಂದುವರಿಯುವಂತೆ ಮಾಡಿದ್ದಾರೆ. ಅಂತರಾಷ್ಟ್ರೀಯ ವ್ಯಾಪಾರದ ಮೇಲೆ ಕೃತಕ ನಿರ್ಬಂಧಗಳನ್ನು ವಿಧಿಸಿ ವಸ್ತುಗಳ ಅಭಾವವನ್ನು ಸೃಷ್ಟಿಸಿ ಹೆಚ್ಚಿನ ಬೆಲೆಯಲ್ಲಿ ಆ ವಸ್ತುಗಳನ್ನು ಮಾರುವ ಮೂಲಕ ಅಧಿಕ ಲಾಭವನ್ನು ಗಳಿಸುತ್ತಿದ್ದಾರೆ. ಒಮ್ಮೆ ಸರ್ಕಾರ ಇಂಥ ಕೃತಕ ನಿರ್ಬಂಧಗಳನ್ನು ಸಡಿಲಿಸಿ ಅನಿರ್ಬಂಧಿಇತ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿಕೊಟ್ಟರೆ ವಿದೇಶೀ ವಸ್ತುಗಳು ದೇಶೀಯ ಮಾರುಕಟ್ಟೆಯಾದ್ಯಂತ ತುಂಬಿಹೋದಾವು. ಕಡಿಮೆ ಬೆಲೆಯ ಉತ್ತಮ ಗುಣಮಟ್ಟದ ವಿದೇಶೀ ವಸ್ತುಗಳ ಮುಂದೆ ನಮ್ಮ ವಸ್ತುಗಳನ್ನು ತಿರಸ್ಕರಿಸುವ ಪರಿಸ್ಥಿತಿ ಉಂಟಾಗುತ್ತದೆ. ಇಂದು ನಮ್ಮ ದೇಶದಲ್ಲಿ ದೇಶೀಯ ವಸ್ತುಗಳು ಮಾರಾಟವಾಗುವುದಿದ್ದರೆ, ಕೃತಕವೂ, ಅನಿವಾರ್ಯವೂ ಆದ ಅಭಾವದ ಪರಿಸ್ಥಿತಿಯಿಂದಲೇ ಹೊರತು ಮಾರುಕಟ್ಟೆಯಲ್ಲಿ ಸ್ಪರ್ಧಿಸುವ ನಮ್ಮ ಉತ್ಪನ್ನಗಳ ಯೋಗ್ಯತೆಯಿಂದಲ್ಲ. ನಮ್ಮ ಸರ್ಕಾರವು ಪ್ರಜೆಗಳ ಹಿತವನ್ನು ಕಾಪಾಡಬೇಕಾದರೆ ಮಿತ ಬೆಲೆಗೆ ಉತ್ತಮ ಗುಣಮಟ್ಟದ ಸರಕುಗಳು ಅಗತ್ಯ ಪ್ರಮಾಣದಲ್ಲಿ ಲಭಿಸುವ ವಾತಾವರಣವನ್ನು ಸೃಷ್ಟಿಸಬೇಕಾಗುತ್ತದೆ ಎಂಬುದು ಕಾರಂತರ ನಿಲುವಾಗಿದೆ.

ನಮ್ಮ ದೇಶದಲ್ಲಿ ರಕ್ಷಣಾ ವ್ಯಾಪಾರನೀತಿ ಹಾಗೂ ಮುಕ್ತ ವ್ಯಾಪಾರ ನೀತಿಯನ್ನು ಅನುಸರಿಸಿದಾಗ ಆಮದು ರಫ್ತುಗಳ ಮೇಲೆ ಅದು ಉಂಟುಮಾಡಿದ ಪರಿಣಾಮವನ್ನು ಈ ಕೆಳಗಿನ ಅಂಕಿ ಸಂಖ್ಯೆಗಳ ಮೂಲಕ ಅರ್ಥ ಮಾಡಿಕೊಳ್ಳಬಹುದು.

---

2. ಡಾ॥ಕೆ. ಶಿವರಾಮ ಕಾರಂತ–ಹಣದ ಬೆಲೆ ತಗ್ಗಿದರೂ–ವಿಕ್ರಮ–ವಿಜಯ–ದಶಮಿ ಸಂಚಿಕೆ, 1966

ಭಾರತದ ಅಂತರಾಷ್ಟ್ರೀಯ ವ್ಯಾಪಾರ (ಕೋಟಿ ರೂ.ಗಳಲ್ಲಿ)

ವರ್ಷ	ಆಮದು	ರಫ್ತು	ವ್ಯಾಪಾರ ಬಾಕಿ
1960-61	1,121	642	479
1990-91	50,086	33,153	16,933
2000-01	2,64,589	2,07,852	56,737
2004-05	5,32,969	3,68,427	1,64,542

ಮೂಲ : ರಿಪೋರ್ಟ್ ಆನ್ ಕರೆನ್ಸಿ ಎಂಡ್ ಫೈನಾನ್ಸ್ 1964-65, ಆರ್ಥಿಕ ಸಮೀಕ್ಷೆ 2005-06

ಈ ಮೇಲಿನ ಪಟ್ಟಿಯಿಂದ ತಿಳಿಯುವ ಅಂಶವೆಂದರೆ ಭಾರತ ಸರ್ಕಾರವು ರಕ್ಷಣಾ ವ್ಯಾಪಾರ ನೀತಿಯನ್ನು ಅನುಸರಿಸಿದ ದಿನಗಳಲ್ಲಿ ನಮ್ಮ ಆಮದು ರಫ್ತು ವ್ಯಾಪಾರ ತೀರಾ ಕಡಿಮೆ ಇದ್ದು ವ್ಯಾಪಾರ ಬಾಕಿ ಹೆಚ್ಚಾಗಿದೆ. ಆದರೆ ಜಾಗತೀಕರಣದ ನಂತರದ ಅವಧಿಯಲ್ಲಿ ಮುಕ್ತ ವ್ಯಾಪಾರ ನೀತಿಯ ಕಡೆಗೆ ಗಮನವನ್ನು ಹರಿಸಿದ ಕಾರಣದಿಂದ ನಮ್ಮ ಆಮದು ಮತ್ತು ರಫ್ತುಗಳ ಒಟ್ಟು ಗಾತ್ರವು ಹೆಚ್ಚಾಗಿರುವುದರ ಜೊತೆಗೆ ವ್ಯಾಪಾರ ಬಾಕಿಯ ಪ್ರಮಾಣ ಕಡಿಮೆ ಆಗಿರುವ ಅಂಶ ಬೆಳಕಿಗೆ ಬಂದಿದೆ.

ಒಟ್ಟಾರೆಯಾಗಿ ಹೇಳುವುದಾದರೆ ದೇಶೀಯ ಕೈಗಾರಿಕೆಗಳನ್ನು ವಿದೇಶಿ ಸರಕುಗಳ ಅಥವಾ ವಿದೇಶಿ ಕೈಗಾರಿಕೆಗಳ ದಾಳಿಯಿಂದ ತಪ್ಪಿಸಲು ರಕ್ಷಣಾ ವ್ಯಾಪಾರ ನೀತಿಯನ್ನು ಅನುಸರಿಸುವ ಬದಲು, ನೈಸರ್ಗಿಕ ನಿಯಮದಂತೆ ಆಮದು ರಫ್ತುಗಳ ಮೇಲೆ ಯಾವುದೇ ನಿರ್ಬಂಧವನ್ನು ವಿಧಿಸದೇ ಇರುವ ಮುಕ್ತ ವ್ಯಾಪಾರ ನೀತಿಯೇ ಉತ್ತಮ ಎನಿಸುತ್ತದೆ. ಆದರೆ ದೇಶದ ರಕ್ಷಣಾ ಉತ್ಪನ್ನ ಇತ್ಯಾದಿ ಮುಖ್ಯ ಕೈಗಾರಿಕೆಗಳ ಮೇಲೆ ಮಾತ್ರ ಸರ್ಕಾರ ತನ್ನ ಹತೋಟಿಯನ್ನು ಹೊಂದಬಹುದಾಗಿದೆ. ಆಗ ಮಾತ್ರ ಆಮದು ಮತ್ತು ವಿಸ್ತರಣೆಯಿಂದ ದೇಶ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ ಎನ್ನಬಹುದು.

ಅಧ್ಯಾಯ 8

ಗ್ರಾಹಕರ ಆಂದೋಲನ ಅಥವಾ ಬಳಕೆದಾರರ ಆಂದೋಲನ

ಬಂಡವಾಳಶಾಹಿ ಅರ್ಥ ವ್ಯವಸ್ಥೆಯಲ್ಲಿ ಗ್ರಾಹಕರು ಸುಲಿಗೆ-ಶೋಷಣೆಗೆ ಒಳಗಾಗುತ್ತಿರುವುದರಿಂದ ಎಚ್ಚೆತ್ತುಕೊಂಡು ತಮ್ಮ ಹಕ್ಕುಗಳ ರಕ್ಷಣೆಗಾಗಿ ಆಂದೋಲನವನ್ನು ಪ್ರಾರಂಭಿಸಿದ್ದಾರೆ. ಈ ಹಿಂದೆ ಬಂಡವಾಳಶಾಹಿಗಳು ಕಾರ್ಮಿಕರನ್ನು ಶೋಷಿಸಿದ್ದರಿಂದ ಕಾರ್ಮಿಕವರ್ಗ ಸಿಡಿದೆದ್ದು ಉಗ್ರ ಹೋರಾಟವನ್ನು ಪ್ರಾರಂಭಿಸಿದ ಪರಿಣಾಮವಾಗಿ ಬಂಡವಾಳಶಾಹಿ ಪ್ರಭುತ್ವ ಅಂತ್ಯಗೊಂಡು ಸಾಮಾಜವಾದ ಹಾಗೂ ಸಮತಾವಾದಿ ಸಿದ್ಧಾಂತಗಳ ಆಧಾರದ ಮೇಲೆ ಸರ್ಕಾರಗಳು ಹುಟ್ಟಿಕೊಂಡವು. ಈಗ ಬಳಕೆದಾರರು ತಮ್ಮನ್ನು ಶೋಷಿಸುತ್ತಿರುವವರ ವಿರುದ್ಧ ಆಂದೋಲನವನ್ನು ನಡೆಸುತ್ತಿದ್ದಾರೆ. ಇದಕ್ಕೆ 'ಬಳಕೆದಾರವಾದ' ಅಥವಾ 'ಬಳಕೆದಾರ ಪ್ರಭುತ್ವ' ಎಂದು ಕರೆಯಲಾಗುತ್ತದೆ. ಬಳಕೆದಾರವಾದ ಎಂಬ ಪದ 1960ರ ದಶಕದ ಮಧ್ಯದಲ್ಲಿ ಪ್ರಪ್ರಥಮವಾಗಿ ಪ್ರಚಲಿತವಾಯಿತು. ಇದನ್ನು ರೂಪಿಸಿದವರು ವ್ಯವಹಾರಸ್ಥರೇ ಎಂಬುದು ವಿಶೇಷ.

ಬಳಕೆದಾರವಾದ ಅಥವಾ ಬಳಕೆದಾರ ಪ್ರಭುತ್ವ ಎಂಬುದು ಗ್ರಾಹಕರ ಹಿತರಕ್ಷಣೆಗಾಗಿ ಕಂಕಣ ಬದ್ಧವಾದ ಒಂದು ಸಾಮಾಜಿಕ ಶಕ್ತಿಯಾಗಿದೆ. ಉತ್ಪಾದಕರು, ಉದ್ದಿಮೆದಾರರು ಮತ್ತು ವ್ಯಾಪಾರಸ್ಥರು ಅನುಸರಿಸುತ್ತಿರುವ ಅಹಿತಕರವಾದ ಪ್ರವೃತ್ತಿಗಳ ವಿರುದ್ಧ ಹೋರಾಡಲು ಮತ್ತು ಬಳಕೆದಾರರ ಹಿತಾಸಕ್ತಿ ಯನ್ನು ರಕ್ಷಿಸಲು ಅನೇಕ ಬಳಕೆದಾರ ಸಂಘಗಳು ಅಸ್ತಿತ್ವಕ್ಕೆ ಬಂದಿರುತ್ತವೆ.

ಆಧುನಿಕ ಪ್ರಪಂಚದಲ್ಲಿ ಮಾರುವವರದ್ದೇ ಮೇಲುಗೈ ಮತ್ತು ಕೊಳ್ಳುವವರು ಅಸಹಾಯಕರು. ಮಾರುವವರು ಪ್ರಬಲರಾಗಿದ್ದಾರೆ ಮತ್ತು ಕೊಳ್ಳುವವರು ದುರ್ಬಲರಾಗಿದ್ದಾರೆ. ಹೀಗಾಗಿ ಮಾರುವವರು ಕೊಳ್ಳುವವರ ಅಸಹಾಯಕತೆಯನ್ನು ಪೂರ್ತಿಯಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಮಾರುವವ- ರೆಂದರೆ ಉತ್ಪಾದಕರು, ಉದ್ದಿಮೆದಾರರು ಮತ್ತು ವಿಭಿನ್ನ ಪ್ರಕಾರದ ವ್ಯಾಪಾರಸ್ಥರು. ಕೊಳ್ಳುವವರೆಂದರೆ ಗ್ರಾಹಕರು ಅಥವಾ ಬಳಕೆದಾರರು. ಆದ್ದರಿಂದ ಬಳಕೆದಾರರು ತಮ್ಮ ಹಿತರಕ್ಷಣೆಗಾಗಿ ಕೈಗೊಂಡ ಸಾಮೂಹಿಕ ಸಮಾಜಿಕ ಹೋರಾಟವೇ ಬಳಕೆದಾರ ಆಂದೋಲನ ಅಥವಾ ಬಳಕೆದಾರ ಚಳುವಳಿಯಾಗಿದೆ.

ಬಳಕೆದಾರ ಆಂದೋಲನವು ಅಯೋಗ್ಯವಾದ ವ್ಯಾಪಾರ ಪ್ರವೃತ್ತಿಯನ್ನು ಹತ್ತಿಕ್ಕಲು ಮತ್ತು ಬಳಕೆದಾರರಿಗಾದ ಅನ್ಯಾಯವನ್ನು ನಿವಾರಿಸಲು ಕೈಗೊಂಡ ಹೋರಾಟವಾಗಿದೆ. ಇಂದಿನ ಮಾರಾಟ ವ್ಯವಸ್ಥೆಯಲ್ಲಿ ಅನೇಕ ವಿಧವಾದ ಅವ್ಯವಹಾರಗಳು, ಅನ್ಯಾಯದ ಪ್ರವೃತ್ತಿಗೆ ಅಪ್ರಮಾಣಿಕ ಚಟುವಟಿಕೆ ಗಳು, ಮೋಸ, ವಂಚನೆಯ ವ್ಯವಹಾರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಉದಾಹರಣೆಗೆ ಅಪಾಯಕಾರಕ ವಸ್ತುಗಳ ಮಾರಾಟ, ನಮೂದಿಸಿದ ಬೆಲೆಗಿಂತ ಹೆಚ್ಚಿನ ಬೆಲೆಯಲ್ಲಿ ವಸ್ತುಗಳ ಮಾರಾಟ ಇತ್ಯಾದಿ. ಹೆಚ್ಚು ಬೆಲೆ ಕಡಿಮೆ ಗುಣಮಟ್ಟ, ವಸ್ತುಗಳ ಕೃತಕ ಅಭಾವ, ಕಲಬೆರಕೆ ಇವು ಮಾನವ ಜೀವನಕ್ಕೆ ಅಪಾಯವನ್ನು ತರಬಲ್ಲವು. ಇಂಥಹ ಚಟುವಟಿಕೆಯಿಂದ ಬಳಕೆದಾರರು ತತ್ತರಿಸಿ ಹೋಗಿದ್ದಾರೆ. ಆದರೆ ಕೇವಲ ಕಾನೂನುಗಳಂದ ಈ ರೀತಿಯ ವ್ಯವಹಾರಗಳನ್ನು ತಡೆಯಲು ಸಾಧ್ಯವಿಲ್ಲ. ಆದ್ದರಿಂದ ಬಳಕೆದಾರರು ಜಾಗೃತರಾದಾಗ ಮಾತ್ರ ಇಂಥಹ ಚಟುವಟಿಕೆಗಳನ್ನು ನಿಯಂತ್ರಿಸಲು ಸಾಧ್ಯ.

ಬಳಕೆದಾರ ಆಂದೋಲನವು ಕೇವಲ ವ್ಯಾಪಾರಸ್ಥರ ಅಪ್ರಮಾಣಿಕ ವ್ಯವಹಾರ ಚಟುವಟಿಕೆಯ ವಿರುದ್ಧವಲ್ಲ. ಅದು ಇತರೆ ಸಂಸ್ಥೆಗಳಾದ ಶಾಲಾ ಕಾಲೇಜುಗಳು, ಆಸ್ಪತ್ರೆ, ಗ್ರಂಥಾಲಯ, ವಾಚನಾಲಯ, ಸಹಕಾರಿ ಸಂಸ್ಥೆಗಳು, ನೀರು ಸರಬರಾಜು ಮಂಡಲಿಗಳು, ವಿದ್ಯುಚ್ಛಕ್ತಿ ಮಂಡಲಿಗಳು ಇತ್ಯಾದಿಗಳು ನಡೆಸುವ ಅಪ್ರಮಾಣಿಕ ಪ್ರವೃತ್ತಿಯ ವಿರುದ್ಧವೂ ಹೋರಾಡುವುದಾಗಿದೆ.

ಮಾರಾಟ ವ್ಯವಸ್ಥೆಯನ್ನು ಸುಧಾರಿಸುವುದು, ಬಳಕೆದಾರರ ಹಿತರಕ್ಷಿಸುವುದು, ಮಾರುವವರು ಪ್ರತಿಬಂಧಿತ ವ್ಯಾಪಾರಿ ಚಟುವಟಿಕೆಯಲ್ಲಿ ತೊಡಗದಂತೆ ಹಾಗು ಮಾರಾಟ ವ್ಯವಹಾರದಲ್ಲಿ ಪ್ರಾಮಾಣಿಕವಾಗಿ ವರ್ತಿಸುವಂತೆ, ಬಳಕೆದಾರರ ನೈಜ ಬೇಡಿಕೆಗಳನ್ನು ಈಡೇರಿಸುವಂತೆ ಬಳಕೆದಾರರಿಗೆ ಯೋಗ್ಯ ಮಾರ್ಗದರ್ಶನ ನೀಡುವಂತೆ, ಸರಕುಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ, ಸರಕುಗಳಗೆ ಯೋಗ್ಯ ಬೆಲೆ ವಿಧಿಸುವಂತೆ ನೋಡಿಕೊಳ್ಳುವುದು ಇವೇ ಮೊದಲಾದವುಗಳು ಗ್ರಾಹಕ ಆಂದೋಲನದ ಉದ್ದೇಶಗಳಾಗಿವೆ. ಗ್ರಾಹಕರ ಹಿತರಕ್ಷಣೆಯು ಪ್ರಮುಖವಾಗಿ ನಾಲ್ಕು ವಿಷಯಗಳಗೆ ಸಂಬಂಧಪಟ್ಟಿರುತ್ತವೆ.

1. ಬಳಕೆದಾರರ ಆರೋಗ್ಯ ಸೇವೆ
2. ಅಯೋಗ್ಯ ಮತ್ತು ವಂಚನಾತ್ಮಕ ವ್ಯಾಪಾರಿ ಪ್ರವೃತ್ತಿಯಿಂದ ರಕ್ಷಣೆ
3. ಪರಿಸರ ಮಾಲಿನ್ಯದಿಂದ ರಕ್ಷಣೆ
4. ಏಕಸ್ವಾಮ್ಯ ಪ್ರವೃತ್ತಿಯಿಂದ ರಕ್ಷಣೆ

ಬಳಕೆದಾರರಿಗೆ ಮೇಲೆ ನಮೂದಿಸಿದ ವಿಷಯದಲ್ಲಿ ರಕ್ಷಣೆ ಕೇಳುವ ಹಕ್ಕು ಇದೆ. ಈ ಮೊದಲು "ಕೊಳ್ಳುವವರೆ ಎಚ್ಚರ" ಎಂಬುದು ವ್ಯಾಪಾರಿ ನಿಯಮವಾಗಿತ್ತು. ಆದರೆ ಇಂದು "ಮಾರುವವರೇ ಎಚ್ಚರ" ಎಂಬುದು ವ್ಯಾಪಾರಿ ನಿಯಮವಾಗಿ ಮಾರ್ಪಟ್ಟಿದೆ. 1962ರಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ಅವರು ಗ್ರಾಹಕರ ಹಕ್ಕುಗಳ ಕುರಿತು

ಬಳಕೆದಾರರಿಗೆ ಸಂದೇಶ ನೀಡಿ, ಮೊದಲು ಅಮೇರಿಕಾದಲ್ಲಿ ನಂತರ ವಿಶ್ವದಾದ್ಯಂತ ಬಳಕೆದಾರರು ಸಂಘಟಿತರಾಗಲು ಆಂದೋಲನಕ್ಕೆ ಕರೆ ನೀಡಿದರು. ಅಂದಿನಿಂದ ಪ್ರಪಂಚದ ಎಲ್ಲಾ ಭಾಗದಲ್ಲಿ ಗ್ರಾಹಕರ ಆಂದೋಲನವು ಪ್ರಬಲವಾಗಲು ಆರಂಭವಾಯಿತು.

ಬಳಕೆದಾರರ ಹಕ್ಕುಗಳು

1. ಆರೋಗ್ಯ ಮತ್ತು ನೆಮ್ಮದಿಯ ರಕ್ಷಣೆಯ ಹಕ್ಕು :- ಮಾನವನ ಆರೋಗ್ಯಕ್ಕೆ ಅಥವಾ ಜೀವನಕ್ಕೆ ಅಪಾಯವಾಗುವಂತಹ ಅನೇಕ ಸರಕುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ. ಇಂಥಹ ವಸ್ತುಗಳ ಬಳಕೆಯಿಂದ ಆಗುವ ಅಪಾಯದ ಬಗ್ಗೆ ಗ್ರಾಹಕರಿಗೆ ಏನೂ ತಿಳಿಯದು. ಆದ್ದರಿಂದ ಅವರಿಗೆ ಇಂಥಹ ಸರಕುಗಳಿಂದ ರಕ್ಷಣೆ ಪಡೆಯುವ ಹಕ್ಕು ಇದೆ.

2. ಮಾಹಿತಿ ಪಡೆಯುವ ಹಕ್ಕು :- ಸರಕುಗಳ ಬೆಲೆ, ಗುಣಮಟ್ಟ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಪಡೆಯುವ ಹಕ್ಕು ಗ್ರಾಹಕರಿಗಿದೆ. ಸರಕುಗಳ ಬಗೆಗಿನ ಮಾಹಿತಿಯೆಂದರೆ ಅವುಗಳ ಗುಣಮಟ್ಟ, ದರ್ಜೆ, ಉಪಯೋಗಿಸುವ ವಿಧಾನ, ವಹಿಸಬೇಕಾದ ಎಚ್ಚರಿಕೆ ಇವೇ ಮೊದಲಾದವುಗಳ ಬಗ್ಗೆ ಮಾಹಿತಿಯನ್ನು ಪಡೆಯುವ ಹಕ್ಕು ಪ್ರತಿಯೊಬ್ಬ ಗ್ರಾಹಕನಿಗೂ ಇದೆ.

3. ಆಯ್ಕೆಯ ಹಕ್ಕು :- ಇಂದು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವ ಪ್ರತಿಯೊಂದು ವಸ್ತುವು ಅನೇಕ ವೈವಿಧ್ಯತೆಯನ್ನು ಪಡೆದಿರುತ್ತದೆ. ಉದಾಹರಣೆಗೆ ಸೋಪ್. ವಿಭಿನ್ನ ರೀತಿಯ ಸ್ನಾನದ ಸೋಪುಗಳು ಲಭ್ಯವಿದ್ದು ಯಾವುದು ಉತ್ತಮ ಗುಣಮಟ್ಟದ್ದು, ಯಾವುದು ಆರೋಗ್ಯಕ್ಕೆ ಉತ್ತಮ, ಯಾವುದರ ಬೆಲೆ ಯೋಗ್ಯವಾಗಿದೆ ಇವೇ ಮೊದಲಾದ ಅಂಶಗಳನ್ನು ಪರಿಶೀಲಿಸಿ ಬಳಕೆದಾರ ವಸ್ತುವನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ.

4. ತಮ್ಮ ಅತೃಪ್ತಿಯನ್ನು ನಿವೇದಿಸುವ ಹಕ್ಕು :- ಗ್ರಾಹಕನಿಗೆ ತಮ್ಮ ಅತೃಪ್ತಿ ಅಸಮಾಧಾನವನ್ನು ನಿವೇದಿಸುವ ಹಕ್ಕು ಇರುತ್ತದೆ. ಈ ಹಕ್ಕುಗಳನ್ನು ಚಲಾಯಿಸದೇ ಹೋದಲ್ಲಿ ಈ ಮೊದಲಿನ ಮೂರು ಹಕ್ಕುಗಳಿಗೆ ಯಾವುದೇ ಅರ್ಥ ಬರುವುದಿಲ್ಲ.

5. ತಮ್ಮ ಕುಂದು ಕೊರತೆಯನ್ನು ನಿವಾರಿಸಿಕೊಳ್ಳುವ ಹಕ್ಕು :- ಗ್ರಾಹಕರಿಗಾಗಿರುವ ತೊಂದರೆ, ಕುಂದು ಕೊರತೆ ಮೊದಲಾದವುಗಳನ್ನು ನಿವೇದಿಸಿ ಅವುಗಳನ್ನು ನಿವಾರಿಸಿಕೊಳ್ಳುವ ಅವಕಾಶ ವಿರಬೇಕು. ಇದು ಅವರ ಹಕ್ಕು ಎಂದು ಪರಿಗಣಿಸಬೇಕು. ಉದಾಹರಣೆಗೆ ಜಾಹಿರಾತಿನಲ್ಲಿ ಚಿತ್ರಿಸಿದ ಗುಣಮಟ್ಟವನ್ನು ಸರಕು ಹೊಂದಿಲ್ಲದೇ ಹೋದಲ್ಲಿ ಅದನ್ನು ವ್ಯಾಪಾರಸ್ಥರಿಗೆ ಹಿಂತಿರುಗಿಸಿ ಹಣವನ್ನು ಪಡೆಯುವ ಹಕ್ಕು ಗ್ರಾಹಕರಿಗೆ ಇರಬೇಕು.

6. ನೆಮ್ಮದಿಯ ಜೀವನಕ್ಕೆ ಪರಿಶುದ್ಧ ಪರಿಸರದ ಹಕ್ಕು :- ಗ್ರಾಹಕರು ನೆಮ್ಮದಿಯ ಜೀವನವನ್ನು ಸಾಗಿಸಲು ಅನುಕೂಲವಾಗುವಂತಹ ಭೌತಿಕ ಪರಿಸರವನ್ನು ಹೊಂದುವ ಹಕ್ಕು ಗ್ರಾಹಕರಿಗಿದೆ. ಕೈಗಾರಿಕೀಕರಣದ ಇಂದಿನ ಯುಗದಲ್ಲಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ಪರಿಸರದ ಮೇಲೆ ಪ್ರತಿಕೂಲ ಪರಿಣಾಮವಾಗಿ ಮಾನವನಿಗೆ ಅನೇಕ ರೀತಿಯ ರೋಗ-ರುಜಿನಾದಿಗಳು ಉದ್ಭವಿಸಿ ಮಾನವನ ಆರೋಗ್ಯದ ಮೇಲೆ ವಿಪರೀತ ಪರಿಣಾಮವಾಗಿದೆ. ಅಲ್ಲದೆ ಅವನ ಜೀವವೇ ಗಂಡಾಂತರಕ್ಕೊಳಗಾಗಿದೆ.

ಭಾರತದಲ್ಲಿ ಬಳಕೆದಾರರ ಹಿತರಕ್ಷಣೆಯ ಅವಶ್ಯಕತೆ

1. ನಮ್ಮ ರಾಷ್ಟ್ರದಲ್ಲಿ ಶೇಕಡ ೩೫ರಷ್ಟು ಮಂದಿ ಅಶಿಕ್ಷಿತರಾಗಿದ್ದಾರೆ. ಇವರನ್ನು ಶೋಷಣೆಯಿಂದ ಪಾರು ಮಾಡಲು ಗ್ರಾಹಕರ ಆಂದೋಲನ ಅಗತ್ಯವಾಗಿದೆ.

2. ವಿಶಾಲವಾದ ದೇಶವಾದ ಭಾರತದಲ್ಲಿ ರಾಷ್ಟ್ರಮಟ್ಟದಲ್ಲಿ ಬಳಕೆದಾರರನ್ನು ಸಂಘಟಿಸುವುದು ಕಷ್ಟ. ಆದ್ದರಿಂದ ಸ್ಥಳೀಯವಾಗಿ ಆಂದೋಲನವನ್ನು ಸಂಘಟಿಸಬೇಕಾಗಿದೆ.

3. ನಮ್ಮ ದೇಶದಲ್ಲಿ ಗ್ರಾಹಕರಿಗೆ ತಮ್ಮ ಕುಂದು ಕೊರತೆಯನ್ನು ನಿವೇದಿಸಲು ಅವಕಾಶವಿಲ್ಲ, ಗ್ರಾಹಕರ ಹಿತರಕ್ಷಣಾ ಸಂಸ್ಥೆಗಳು ಇಲ್ಲ.

4. ನಮ್ಮ ದೇಶದಲ್ಲಿ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವುದರಿಂದ ಅವರನ್ನು ಸಂಘಟಿಸುವುದು ಕಷ್ಟ.

5. ಬಡತನ, ಅಜ್ಞಾನ, ಅಂಧಕಾರದಲ್ಲಿ ಮುಳುಗಿರುವ ಜನ ತಮ್ಮ ಎಲ್ಲಾ ಸಂಕಷ್ಟಗಳಿಗೂ ತಮ್ಮ ಪೂರ್ವಜನ್ಮದ ಕರ್ಮವನ್ನು ದೂರುತ್ತಾರೆ.

6. ರಾಷ್ಟ್ರ ಮಟ್ಟದಲ್ಲಿ ವಸ್ತುಗಳ ಗುಣಮಟ್ಟವನ್ನು ನಿಯಂತ್ರಿಸುವ ಸಂಸ್ಥೆಗಳು ಪರಿಣಾಮ-ಕಾರಿಯಾಗಿಲ್ಲ, ಕೇವಲ ಹೆಸರಿಗೆ ಮಾತ್ರ ಇವೆ.

7. ಜಾಹಿರಾತುಗಳ ಇಂದಿನ ಯುಗದಲ್ಲಿ ಬಳಕೆದಾರರು ಅವುಗಳ ಪ್ರಭಾವಕ್ಕೆ ಒಳಪಟ್ಟು, ನಿಜವಾಗಿ ಯಾವುದು ಉತ್ತಮ ಗುಣಮಟ್ಟದ ಸರಕು ಎಂದು ಗುರುತಿಸುವಲ್ಲಿ ಗೊಂದಲಕ್ಕೆ ಒಳಗಾಗುತ್ತಿದ್ದಾರೆ.

ಬಳಕೆದಾರರಿಗೆ ರಕ್ಷಣೆ ಒದಗಿಸುವ ವಿಧಾನಗಳು

1. ಬಳಕೆದಾರರನ್ನು ಸಂಘಟಿಸುವ ಮೂಲಕ :- ಬಳಕೆದಾರರು ತಮ್ಮ ಹಿತರಕ್ಷಣೆಗಾಗಿ ಸ್ವಯಂ ಪ್ರೇರಿತರಾಗಿ ಸಂಘಟಿತರಾಗಿ ಸಾಮೂಹಿಕವಾಗಿ ಹೋರಾಡುವುದು ಒಂದು ವಿಧಾನ.

2. ವ್ಯಾಪಾರಸ್ಥರು ಸ್ವಯಂ ನಿಯಂತ್ರಿತರಾಗುವ ಮೂಲಕ :- ಇಲ್ಲಿ ಉತ್ಪಾದಕರು ಮತ್ತು ವ್ಯಾಪಾರಸ್ಥರು ಪ್ರಾಮಾಣಿಕರಾಗಿ ವ್ಯವಹಾರ ಮಾಡಲು ತಾವೇ ಸ್ವತ: ಕಂಕಣಬದ್ಧರಾಗುವುದು ಪ್ರಮುಖವಾದ ಒಂದು ವಿಧಾನವಾಗಿದೆ.

3. ಕಾನೂನಿನ ಮೂಲಕ :- ಸರ್ಕಾರ ಸೂಕ್ತವಾದ ಕಾನೂನನ್ನು ಕಾಲಕಾಲಕ್ಕೆ ಜಾರಿಗೊಳಸುವ ಮೂಲಕ ಗ್ರಾಹಕರ ಹಿತವನ್ನು ರಕ್ಷಿಸಬಹುದು.

ಸರ್ಕಾರದ ಕಾನೂನಿನ ಕ್ರಮಗಳು :

ಸ್ವಾತಂತ್ರ್ಯವನ್ನು ಪಡೆದ ನಂತರದಲ್ಲಿ ಸರ್ಕಾರ ಅನೇಕ ಕಾನೂನುಗಳನ್ನು ಜಾರಿಗೊಳಸುವ ಮೂಲಕ ಗ್ರಾಹಕರ ಹಿತವನ್ನು ರಕ್ಷಿಸುವ ಪ್ರಯತ್ನವನ್ನು ಮಾಡಿದೆ.

1. ಏಕಸ್ವಾಮ್ಯ ಮತ್ತು ಪ್ರತಿಬಂಧಿತ ವ್ಯಾಪಾರಿ ಪ್ರವೃತ್ತಿಗಳ ನಿಯಂತ್ರಣ ಕಾಯಿದೆ (MRTP) 1948. ಈ ಕಾಯಿದೆಗೆ 1991ರಲ್ಲಿ ಸೂಕ್ತ ತಿದ್ದುಪಡಿ ಮಾಡಲಾಗಿದೆ.
2. ಆಹಾರ ಕಲಬೆರಕೆ ಪ್ರತಿಬಂಧಿಸುವ ಕಾನೂನು
3. ಸರಕುಗಳ ವಿಕ್ರಯ ಕಾನೂನು
4. ವ್ಯಾಪಾರಿ ಚಿಹ್ನೆ ಮತ್ತು ಸರಕುಗಳ ಕಾನೂನು
5. ತೂಕ ಮತ್ತು ಅಳತೆಯ ಕಾನೂನು
6. ಔಷಧಿಗಳ ಮತ್ತು ಕಾಂತಿವರ್ಧಕಗಳ ಕಾನೂನು
7. ಲಾಂಛನ ಮತ್ತು ಹೆಸರುಗಳ ಕಾನೂನು
8. ಬಳಕೆದಾರರ ಹಿತರಕ್ಷಣಾ ಕಾಯಿದೆ 1986
9. ಅವಶ್ಯಕ ವಸ್ತುಗಳ ಕಾಯಿದೆ
10. ಭಾರತೀಯ ಪ್ರಮಾಣೀಕರಣ ಸಂಸ್ಥೆಗಳ ಕಾನೂನು
11. ಭಾರತೀಯ ಒಪ್ಪಂದ ಕಾನೂನು
12. ಭಾರತೀಯ ದಂಡ ಸಂಹಿತೆ
13. ಭಾರತೀಯ ದಂಡ ಸಂಹಿತೆ
14. ಬೆಲೆ ಮತ್ತು ದಾಸ್ತಾನು ಆಜ್ಞೆ
15. ಯೋಗ್ಯ ವ್ಯಾಪಾರಿ ಪ್ರವೃತ್ತಿಗಳ ಕಾನೂನು
16. ಮಾಹಿತಿ ಹಕ್ಕು ಕಾಯಿದೆ ಇತ್ಯಾದಿ.

ಹೀಗೆ ನಮ್ಮ ದೇಶದಲ್ಲಿ ಬೇರೆ ಬೇರೆ ಕಾಲಾವಧಿಯಲ್ಲಿ ವಿಭಿನ್ನ ರೀತಿಯ ಕಾಯಿದೆಯನ್ನು ಜಾರಿಗೊಳಸಿದ್ದರೂ ಸಹ, ಅವು ಪುಸ್ತಕದಲ್ಲಿ ಮಾತ್ರ ಉಳದಿವೆ. ಅವು ಪರಿಣಾಮಕಾರಿಯಾಗಿಲ್ಲ. ಇಂದು ನಾವು ಗ್ರಾಹಕರನ್ನು ವಿಭಿನ್ನ ರೀತಿಯಲ್ಲಿ ಉತ್ಪಾದಕರು, ಮಾರಾಟಗಾರರು ಶೋಷಿಸುತ್ತಿರು- ವುದನ್ನು ಕಾಣಬಹುದು. ಗುಣಮಟ್ಟದ ಹೆಸರಿನಿಂದ ಶಿಕ್ಷಣ

ಸಂಸ್ಥೆಗಳು ಸಾರ್ವಜನಿಕರನ್ನು ಶೋಷಿಸುತ್ತಿದ್ದರೂ ಈ ಕಾಯಿದೆಗಳು ಅವುಗಳ ವಿರುದ್ಧ ಕ್ರಮ ಕೈಗೊಂಡಿಲ್ಲ.

ನಮ್ಮ ದೇಶದಲ್ಲಿ ಸರ್ಕಾರ ಅನೇಕ ಕಾನೂನಿನ ಕ್ರಮಗಳನ್ನು ಜರುಗಿಸುವ ಜೊತೆಗೆ ಅನೇಕ ರೀತಿಯ ಸಂಘ ಸಂಸ್ಥೆಗಳನ್ನು ದೇಶಾದ್ಯಂತ ಹುಟ್ಟು ಹಾಕಿದೆ.

1. ಬಳಕೆದಾರರ ಹಿತರಕ್ಷಣಾ ರಾಷ್ಟ್ರೀಯ ಮಂಡಲಿ. ಇದು ರಾಷ್ಟ್ರ ಮಟ್ಟದ ಸಂಸ್ಥೆಯಾಗಿದ್ದು, ಗ್ರಾಹಕರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸುವ ಕೆಲಸ ಮಾಡುತ್ತದೆ.

2. ವಿಭಾಗೀಯ ಜಾಗೃತ ಸಮಿತಿಗಳು:- ಬಳಕೆದಾರ ಆಂದೋಲನಕ್ಕೆ ಉತ್ತೇಜನ ನೀಡಲು ಮತ್ತು ಅದನ್ನು ಬಲಪಡಿಸಲು ನಗರ-ಪಟ್ಟಣಗಳಲ್ಲಿ ಜಾಗೃತ ಸಮಿತಿಯನ್ನು ನೇಮಿಸಲಾಗಿದೆ.

3. ಅವಶ್ಯಕ ವಸ್ತುಗಳ ವಿತರಣಾ ಯೋಜನೆ :- ದೇಶದ ಬೇರೆ ಬೇರೆ ಭಾಗದಲ್ಲಿ ಸಾಮಾಜಿಕ ಕಾರ್ಯಕರ್ತರು, ಗೃಹಿಣಿಯರು ಮುಂತಾದವರು ವಿಭಿನ್ನ ರೀತಿಯ ಸಮಿತಿಯನ್ನು ರಚಿಸಿ- ಕೊಳ್ಳುವ ಅವಕಾಶ ಮಾಡಿಕೊಡಲಾಗಿದೆ.

4. ರಾಜ್ಯ ಸರ್ಕಾರಕ್ಕೆ ಸಲಹೆ, ಸೂಚನೆ :- ಕೇಂದ್ರ ಸರ್ಕಾರ, ಗ್ರಾಹಕರ ವ್ಯವಹಾರಗಳ ಇಲಾಖೆಯ ಮೂಲಕ ರಾಜ್ಯ ಸರ್ಕಾರಗಳಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತದೆ. ಇದಲ್ಲದೆ ಕೇಂದ್ರ ರಾಜ್ಯ ಸರ್ಕಾರಗಳಲ್ಲಿ ಗ್ರಾಹಕರ ವ್ಯವಹಾರವನ್ನು ನೋಡಿಕೊಳ್ಳಲು ಪ್ರತ್ಯೇಕ ಮಂತ್ರಿ ಶಾಖೆಯನ್ನು ತೆರೆಯಲಾಗಿದೆ.

ಡಾ॥ ಕೆ. ಶಿವರಾಮ ಕಾರಂತರು ಗ್ರಾಹಕರ ಆಂದೋಲನದ ಅವಶ್ಯಕತೆಯನ್ನು 'ಬಳಕೆದಾರ ತನ್ನ ಹಕ್ಕನ್ನು ತಿಳಿದಿರಬೇಕು' ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಜೆಗಳು ಕೇವಲ ಮತದಾನದ ಹಕ್ಕನ್ನು ಚಲಾಯಿಸಿ ತಮ್ಮ ಕೆಲಸ ಮುಗಿಯಿತು ಎಂಬ ಭಾವನೆಯನ್ನು ತಾಳುತ್ತಾರೆ. ಇದರಿಂದ ನಮ್ಮ ಪ್ರತಿನಿಧಿಗಳಿಂದ ಆಯ್ಕೆಯಾದ ಸರ್ಕಾರ ಯಾವ ನಿಯಂತ್ರಣವಿಲ್ಲದೆ ತನ್ನಷ್ಟಕ್ಕೆ ತಾನೆ ಕರ್ತವ್ಯ ನಿರ್ವಹಿಸಿ ಪ್ರಜೆಗಳ ಹಿತವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಇದರಿಂದಾಗಿ ಅಧಿಕಾರಿಗಳ ಮಟ್ಟದಲ್ಲಿ, ಸರ್ಕಾರದ ಮಟ್ಟದಲ್ಲಿ ಭ್ರಷ್ಟಾಚಾರ ಇಂದು ದೇಶದ ಎಲ್ಲಾ ಭಾಗದಲ್ಲೂ ತಾಂಡವವಾಡುತ್ತಲಿದೆ. ಇಂತಹ ಪರಿಸ್ಥಿತಿ ಯಿಂದಾಗಿ ಪ್ರಜೆಗಳ ಹಕ್ಕುಗಳು ಮೊಟಕುಗೊಳ್ಳುತ್ತವೆ. ಸರ್ಕಾರ ಇರಬೇಕಾದದ್ದು ಪ್ರಜೆಗಳ ಹಿತಕ್ಕಾಗಿ, ಅಂಥಹ ಪ್ರಜೆಯು ತನ್ನ ಬದುಕಿನ ಅನಿವಾರ್ಯವಾದ ಹಕ್ಕು ಇದು ಎಂದು ತಿಳಿದು ಯಾವ ಅಪೇಕ್ಷೆಯನ್ನು ಅರ್ಜಿಗಳನ್ನು ಸರ್ಕಾರಕ್ಕೆ ಸಲ್ಲಿಸಿದರೆ ಅದಕ್ಕೆ ಉತ್ತರಿಸುವ ಗೋಜಿಗೆ ಸರ್ಕಾರ ಹೋಗುವುದೇ ಇಲ್ಲ. "ಪ್ರಜೆಗಳೇ ಪ್ರಭುಗಳು" ಎಂಬ ಅಂಶವನ್ನು ಮರೆಯುತ್ತಾರೆ.

ಕಾರಂತರ ಪ್ರಕಾರ ಇಂದು ನಮ್ಮ ದೇಶದಲ್ಲಿ ಪ್ರಜೆಗಳ ಹಕ್ಕುಗಳನ್ನು ಮನ್ನಿಸುವವರೇ ಇಲ್ಲ. "ನಗರ ಅಥವಾ ಹಳ್ಳಿಯ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಪ್ರಜೆಗಳನ್ನು ಮನ್ನಿಸುವವರೇ ಇಲ್ಲ. ಸರ್ಕಾರದ ಅವಶ್ಯಕವಾದ ಹಾಗೂ ಅವಶ್ಯಕವಲ್ಲದ ವೆಚ್ಚಗಳಿಗಾಗಿ ಅವನ ಮೇಲೆ ಹೇರುವ ಪ್ರತಿಯೊಂದು ತೆರಿಗೆಗೂ ಆತ ಹೊಣೆಗಾರನಾಗುತ್ತಾನೆಯೇ ಹೊರತು, ಅವನ ಹಂಬಲ, ಅಪೇಕ್ಷೆಗಳ ವಿಚಾರದಲ್ಲಿ ಕೇಳುವವರೇ ಇಲ್ಲ". – 1

ಆದರೆ ಸಮಾಜದ ವಿಭಿನ್ನ ವರ್ಗದ ಜನ ಅಂದರೆ ಕಾರ್ಮಿಕರು ನೌಕರರು ತಮ್ಮ ಬೇಡಿಕೆಯ ಈಡೇರಿಕೆಗಾಗಿ ಸಂಪು ಮಾಡುತ್ತಾರೆ. ತಮ್ಮ ಬೇಡಿಕೆಯನ್ನು ಸರ್ಕಾರದಿಂದ ಅಥವಾ ಸಂಬಂಧಿಸಿದವರಿಂದ ಈಡೇರಿಸಿಕೊಳ್ಳುತ್ತಾರೆ. ಅಂದರೆ ಇಂಥಹ ಸಂಪುಗಳಿಂದ ಸಾಮಾನ್ಯ ಪ್ರಜೆಗಳಿಗಾಗುವ ತೊಂದರೆಯನ್ನು, ರಾಷ್ಟ್ರಕ್ಕಾಗುವ ಹಾನಿಯನ್ನು ಯಾರು ಗಮನಿಸುವುದೇ ಇಲ್ಲ. ಈ ಸಂಪಿನಿಂದ ಸಮಸ್ಯೆಗೆ ಒಳಗಾಗುವವರು ಗ್ರಾಹಕರು.

ಇಂದು ಪ್ರಪಂಚದ ಅನೇಕ ಮುಂದುವರಿದ ರಾಷ್ಟ್ರಗಳಲ್ಲಿ ಯಾವುದೇ ಪಟ್ಟಭದ್ರ ಗುಂಪಿನಿಂದ ಪ್ರಜೆಗೆ ಅನ್ಯಾಯವಾಗದಂತೆ ತಡೆಯುವ ಸಲುವಾಗಿ, ಜನತೆ ಸಾಮೂಹಿಕವಾಗಿ ಪ್ರತಿಭಟಿಸುವುದನ್ನು ನಾವು ಕಾಣುತ್ತೇವೆ. ಆದರೆ ನಮ್ಮ ದೇಶದಲ್ಲಿ ಇಂತಹ ವ್ಯವಸ್ಥೆಯನ್ನು ಕಾಣಲು ಸಾಧ್ಯವಿಲ್ಲ.

ಕಾರಂತರು ವಿವರಿಸುವಂತೆ ಬೇರೆ ಬೇರೆ ಸಂದರ್ಭದಲ್ಲಿ ತಮಗಾದ ಅನ್ಯಾಯವನ್ನು ಗ್ರಾಹಕರು ಪ್ರತಿಭಟಿಸುವ ಮನೋಭಾವನೆಯನ್ನು ಹೊಂದಬೇಕಾಗುತ್ತದೆ. ಔಷಧಿಯನ್ನು ಮಾರಾಟ ಮಾಡುವಾಗ ಮಿತಿಮೀರಿದ ಬೆಲೆಯನ್ನು, ಹಾನಿಕಾರಕಗಳ ಪ್ರಸಾರವನ್ನು ಮಾರಾಟ ಮಾಡುವಾಗ, ನಿತ್ಯದವಶ್ಯಕತೆಯಾದ ವಿದ್ಯುತ್, ಕುಡಿಯುವ ನೀರು, ಶುಚಿತ್ವ, ಸೌಕರ್ಯಗಳ ಅಭಾವ ಮುಂತಾದ ಸಂದರ್ಭದಲ್ಲಿ ಸಾಮೂಹಿಕವಾಗಿ ಪ್ರತಿಭಟಿಸಬೇಕಾಗುತ್ತದೆ.

ಲಾಭಾಸಕ್ತರಾದ ಉದ್ಯಮಿಗಳು ತಮ್ಮ ಉದ್ಯಮದಿಂದ ಉತ್ಪನ್ನಗೊಳ್ಳುವ ವಿಷವಸ್ತುವನ್ನು ನದಿಗಳಿಗೆ, ಕಡಲುಗಳಿಗೆ ಎಸೆದರೆ, ಅದರಿಂದಾಗುವ ಹಾನಿಯನ್ನು ಗಮನಿಸುವವರಿಲ್ಲ. ಪ್ರಜೆಗಳ ಸೇವೆ- ಗೆಂದು ನಿರ್ಮಾಣಗೊಂಡ ಜಲಮಂಡಲಿಗಳು, ವಿದ್ಯುನ್ಮಂಡಲಿಗಳು ಜನರ ಅವಶ್ಯಕತೆಯನ್ನು ಗಮನಿಸದೇ ನೀರನ್ನು ನಿಲ್ಲಿಸಿದರೆ, ಹೊತ್ತುಗೊತ್ತಿಲ್ಲದೆ ವಿದ್ಯುತ್ ಕಡಿತ ಮಾಡಿದರೆ, ರಾಷ್ಟ್ರೀಕೃತ ವಾಹನಗಳನ್ನು ಅಸಮರ್ಪಕವಾಗಿ ನಡೆಸಿದರೆ ಅವುಗಳಿಂದ ಪ್ರಜೆಗಳಿಗಾಗುವ ನಷ್ಟಕ್ಕೆ ಯಾರು ಹೊಣೆ. ನಮ್ಮಲ್ಲಿ ಇಂದು ವಿದ್ಯುತ್ತನ್ನು ಪೂರೈಸುವ ಸಮಯ, ವಿದ್ಯುತ್ತಿನ ಒತ್ತಡದ ಪ್ರಮಾಣ, ಅಂಕೆ ಅಳತೆಯಿಲ್ಲದೆ ವಿತರಣೆ- ಗೊಳ್ಳುತ್ತದೆ. ಇದರಿಂದ ಬಳಕೆದಾರರಿಗೆ ಆಗುವ ಹಾನಿಗೆ ಪರಿಹಾರವೇನು? ಯಾರಿಗಾಗಿ ಈ ವ್ಯವಸ್ಥೆ ? ಎಷ್ಟು ವೆಚ್ಚದಲ್ಲಿ ? ಎಂಬ ಪ್ರಶ್ನೆಯೂ ಇಲ್ಲವೇ? ಸರ್ಕಾರವು ಬೇರೆ ಬೇರೆ ಸಂದರ್ಭದಲ್ಲಿ ಯಾವ ಮುನ್ಸೂಚನೆಯನ್ನು ನೀಡದೇ ಜಲಾಶಯಗಳಿಂದ ಒಮ್ಮೆಲೇ ನೀರನ್ನು ಬಿಡುತ್ತದೆ. ಇದರಿಂದ ಪ್ರಜೆಗಳಿಗಾಗುವ ಹಾನಿಗೆ ಯಾರು ಹೊಣೆ ? ಎಂದು ಕಾರಂತರು ಪ್ರಶ್ನಿಸುತ್ತಾರೆ.

---

1. ಡಾ॥ಕೆ. ಶಿವರಾಮ ಕಾರಂತ–ಬಳಕೆದಾರ ತನ್ನ ಹಕ್ಕನ್ನು ತಿಳಿದಿರಬೇಕು, ಉದಯವಾಣಿ, ಏಪ್ರಿಲ್ 6, 1982

ಪಾಶ್ಚಾತ್ಯ ದೇಶದಲ್ಲಿ ಯಾವುದೇ ಒಂದು ಉದ್ಯಮವು ಹೊರ ಹಾಕುವ ಹಾನಿಕಾರಕ ಮಾಲಿನ್ಯ ಉಂಟಾಗಬಹುದೆಂಬ ಶಂಕೆ ಉಂಟಾದ ಕೂಡಲೇ ಜನ ಸಾಮೂಹಿಕವಾಗಿ ಪ್ರತಿಭಟಿಸುತ್ತಾರೆ. ಮಾತ್ರವಲ್ಲ ತಮ್ಮ ಹಕ್ಕುಗಳ ರಕ್ಷಣೆಗಾಗಿ ಕೋರ್ಟಿನ ಮೊರೆ ಹೋಗುತ್ತಾರೆ. ಕಲಬೆರಕೆ ಆಹಾರ ಮಾರುವುದನ್ನು, ಅಳತೆಯಲ್ಲಿ ಮೋಸ ಮಾಡುವುದನ್ನು ತಡೆಯುವ ಸಲುವಾಗಿ ನ್ಯಾಯಾಲಯಗಳಿಗೆ ಶರಣು ಹೋಗುವವರಿದ್ದಾರೆ. ತನ್ನ ಹಕ್ಕನ್ನು ಬೇರೆ ವ್ಯಕ್ತಿಗಳಾಗಲೀ, ಸರ್ಕಾರವಾಗಲೀ ಉಲ್ಲಂಘಿಸಿದರೆ, ಅಪಚಾರ ವೆಸಗಿದರೆ ಅದನ್ನು ವಿರೋಧಿಸುವ ಹಕ್ಕು ತನಗಿದೆ ಎಂದು ಪ್ರಜೆಗಳು ತಿಳಿದು ವರ್ತಿಸಬೇಕು. ಸರ್ಕಾರವನ್ನೇ ಆಗಲಿ ನಡೆಸುವವರು ಜನತೆಯ ಸುಖದು:ಖಗಳ ಕಡೆಗೆ ಗಮನಹರಿಸದೇ, ವರ್ತಿಸ ಕೂಡದು. ಸರ್ಕಾರದಿಂದಾಗಲೀ ಅದು ನಿರ್ಮಿಸಿದ ಸಂಸ್ಥೆಗಳಿಂದಾಗಲೀ ಜನರಿಗೆ ಸಾಕಷ್ಟು ನೋವು, ನಷ್ಟಗಳು ಸಂಭವಿಸಿದಾಗಲೆಲ್ಲಾ ಪ್ರಜೆಗಳು ಅದನ್ನು ಎದುರಿಸಿ ಹೋರಾಡಬೇಕು. ಒಂಟಿಯಾಗಿ ಈ ಹೋರಾಟ ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಅಷ್ಟೊಂದು ಹಣವನ್ನು ವ್ಯಯಿಸುವುದು ಕಷ್ಟವಾಗುತ್ತದೆ. ಒಮ್ಮೆ ಆತ ಅದಕ್ಕೆ ಸಿದ್ಧನಾಗಿ ವರಿಷ್ಠ ನ್ಯಾಯಾಲಯಕ್ಕೆ ಹೋದರೂ ಆಗ ಸರ್ಕಾರ ಅವನೊಬ್ಬನ ಮಟ್ಟಿಗೆ ತನ್ನ ಅತಿಕ್ರಮಣವನ್ನು ಉಪಾಯವಾಗಿ ತಪ್ಪಿಸಿ, ಜಾರಿಕೊಳ್ಳುತ್ತದೆ. ಅದು ತನ್ನ ತಪ್ಪನ್ನು ತಿದ್ದಿಕೊಳ್ಳುವ ಪ್ರಯತ್ನವನ್ನು ಮಾಡುವುದೇ ಇಲ್ಲ.

ಪ್ರಜೆಯು ತಪ್ಪು ಮಾಡಬಾರದು. ಆತ ನಿಯಮಕ್ಕೆ ಸರಿಯಾಗಿ ನಡೆದುಕೊಳ್ಳಬೇಕು. ತೆರಿಗೆಯನ್ನು ಪಾವತಿಸಬೇಕು. ಇಲ್ಲದಿದ್ದರೆ ದಂಡ ಇದೆ ಎಂದು ಹೆದರಿಸುವ ಸರ್ಕಾರ ತನ್ನ ಪಾಲಿಗೆ ಅವೇ ನ್ಯಾಯಬದ್ಧವೆಂದು ತಿಳಿದುಕೊಂಡಿರಬೇಕಾದರೆ, ಪ್ರತಿಯೊಂದು ಪ್ರದೇಶದಲ್ಲೂ ಬಳಕೆದಾರರು ಒಂದು ಗೂಡಿ, ತಮ್ಮ ಸಂಘ ಶಕ್ತಿಯನ್ನು ಬೆಳೆಸಿ, ತಮಗಾಗುತ್ತಿರುವ ಅನ್ಯಾಯವನ್ನು ತಡೆಗಟ್ಟಬೇಕು ಎಂದು ಕಾರಂತರು ಕರೆ ನೀಡುತ್ತಾರೆ. ಅಮೇರಿಕಾದಂತಹ ದೇಶಗಳಲ್ಲಿ ಇಂದು ಅನೇಕ ಸಂಘ ಸಂಸ್ಥೆಗಳು ಪ್ರಜೆಗಳ ಹಕ್ಕು ಬಾಧ್ಯತೆಗಾಗಿಯೂ, ಸರಕಾರಗಳ ನಿರಂಕುಶ ಕಾಯಿದೆಗಳಿಗೂ, ಅನ್ಯಾಯಗಳಿಗೂ ಮತ್ತಿತರ ಅಪಚಾರಗಳಿಗೂ ಎದುರಾಗಿ ಹೋರಾಡುವುದನ್ನು ನಾವು ಕಾಣುತ್ತೇವೆ. ನಮ್ಮ ದೇಶದಲ್ಲಿ ಇಂಥಹ ಸ್ಥಿತಿ ನಿರ್ಮಾಣವಾಗಬೇಕಿದೆ. ನಾವು ಸಹ ನಮ್ಮ ಪಾಲಿಗೆ ಬರುವ ಅನ್ಯಾಯಗಳಿಗೆ ಎದುರಾಗಿ ನಿಲ್ಲದೆ ಹೋದರೇ, ಸರ್ಕಾರದಿಂದಾಗುವ ಅಥವಾ ಇತರ ಪಟ್ಟಭದ್ರ ಶಕ್ತಿಗಳಿಂದಾಗುವ ಹಾದಿಯನ್ನು ಚಿರಕಾಲವು ಸಹಿಸಿಕೊಳ್ಳಬೇಕಾಗುತ್ತದೆ.

ಇಂದು ನಮ್ಮ ದೇಶದಲ್ಲಿ ಹಾಗು ಕರ್ನಾಟಕದ ಹೆಚ್ಚಿನ ಭಾಗದಲ್ಲಿ ರಸ್ತೆಗಳು ಸಂಪೂರ್ಣವಾಗ ಹದಗೆಟ್ಟಿವೆ. ರಸ್ತೆಗಳು ಮೃತ್ಯುಕೂಪಗಳಾಗಿ ಪರಿವರ್ತನೆಯಾಗಿವೆ. ಇವುಗಳ ದುರಸ್ತಿಗಾಗಿ ಪ್ರತಿವರ್ಷ ವಿಭಿನ್ನ ಯೋಜನೆಗಳ ಅಡಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದೇವೆ. ಆದರೆ ರಸ್ತೆಗಳ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ. ಇಂದು ರಿಪೇರಿ ಮಾಡಿದ ರಸ್ತೆಗಳು ನಾಳೆಯೇ ಹಾಳಾದರೆ ಅದನ್ನು ಕೇಳುವವರೇ ಇಲ್ಲ. ಹೊಸದಾಗಿ ನಿರ್ಮಿಸಿದ ಸೇತುವೆಗಳು ಉದ್ಘಾಟನೆಯಾಗುವ ಮೊದಲೇ ಬಿದ್ದರೂ ಅದನ್ನು ಯಾರೂ ಕೇಳುವವರಿಲ್ಲ. ಆದರೆ ವಾಹನ ಮಾಲಿಕರು ತೆರಿಗೆಯನ್ನು ಪಾವತಿ ಮಾಡುವುದು

ಒಂದು ದಿನ ತಡವಾದರೆ ಅವರ ಮೇಲೆ ದಂಡ ವಿಧಿಸುತ್ತಾರೆ. ಇಲ್ಲವೆ ವಾಹನವನ್ನು ಅನಾಮತ್ತುಗೊಳಿಸುತ್ತಾರೆ. ಇದಕ್ಕೆಲ್ಲ ಪರಿಹಾರವೆಂದರೆ ಗ್ರಾಹಕರು ಸಂಘಟಿತರಾಗುವುದು.

"ಪ್ರಜೆ ಪ್ರತಿಯೊಂದು ಕರಾರಿನಲ್ಲೂ, ತಾನು ಸಲ್ಲಿಸುವ ಕರ್ತವ್ಯವು ಇದೆ. ಸರ್ಕಾರದ ಯಾವುದೇ ಒಂದು ಇಲಾಖೆ, ಅವನಿಗೆ ಸಲ್ಲಿಸಬೇಕಾದ ಕರ್ತವ್ಯವೂ ಇದೆ ಎಂಬುದನ್ನು ಸಾಧಿಸಬೇಕಾದರೆ ಬಳಕೆದಾರರು ಒಗ್ಗೂಡಿ ಅದಕ್ಕಾಗಿ ಶ್ರಮಿಸಬೇಕು". – 2

ಎಲ್ಲಿಯವರೆಗೆ ಬಳಕೆದಾರ ಅಂದರೆ ಗಿರಾಕಿ, ಕೊಳ್ಳುವವ, ತೆರಿಗೆ ಕೊಡುವವರು ತಮ್ಮ ಹಕ್ಕನ್ನು ಚಲಾಯಿಸುವುದಿಲ್ಲವೊ, ಆ ಬಗ್ಗೆ ಜಾಗೃತರಾಗುವುದಿಲ್ಲವೊ, ಅಲ್ಲಿಯವರೆಗೆ ಅವರಿಗಾಗುವ ಸಾಮೂಹಿಕ ಅನ್ಯಾಯವನ್ನು ನಿವಾರಿಸಬಲ್ಲ ಸುಲಭವಾದ ಯಾವ ದಾರಿಯೂ ಇಲ್ಲ.

ಕಾರಂತರು ಹೇಳುವಂತೆ ಇಂದು ಭಾರತದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಗ್ರಾಹಕರನ್ನು ಶೋಷಿಸ ಲಾಗುತ್ತದೆ. ಮೂಲಭೂತ ಸೌಕರ್ಯಗಳಾದ ಆಹಾರವಿತರಣೆ, ಆರೋಗ್ಯ ಸೌಲಭ್ಯಗಳು, ಶಿಕ್ಷಣ, ಸಾರ್ವಜನಿಕ ಆಸ್ತಿ ಮುಂತಾದ ಎಲ್ಲಾ ವಿಷಯದಲ್ಲೂ ಗ್ರಾಹಕರ ಮೇಲೆ ದೌರ್ಜನ್ಯ ನಡೆಸಲಾಗುತ್ತದೆ. ಆದರೆ ಇಂದಿಗೂ ಸಹ ಅಂತಹ ದೌರ್ಜನ್ಯವನ್ನು ತಡೆಯಲು ಸಾಧ್ಯವಾಗಿಲ್ಲ. ದೇಶದಲ್ಲಿ ಸರ್ಕಾರದಿಂದ ರೂಪಿಸಲ್ಪಟ್ಟ ಗ್ರಾಹಕ ಸಂರಕ್ಷಣಾ ಕಾಯಿದೆಗಳು ತಮ್ಮದೇ ಆದ ಕೆಲ ಮಿತಿಗಳನ್ನು ಹೊಂದಿವೆ. ಇಲ್ಲಿ ಪರಿಹಾರಕ್ಕಾಗಿ ಅರ್ಜಿಸಲ್ಲಿಸಿದರೆ ಹತ್ತಾರು ವರ್ಷ ಕಾಯಬೇಕು. ಇದರಿಂದಾಗಿ ವ್ಯವಸ್ಥೆಯ ಮೇಲೆ ಜನತೆಯಲ್ಲಿ ನಂಬಿಕೆ ಇಲ್ಲವಾಗಿದೆ.

ಗ್ರಾಹಕರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸ, ಸರ್ಕಾರದಿಂದ ಅಥವಾ ಕಾನೂನಿನಿಂದ ಮಾಡಲು ಸಾಧ್ಯವಿಲ್ಲ. ಪ್ರತಿಯೊಬ್ಬ ಪ್ರಜೆಯಲ್ಲೂ ಈ ಬಗ್ಗೆ ಅರಿವು ಮೂಡಬೇಕಾಗಿದೆ. ಜನತೆಯಲ್ಲಿ ಜಾಗೃತಿ ಮೂಡಿಸಲು ಚಿಕ್ಕ ವಯಸ್ಸಿನಿಂದಲೇ ಅಂದರೆ ಶಾಲೆ-ಕಾಲೇಜುಗಳಲ್ಲಿ ಕಲಿಯುವಾಗಲೇ ಪಠ್ಯವಸ್ತುವನ್ನಾಗಿ ಸೇರಿಸಬೇಕು.ಈಗಾಗಲೇ ಶಾಲಾ ಕಾಲೇಜುಗಳಲ್ಲಿ ಸ್ಥಾಪನೆಯಾಗಿರುವ ಅನುಭೋಗಿಗಳ ಹಿತರಕ್ಷಣಾ ಕ್ಲಬ್‌ಗಳು ಪರಿಣಾಮಕಾರಿಯಾಗಿ ಜಾಗೃತಿಯನ್ನು ಮೂಡಿಸುವಂತೆ ಶಿಕ್ಷಣ ಸಂಸ್ಥೆಗಳು ನೋಡಿ ಕೊಳ್ಳಬೇಕು.

ಜೊತೆಗೆ ಸರ್ಕಾರ ತಾನು ರೂಪಿಸಿದ ಕಾಯ್ದೆಗಳು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿವೆ ಎಂಬುದನ್ನು ಪರಿಶೀಲಿಸಬೇಕು. ಜಾಗತೀಕರಣದ ಇಂದಿನ ದಿನಗಳಲ್ಲಿ, ಹೊಸ ಹೊಸ ಸವಾಲುಗಳನ್ನು ಗ್ರಾಹಕರು ಎದುರಿಸಬೇಕಾಗಿದೆ. ಹೊಸ ಹೊಸ ಸಮಸ್ಯೆಗಳು ಇಂದು ಹುಟ್ಟಿಕೊಳ್ಳುತ್ತಿವೆ. ಬದಲಾದ ಪರಿಸ್ಥಿತಿಗೆ ತಕ್ಕಂತೆ ಕಾನೂನುಗಳನ್ನು ಮಾಡುವ ಹೊಣೆಗಾರಿಕೆಯು ಸರ್ಕಾರದ ಮೇಲಿದೆ.

---

2. ಡಾ॥ ಕೆ. ಶಿವರಾಮ ಕಾರಂತ-ಬಳಕೆದಾರ ತನ್ನ ಹಕ್ಕು ತಿಳಿದಿರಬೇಕು, ಉದಯವಾಣಿ, ಏಪ್ರೀಲ್ 6, 1982

ಅಧ್ಯಾಯ ೯

ಉಪಸಂಹಾರ

ಆಡುಮುಟ್ಟದ ಸೊಪ್ಪಿಲ್ಲ, ಕಾರಂತರು ಕೃಷಿ ಮಾಡದ ಕ್ಷೇತ್ರಗಳಿಲ್ಲ ಎಂಬಂತೆ ಮಾನವನ ಎಲ್ಲಾ ಚಟುವಟಿಕೆಗಳ ಕುರಿತಾಗಿ ಕಾರಂತರು ಚಿಂತಿಸಿದ್ದಾರೆ. ಕಾರಂತರ ಸಾಹಿತ್ಯವು ಸಮಾಜದ ವಿಭಿನ್ನ ಮುಖಗಳನ್ನು ಓದುಗರ ಮುಂದೆ ತೆರೆದಿಡುತ್ತದೆ.

ಕೃಷಿಗೆ ಸಂಬಂಧಿಸಿದಂತೆ ಕಾರಂತರು ತಮ್ಮ ವಿಭಿನ್ನ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು, ಜಾಗತೀಕರಣದ ಇಂದಿನ ಯುಗದಲ್ಲಿಯೂ ಸಹ ಪ್ರಸ್ತುತವೆನಿಸುತ್ತವೆ. ಕೃಷಿ ಅಭಿವೃದ್ಧಿಯಾಗಬೇಕಾದರೆ ಅಂತರಾಷ್ಟ್ರೀಯ ಸ್ಪರ್ಧಾತ್ಮಕತೆಯನ್ನು ಪಡೆದು ಕೊಳ್ಳಬೇಕೆಂದು ಕಾರಂತರ ಅಭಿಪ್ರಾಯ. ಅದಕ್ಕಾಗಿ ಗುಣಮಟ್ಟವನ್ನು ಕಾಪಾಡಿಕೊಳ್ಳಲೇ ಬೇಕಾಗುವುದು. ಗುಣ ಮಟ್ಟದ ಸುಧಾರಣೆಗಾಗಿ ಆಧುನಿಕ ವಿಧಾನಗಳನ್ನು ಕೃಷಿಯಲ್ಲಿ ಅಳವಡಿಸಬೇಕಾಗುತ್ತದೆ. ಈ ವಿಷಯಗಳಿಗೆ ನಾವು ಹೆಚ್ಚು ಒತ್ತನ್ನು ನೀಡಬೇಕಾಗಿದೆ. ಇದರೊಟ್ಟಿಗೆ ಭಾರತದಲ್ಲಿ ಕೃಷಿ ಭೂಮಿಯ ವಿಸ್ತರಣೆಯ ಮೂಲಕ ಉತ್ಪಾದನೆಯನ್ನು ಹೆಚ್ಚಿಸಬಹುದು ಎಂಬ ಕಾರಂತರ ಅಭಿಪ್ರಾಯ ಪ್ರಸ್ತುತ ಅಸಾಧ್ಯವಾಗಿದೆ. ನಮ್ಮ ದೇಶದಲ್ಲಿ ಈಗಾಗಲೇ ಲಭ್ಯವಿರುವ ಕೃಷಿ ಯೋಗ್ಯ ಭೂಮಿ ಸಾಗುವಳಿಗೆ ಒಳಪಟ್ಟಿದೆ. ಇನ್ನು ಕೃಷಿ ಭೂಮಿಯ ವಿಸ್ತರಣೆ ಅಸಾಧ್ಯವಾದ ಮಾತು. ಏಕೆಂದರೆ ಜಾಗತೀಕರಣದ ಪ್ರಭಾವದಿಂದಾಗಿ ದೇಶದಲ್ಲಿ ಲಭ್ಯವಿರುವ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಬಳಸುತ್ತಿರುವುದನ್ನು ನಾವು ಕಾಣಬಹುದು.

ಆದರೆ ಕಾರಂತರು ತಿಳಿಸುವಂತೆ ನೀರಾವರಿ ಸೌಲಭ್ಯಗಳ ವಿಸ್ತರಣೆ, ಆಧುನಿಕ ಬೇಸಾಯ ಪದ್ಧತಿಯ ಅಳವಡಿಕೆ, ಸೂಕ್ತವಾದ ವಿದೇಶೀ ವ್ಯಾಪಾರ ನೀತಿಯನ್ನು ಸರ್ಕಾರ ಅಳವಡಿಸಿಕೊಳ್ಳಬೇಕು. ಅದರಂತೆ ಸಹಕಾರಿ ಬೇಸಾಯಕ್ಕೆ ಪ್ರೋತ್ಸಾಹವನ್ನು ನೀಡುವ ಮೂಲಕ ಲಭ್ಯವಿರುವ ಮಾನವ ಶಕ್ತಿ ಹಾಗೂ ಯಂತ್ರಶಕ್ತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಗ್ರಾಮೀಣ ಭಾಗದಲ್ಲಿ ಬಳಸಿಕೊಳ್ಳಲು ಅವಕಾಶವಿದೆ. ಈ ನಿಟ್ಟಿನಲ್ಲಿ ಚೀನಾದಂತಹ ರಾಷ್ಟ್ರ ಸಾಕಷ್ಟು ಪ್ರಗತಿಯನ್ನು ಸಾಧಿಸಿರುವ ನಿದರ್ಶನ ನಮ್ಮ ಮುಂದೆ ಇದೆ.

ಇತ್ತೀಚಿನ ದಿನಗಳಲ್ಲಿ ಕೃಷಿ ಕಾರ್ಮಿಕರ ಕೊರತೆಯ ಸಮಸ್ಯೆಗೆ ಯಾಂತ್ರೀಕರಣವನ್ನು ಪ್ರಮುಖ ಸಾಧನವಾಗಿ ಬಳಸಲಾಗುತ್ತಿದೆ. ಕಾರಂತರು ವಿಭಿನ್ನ ಲೇಖನಗಳಲ್ಲಿ ಪ್ರಸ್ತುತಪಡಿಸಿದಂತೆ ಕೃಷಿಯಲ್ಲಿ ಯಾಂತ್ರೀಕರಣ ಅಷ್ಟು ಸುಲಭದ ಮಾತಲ್ಲ. ಎಲ್ಲಾ ಕೃಷಿ ಚಟುವಟಿಕೆಗಳಲ್ಲಿ ಯಂತ್ರಗಳಿಂದ ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿಲ್ಲ. ಅಂದರೆ ಸಾಧ್ಯವಿರುವ ಕಡೆ ಮಾತ್ರ ಯಂತ್ರಗಳನ್ನು ಉಪಯೋಗಿಸಬಹುದು.

ಭಾರತದಲ್ಲಿ ಕೃಷಿ ವಲಯದಲ್ಲಿ ಸುಧಾರಣೆಯಾಗಬೇಕಾದರೆ ರೈತರ ಮನೋಧರ್ಮದಲ್ಲಿ ಬದಲಾವಣೆ ಅಗತ್ಯ. ಭೂಮಿ ಮತ್ತು ರೈತರ ಮಧ್ಯೆ ಭಾವನಾತ್ಮಕ ಸಂಬಂಧವಿದೆ. ಈ ಸಂಬಂಧ- ದಿಂದಾಗಿ ನಮ್ಮ ರೈತರು ಎಂತಹಾ ಕಷ್ಟ ನಷ್ಟಗಳನ್ನು ಎದುರಿಸಿಯೂ ತಮ್ಮ ಭೂಮಿಯನ್ನು ಸಾಗುವಳಿ ಮಾಡುತ್ತಿರುವುದು. ಕಾರಂತರು ಕೃಷಿಗೆ ಸಂಬಂಧಿಸಿದಂತೆ ಹೇಳಿದ ಒಂದು ಮಾತು ನಮ್ಮ ದೇಶಕ್ಕೆ ಅಕ್ಷರಶಃ ಅನ್ವಯವಾಗುತ್ತದೆ. "ಕೃಷಿ ರೈತನನ್ನು ಕೃಶಗೊಳಿಸುವ ಸಾಧನ". ಭಾರತದಲ್ಲಿ ಕೃಷಿ ಲಾಭದಾಯಕವಾಗಿಲ್ಲ. ಅತಿವೃಷ್ಟಿ, ಅನಾವೃಷ್ಟಿ ನಮ್ಮ ರೈತರನ್ನು ಬಾಧಿಸುತ್ತಿರುವ ಸಮಸ್ಯೆಗಳು.

ಶಿಕ್ಷಣದ ಮೂಲಕ ಪರಿವರ್ತನೆ ಸಾಧ್ಯ ಎಂಬುದು ಕಾರಂತರ ನಂಬಿಕೆ. ಕೃಷಿ ಕ್ಷೇತ್ರದಲ್ಲಿ ಬದಲಾವಣೆಯಾಗಬೇಕಾದರೆ ಪ್ರತಿಯೊಬ್ಬ ರೈತನು ಸೂಕ್ತ ಶಿಕ್ಷಣವನ್ನು ಪಡೆಯುವಂತಾಗಬೇಕು. ಇದರಿಂದ ವೈಜ್ಞಾನಿಕತೆಯನ್ನು ಮೈಗೂಡಿಸಿಕೊಳ್ಳುವ ಸಾಮರ್ಥ್ಯವನ್ನು ನಾವು ರೈತರಲ್ಲಿ ಕಾಣ- ಬಹುದು.

ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದ ಕಾರಂತರ ಅಭಿಪ್ರಾಯಗಳು ಒಪ್ಪಿಕೊಳ್ಳುವಂತಹದ್ದು. ಅವರು ಹೇಳುವಂತೆ ಭಾರತದಲ್ಲಿ ಬೃಹತ್ ಪ್ರಮಾಣದ ಉದ್ಯಮವನ್ನು ಸ್ಥಾಪಿಸುವುದಕ್ಕೆ ಭಾರತದಲ್ಲಿ ವಿಪುಲವಾದ ಅವಕಾಶಗಳಿದ್ದರೂ ಬಂಡವಾಳ ಕೊರತೆ, ಆಧುನಿಕ ತಂತ್ರಜ್ಞಾನದ ಕೊರತೆಯಿಂದಾಗಿ ಅವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸ್ಥಾಪನೆ ಮಾಡಲು ಸಾಧ್ಯವಾಗಿಲ್ಲ. ಬದಲಾಗಿ ನಮ್ಮಲ್ಲಿ ಸ್ಥಳೀಯವಾಗಿ ಸಿಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಗೃಹ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದರ ಮೂಲಕ ನಮ್ಮ ಕೈಗಾರಿಕಾ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಈ ಚಟುವಟಿಕೆಯನ್ನು ಕೃಷಿಗೆ ಪೂರಕವಾಗಿ ನಡೆಸುವುದರ ಮೂಲಕ ರೈತರ ಆದಾಯವನ್ನು ಸಹ ಹೆಚ್ಚಿಸಬಹುದೆಂಬ ಕಾರಂತರ ಅಭಿಪ್ರಾಯ ಸರಿಯಾಗಿದೆ ಎನ್ನಬಹುದು.

ಕಾರ್ಮಿಕ ವರ್ಗಕ್ಕೆ ಸಂಬಂಧಿಸಿದಂತೆ ಕಾರಂತರ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ಮುಷ್ಕರವನ್ನು ನಡೆಸುವುದನ್ನು ಕಾರಂತರು ಕಟುವಾಗಿ ವಿರೋಧಿಸುತ್ತಾರೆ. ಇದರಿಂದ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ ಎಂಬ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದಾದರೂ, ಮುಷ್ಕರವನ್ನು ನಡೆಸುವ ಹಂತಕ್ಕೆ ಕಾರ್ಮಿಕರನ್ನು ಕೊಂಡೊಯ್ಯುವ ಬಂಡವಾಳಶಾಹಿಗಳ ಕುರಿತಂತೆ ಕಾರಂತರು ಅನುಸರಿಸುವ ಮೃದು ಧೋರಣೆ ಆಕ್ಷೇಪಾರ್ಹವಾಗಿದೆ. ಕಾರ್ಮಿಕರು ಒತ್ತಡ ತಂತ್ರಗಳನ್ನು ಅಳವಡಿಸಿಕೊಂಡು ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳುವುದನ್ನು ಕಾರಂತರು ಆಕ್ಷೇಪಿಸುತ್ತಾರೆ. ಆದರೆ ಸರ್ಕಾರ ಕಾರ್ಮಿಕರಿಗೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ಧೋರಣೆಯನ್ನು ವಿರೋಧಿಸು- ವುದು ವಿಪರ್ಯಾಸವಾಗಿದೆ.

ಭಾರತದ ಅರ್ಥವ್ಯವಸ್ಥೆಯಲ್ಲಿ ಸೇವಾವಲಯ ಪ್ರಾಮುಖ್ಯತೆಯನ್ನು ಪಡೆದಂತಹ ವಲಯವಾಗಿದೆ. ಸೇವಾ ವಲಯದ ಅವಿಭಾಜ್ಯ ಅಂಗವಾದ ಹೋಟೆಲ್ ಉದ್ಯಮದ ಕುರಿತಂತೆ ಕಾರಂತರ ಅಭಿಪ್ರಾಯಗಳನ್ನು ಗಮನಿಸಿದಾಗ ಪಾಶ್ಚಾತ್ಯ ಹೋಟೆಲ್ ಉದ್ಯಮದಂತೆ ನಮ್ಮ ದೇಶದಲ್ಲೂ ಈ ಉದ್ಯಮವು ಶುಚಿತ್ವ, ವಿನಯ, ನಮ್ರತೆಯನ್ನು ಮೈಗೂಡಿಸಿಕೊಳ್ಳಬೇಕೆಂಬ ಅಭಿಪ್ರಾಯ ಸಮಂಜಸ ವಾಗಿದೆ. ನಮ್ಮ ದೇಶದಲ್ಲಿ ಸೇವಾ ಮನೋಭಾವದಿಂದ ವರ್ತಿಸುವ ಉದ್ದಿಮೆಗಳು ಇಂದಿನ ಅಗತ್ಯವಾಗಿದೆ. ಕೇವಲ ಹಣ ಗಳಿಸುವ ಉದ್ದೇಶ ಮಾತ್ರ ಹೊಂದದೇ ಗ್ರಾಹಕರಿಗೆ ಉತ್ತಮ ಸೌಲಭ್ಯವನ್ನು ಸಹ ನೀಡಬೇಕೆಂಬುದು ಪ್ರತಿಯೊಬ್ಬ ಗ್ರಾಹಕನ ಆಶಯವಾಗಿದೆ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡದ ಹೋಟೆಲ್ ಉದ್ದಿಮೆಗಳು ಸಾಕಷ್ಟು ಮುಂಚೂಣಿಯಲ್ಲಿರುವುದನ್ನು ನಾವು ಕಾಣಬಹುದು. ಸಾಕಷ್ಟು ಪೈಪೋಟಿಯನ್ನು ಎದುರಿಸುತ್ತಿರುವ ಹೋಟೆಲ್ ಉದ್ದಿಮೆಗಳ ಮಧ್ಯೆ ದಕ್ಷಿಣ ಕನ್ನಡದ 'ಕಾಮತ್ ಹೋಟೆಲ್', 'ಉಡುಪಿ ಬ್ರಾಹ್ಮಣರ ಹೋಟೆಲ್' ಇತ್ಯಾದಿಗಳು ಸಾಕಷ್ಟು ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡಿವೆ ಎನ್ನಬಹುದು.

ಅದರಂತೆ ಬಂಡವಾಳದ ಅಗತ್ಯತೆಯ ಬಗ್ಗೆ ಕಾರಂತರು ಅರ್ಥಶಾಸ್ತ್ರಜ್ಞರಂತೆ ಮಾರ್ಮಿಕವಾಗಿ ನುಡಿದಿರುವುದು ಅಭಿನಂದನೀಯ. ಬಂಡವಾಳವಿಲ್ಲದೆ ಯಾವುದೇ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಬಂಡವಾಳದ ಕ್ರೋಢೀಕರಣಕ್ಕಾಗಿ ನಮ್ಮ ದೇಶದಲ್ಲಿ ಸರ್ಕಾರ ಅನುಸರಿಸಬೇಕಾದ ನೀತಿಯ ಬಗ್ಗೆ ಮಾರ್ಗೋಪಾಯಗಳ ಬಗ್ಗೆ ಸೂಕ್ತ ನೀತಿಯನ್ನು ಪ್ರತಿಪಾದಿಸಿದ್ದಾರೆ.

ಬಡತನ, ನಿರುದ್ಯೋಗ ಮಾನವ ಜನಾಂಗಕ್ಕೆ ತಗುಲಿದ ಶಾಪ. ಬಡತನ ಮತ್ತು ನಿರುದ್ಯೋಗದ ಮಧ್ಯೆ ನೇರವಾದ ಸಂಬಂಧವಿದೆ. ಭಾರತದಲ್ಲಿ ನಿರುದ್ಯೋಗವನ್ನು ನಿವಾರಿಸಿ ಆರ್ಥಿಕ ಚಟುವಟಿಕೆ ಯನ್ನು ವಿಸ್ತರಿಸುವ ಅಗತ್ಯತೆಯ ಬಗ್ಗೆ ಕಾರಂತರು ಸೂಕ್ತ ನಿಲುವನ್ನು ಹೊಂದಿದ್ದರು. ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ತಿಳಿಸಿದಾಗ ಮಾತ್ರ ಈ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದು.

ಡಾ|| ಶಿವರಾಮ ಕಾರಂತರು ತಮ್ಮ ಲೇಖನಗಳಲ್ಲಿ ಪ್ರಸ್ತಾಪಿಸಿದ ಮತ್ತೊಂದು ಪ್ರಮುಖ ಅಂಶ ಗ್ರಾಹಕರ ಆಂದೋಲನ. ಗ್ರಾಹಕರು ಜಾಗೃತರಾದಾಗ ಮಾತ್ರ ನಮ್ಮ ರಾಜಕೀಯ ವ್ಯವಸ್ಥೆ ಶುದ್ಧವಾದೀತು. ಗ್ರಾಹಕ ವಸ್ತುಗಳನ್ನು ಕೊಂಡುಕೊಳ್ಳುವಾಗ ತಾನು ವಸ್ತುವಿಗೆ ನೀಡುವ ಬೆಲೆಯ ಪ್ರಮಾಣ ಅದರ ಗುಣಮಟ್ಟ, ಬೇರೆ ಬೇರೆ ಮಾರುಕಟ್ಟೆಯಲ್ಲಿ ಅವುಗಳ ಬೆಲೆ, ಇತ್ಯಾದಿಗಳ ಬಗ್ಗೆ ಅರಿವನ್ನು ಹೊಂದಿರುವುದು ತೀರಾ ಅಗತ್ಯವಾಗಿದೆ. ಕಾರಂತರ ಪ್ರಕಾರ ಗ್ರಾಹಕರ ವ್ಯಾಜ್ಯ ಇತ್ಯಾದಿಗಳು ವಸ್ತುಗಳ ಕ್ರಯ ವಿಕ್ರಯಕ್ಕೆ ಮಾತ್ರ ಸಂಬಂಧಪಡದೇ ಸೇವೆಗಳ ಕ್ಷೇತ್ರಕ್ಕೂ ಸಹ ವಿಸ್ತರಿಸುವ ಅಗತ್ಯವನ್ನು ಒತ್ತಿ ಹೇಳುತ್ತಾರೆ.

ಇಂದು ಜಾಗತೀಕರಣದ ಪ್ರಭಾವದಿಂದಾಗಿ, ದೇಶೀಯ ಮಾರುಕಟ್ಟೆಗೆ ವಿದೇಶದಿಂದ ದೊಡ್ಡ ಪ್ರಮಾಣದ ವಸ್ತುಗಳು ಆಮದಾಗುತ್ತಿವೆ. ಮಾಧ್ಯಮಗಳು ಬಿತ್ತರಿಸುವ ಜಾಹಿರಾತುಗಳಿಗೆ

ಮರುಳಾಗಿ ಗ್ರಾಹಕ ಅವುಗಳ ಗುಣಮಟ್ಟವನ್ನು ಅರಿಯದೇ ಕೊಂಡುಕೊಳ್ಳುತ್ತಿದ್ದಾನೆ. ಇಂತಹ ಸನ್ನಿವೇಶದಲ್ಲಿ ಕಾರಂತರ ಅಭಿಪ್ರಾಯಗಳು ಪ್ರಸ್ತುತವೆನಿಸುತ್ತವೆ. ಇಂದು ಗುಣಮಟ್ಟದ ಹೆಸರಿನಲ್ಲಿ ಶಿಕ್ಷಣ ಕ್ಷೇತ್ರ ಸಂಪೂರ್ಣವಾಗಿ ಖಾಸಗೀಕರಣದತ್ತ ವಾಲುತ್ತಿದೆ. ಅದರಲ್ಲೂ ಮುಖ್ಯವಾಗಿ ಖಾಸಗಿಯವರ ಪ್ರಾಬಲ್ಯ ಹೆಚ್ಚುತ್ತಿದೆ. ಇಂತಹ ಸನ್ನಿವೇಶದಲ್ಲಿ ಗ್ರಾಹಕರು ಜಾಗೃತರಾಗಿದ್ದರೆ ಮಾತ್ರ ಶೋಷಣೆಯ ಪ್ರಮಾಣವನ್ನು ನಿಯಂತ್ರಿಸಬಹುದು.

ಒಟ್ಟಾರೆಯಾಗಿ ಹೇಳುವುದಾದರೆ ಇದುವರೆಗೆ ಕಾರಂತರನ್ನು ಕೇವಲ ಸಾಹಿತಿಯೆಂದು ಗುರುತಿಸಿ- ದವರೇ ಹೆಚ್ಚು. ಆದರೆ ಜೀವನದ ವಿಭಿನ್ನ ಕ್ಷೇತ್ರಗಳಿಗೆ ಅವರು ನೀಡಿದ ಕೊಡುಗೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅದರಂತೆ ಕಾರಂತರು ಅರ್ಥಶಾಸ್ತ್ರವೆಂಬ ಸಾಮಾಜಿಕ ವಿಜ್ಞಾನದ ಬೆಳವಣಿಗೆಗೂ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ ಎಂಬ ಅಂಶ ಅವರ ವಿಭಿನ್ನ ಲೇಖನಗಳ ಅಧ್ಯಯನದಿಂದ ತಿಳಿಯುತ್ತದೆ. ಕಾರಂತರು ತಮ್ಮ ಲೇಖನಗಳಲ್ಲಿ ವ್ಯಕ್ತಪಡಿಸಿದ ಶ್ರಮ ವಿಭಜನೆ, ಮುಕ್ತ ವ್ಯಾಪಾರದ ಅಭಿಪ್ರಾಯವನ್ನು ವೈಜ್ಞಾನಿಕ ಚೌಕಟ್ಟಿನಿಂದ ವಿಶ್ಲೇಷಿಸಿದರೆ, ಭಾರತದಂತಹ ರಾಷ್ಟ್ರ ಎದುರಿಸುತ್ತಿರುವ ಬಡತನ, ನಿರುದ್ಯೋಗ, ಕೃಷಿ ಕ್ಷೇತ್ರದ ಉಪೇಕ್ಷೆ ಮುಂತಾದ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಿದೆ.

ಆಕರ ಗ್ರಂಥ

ಮಾಲಿನಿ ಮಲ್ಯ ಬಿ. ಶಿವರಾಮ ಕಾರಂತರ ಲೇಖನಗಳು, ಸಂಪುಟ – ೩, ಮಂಗಳೂರು ವಿಶ್ವವಿದ್ಯಾನಿಲಯ-1995

1. ಭದ್ರಾವತಿಯ ಕಬ್ಬಿಣ ಮತ್ತು ಬಟ್ಟೆ ಕಾರ್ಖಾನೆ
2. ನೇಗಿಲ ಯೋಗಿ
3. ದನವೇ ಧನ
4. ಗಿರಾಕಿ ಮಾತ್ರ ಗಿರ್ಕಿ
5. ನಮ್ಮ ಜಿಲ್ಲೆಯ ಸಂಪತ್ತಿನ ಅಭಿವೃದ್ಧಿ–ಸಾಹಸೋದ್ಯಮಗಳ ಅವಶ್ಯಕತೆ.
6. ಬಂಡವಾಳಗಾರಿಕೆಗೂ, ಸಂಪೂರ್ಣ ಸ್ವಾಮ್ಯಕ್ಕೂ ಮಧ್ಯಮ ಮಾರ್ಗ.
7. ಜಪಾನಿನ ಕೈಗಾರಿಕೆಗಳು
8. ರೈತನಿಗಾಗಿ.
9. ಆಗ್ನೇಯ ಏಷ್ಯಾದ ಬಡತನದ ಸಮಸ್ಯೆ.
10. ನಮ್ಮ ಸಂಪತ್ಸಮೃದ್ಧಿ.
11. ದಕ್ಷಿಣ ಕನ್ನಡದ ಸಮಸ್ಯೆಗಳು.
12. ಮಲೆನಾಡಿನ ಸಮಸ್ಯೆಗಳು.
13. ಕಳ್ಳ ಹಣವೋ, ಕಳ್ಳ ಸಂತೆಯ ಹಣವೋ ?
14. ಹಣದ ಬೆಲೆ ತಗ್ಗಿದರೂ.
15. ಸಂಪತ್ತಿನ ಮಡಿಲಲ್ಲಿ.
16. ಉದ್ಯೋಗಾವಕಾಶ ಕಲ್ಪಿಸಲು.
17. ಪಾಶ್ಚಾತ್ಯರ ಸ್ವಸೇವಾ ಉಪಹಾರಗೃಹಗಳು.
18. ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್ ಉದ್ಯಮಕ್ಕೆ ಸಲ್ಲಿಸಿದ ಕಾಣಿಕೆ.
19. ಬಳಕೆದಾರ ತನ್ನ ಹಕ್ಕನ್ನು ತಿಳಿದಿರಬೇಕು.

ಪರಾಮರ್ಶನ ಗ್ರಂಥಗಳು

1. ಅಶೋಕ್ ಟಿ.ಪಿ – ಕಾರಂತ ಮಂಥನ, ಕರ್ನಾಟಕ ಸಂಘ, ಪುತ್ತೂರು – 1994

2. ಅಬ್ದುಲ್ ಅಜೀದ್, ವಾಸುಕಿ ಕೆ.ಸಿ. – ಕರ್ನಾಟಕದ ಆರ್ಥಿಕತೆ. ಪ್ರಸಾರಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ, ಕಮಲಾಪುರ. – 1997

3. ಇನಾಂದಾರ್ ವಿ.ಎಂ. – ಶಿವರಾಮ ಕಾರಂತರ ಬದುಕು – ಬರಹ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ – 1978

4. ಕೃಷ್ಣಮೂರ್ತಿ ಹೆಚ್.ಆರ್. – ಭಾರತದ ಆರ್ಥಿಕ ವ್ಯವಸ್ಥೆ, ಬೆಂಗಳೂರು – 2007-08

5. ಬಸವಾ ಕೆ.ಡಿ. – ವಿದ್ಯಾವಾಹಿನಿ ಪ್ರಕಾಶನ, ಗದಗ್ ರೋಡ್, ಹುಬ್ಬಳ್ಳಿ – 1991

6. ಮಾಲಿನಿ ಮಲ್ಯ – ಶಿವರಾಮ ಕಾರಂತರ ಲೇಖನಗಳು ಸಂಪುಟ –6, ಐತಿಹಾಸಿಕ ರಾಜಕೀಯ ಮತ್ತು ಆರ್ಥಿಕ ವಿಚಾರಗಳು

7. Agarwal A.N. - Indian Economy problems of development and planning. Wishwa Prakashana, Division of new age international Pvt Ltd, Publisher Dehli - 1996

8. Rudra Datta Sundaram K.P.M. Indian Economy. S.Chand and Company Ltd, 7361, Ramnagar, New Delhi, 2006

9. Joe Moran : INTERDISCIPLINARITY : Simultaneaously published by Routledge -2007

